ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 30 ಶುಕ್ರವಾರ 2026

46

ಮೈಸೂರು ಸುದ್ದಿ: ದೂರವಾಣಿ:
2496520/21/26/27/28 ಜಾಹೀರಾತು:
2496522/23 ನಗರ ಕಚೇರಿಗಳು: ಕೆ.ಆರ್.ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774,
ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325,
ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 281

ಪುಟಗಳು: 12

₹4

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com,
website: www.mysurumithra.com

ಪ್ರಧಾನಿ ಮೋದಿ–ಮಾಜಿ ಪ್ರಧಾನಿ ದೇವೇಗೌಡರ ಸೌಜನ್ಯ ಭೇಟಿ

ಗೌಡರ ಭೇಟಿ ಕ್ಷಣ ಸಂಭ್ರಮದಿಂದ ಹಂಚಿಕೊಂಡ ಮೋದಿ

ನವದೆಹಲಿ: ಸಂಸತ್ತಿನ ಬಜೆಟ್ ಅಧಿವೇಶನದ ನಡುವೆಯೇ ಪ್ರಧಾನಿ ನರೇಂದ್ರ ಮೋದಿ ಅವರು ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ವರಿಷ್ಠರಾದ ಹೆಚ್.ಡಿ.ದೇವೇಗೌಡ ಅವರನ್ನು ಭೇಟಿ ಮಾಡಿ, ಮಹತ್ವದ ಚರ್ಚೆ ನಡೆಸಿದ್ದಾರೆ.

ಈ ಭೇಟಿಯ ಕುರಿತು ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ ಫೋಟೋಗಳನ್ನು ಹಂಚಿಕೊಂಡಿರುವ ಪ್ರಧಾನಿ ಮೋದಿ, ದೇವೇಗೌಡರ ಬಗ್ಗೆ ಅಪಾರ ಗೌರವ ವ್ಯಕ್ತಪಡಿಸಿದ್ದಾರೆ. ಹೆಚ್.ಡಿ. ದೇವೇಗೌಡ ಅವರೊಂದಿಗೆ ಸಂವಾದ ನಡೆಸಲಾಯಿತು. ಪ್ರಮುಖ ವಿಷಯಗಳ ಕುರಿತು ಅವರಿಗಿರುವ ದೃಷ್ಟಿಕೋನ ಮತ್ತು ಅನುಭವಗಳು ಗಮನಾರ್ಹವಾಗಿವೆ. ಭಾರತದ ಅಭಿವೃದ್ಧಿಯ ಬಗ್ಗೆ ಅವರಿಗಿರುವ ಉತ್ಸಾಹವು ನಿಜಕ್ಕೂ ಪ್ರಶಂಸನೀಯ ಎಂದು ಮೋದಿ ಬಣ್ಣಿಸಿದ್ದಾರೆ.

ಅಧಿಕೃತವಾಗಿ ಇದನ್ನು ಸೌಜನ್ಯದ ಭೇಟಿ ಎಂದು ಕರೆಯಲಾಗಿದ್ದರೂ, ಮೂಲಗಳ ಪ್ರಕಾರ ಈ ಭೇಟಿಯಲ್ಲಿ ಕೆಲವು ನಿರ್ಣಾಯಕ ವಿಷಯಗಳು ಚರ್ಚೆಯಾಗಿವೆ ಎನ್ನಲಾಗುತ್ತಿದೆ. ಈ ವೇಳೆ ಕರ್ನಾಟಕದ ಮೇಕೆದಾಟು ಮತ್ತು ಮಹದಾಯಿ ಯೋಜನೆಗಳಿಗೆ ಕೇಂದ್ರ ಸರ್ಕಾರದ ಸಹಕಾರ ಕುರಿತು ದೇವೇಗೌಡರು ಪ್ರಸ್ತಾಪಿಸಿದ್ದಾರೆ. ಹಾಸನದಲ್ಲಿ ಐಐಟಿ ಸ್ಥಾಪನೆ ಕುರಿತು ದಶಕಗಳ ಬೇಡಿಕೆಯನ್ನು ಈಡೇರಿಸುವಂತೆ ಮನವಿ ಮಾಡಿದ್ದಾರೆ ಎನ್ನಲಾಗಿದೆ. ಪ್ರಧಾನಿ ಹಾಗೂ ಮಾಜಿ ಪ್ರಧಾನಿ ಭೇಟಿಯಲ್ಲಿ ರಾಜ್ಯ ಹಾಗೂ ರಾಷ್ಟ್ರ ರಾಜಕಾರಣದ ಹಲವು ಪ್ರಮುಖ ವಿಷಯಗಳ ಬಗ್ಗೆಯೂ ಗಹನವಾದ ಚರ್ಚೆ ನಡೆದಿದೆ. ಕರ್ನಾಟಕದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯನ್ನು ಇನ್ನಷ್ಟು ಗಟ್ಟಿಗೊಳಿಸುವ ವಿಚಾರವನ್ನೂ ಪ್ರಮುಖವಾಗಿ ಚರ್ಚಿಸಲಾಗಿದೆ ಎಂದು ತಿಳಿದುಬಂದಿದೆ.



ಪ್ರಧಾನಿ ನರೇಂದ್ರ ಮೋದಿ ಹಾಗೂ ಹೆಚ್.ಡಿ.ದೇವೇಗೌಡರ ಆತ್ಮೀಯ ಮಾತುಕತೆ.

ಹಿರಿಯ ಚೇತನಕ್ಕೆ ಬಹುಪರಾಕ್

ಹೆಚ್.ಡಿ.ದೇವೇಗೌಡರಿಗೆ 93 ವರ್ಷ. ಇತ್ತೀಚೆಗೆ ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದು, ವಾರಕ್ಕೆ ಮೂರು ಬಾರಿ ಡಯಾಲಿಸಿಸ್ ಮಾಡಿಸಿಕೊಳ್ಳುತ್ತಿದ್ದಾರೆ. ಆದರೂ ಅವರು ಬಜೆಟ್ ಅಧಿವೇಶನಕ್ಕೆಂದು ದೆಹಲಿಗೆ ತೆರಳಿದ್ದಾರೆ. ದೈಹಿಕ ಅನಾರೋಗ್ಯವನ್ನು ಲೆಕ್ಕಿಸದೆ ದೇಶದ ಪ್ರಗತಿಯ ಬಗ್ಗೆ ಆಸಕ್ತಿ ತೋರುತ್ತಿರುವುದು ಪ್ರಧಾನಿಯವರ ಮೆಚ್ಚುಗೆಗೆ ಪಾತ್ರವಾಗಿದೆ. ಇಳಿ ವಯಸ್ಸಿನಲ್ಲೂ ಸ್ಮರಣ ಶಕ್ತಿ ಹೊಂದಿರುವ ಗೌಡರ ಬದ್ಧತೆ, ದೇಶದ ಅಭಿವೃದ್ಧಿ ಬಗ್ಗೆ ಹೊಂದಿರುವ ಕನಸುಗಳು ಯುವಕರಿಗೆ ಮಾದರಿ ಎಂದು ಸಂಸತ್ ಅಂಗಳದಲ್ಲಿ ಮೆಚ್ಚುಗೆ ನುಡಿಗಳು ಕೇಳಿಬಂದಿವೆ.

ಸಕಾಲದಲ್ಲಿ ಚಿಕಿತ್ಸೆ ಪಡೆದು ಕುಷ್ಠರೋಗ ಮುಕ್ತ ಭಾರತ ನಿರ್ಮಾಣಕ್ಕೆ ಕೈಜೋಡಿಸಿ

ಡಿಸಿ ಲಕ್ಷ್ಮೀಕಾಂತರೆಡ್ಡಿ ಕರೆ



ಮೈಸೂರು ಜಿಪಂ ಸಭಾಂಗಣದಲ್ಲಿ ಕುಷ್ಠರೋಗ ಜಾಗೃತಿ ಅಭಿಯಾನದ ಪೋಸ್ಟರ್ ಅನ್ನು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ ಬಿಡುಗಡೆ ಮಾಡಿದರು.

ಮೈಸೂರು, ಜ.29(ಎಂಕೆ)– ಸಕಾಲದಲ್ಲಿ ಚಿಕಿತ್ಸೆ ಪಡೆದು ಕುಷ್ಠರೋಗ ಮುಕ್ತ ಭಾರತ ನಿರ್ಮಾಣಕ್ಕೆ ಸಾರ್ವಜನಿಕರು ಕೈ ಜೋಡಿಸಬೇಕು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ ಕರೆ ನೀಡಿದರು.

ಮೈಸೂರು ಜಿಪಂ ಸಭಾಂಗಣದಲ್ಲಿ ಕುಷ್ಠರೋಗ ಜಾಗೃತಿ ಅಭಿಯಾನದ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಕುಷ್ಠರೋಗವು ಸಾಂಕ್ರಾಮಿಕ ರೋಗಗಳಲ್ಲಿ ಒಂದಾಗಿದ್ದು, ಕೆಮ್ಮಿದಾಗ ಮತ್ತು ಸೀನಿದಾಗ ಒಬ್ಬರಿಂದ ಒಬ್ಬರಿಗೆ ಹರಡಲು ಕಾರಣವಾಗುತ್ತದೆ. ಕುಷ್ಠರೋಗವು ಸಂಪೂರ್ಣವಾಗಿ ಗುಣಮುಖವಾಗುವ ಖಾಯಿಲೆಯಾಗಿದ್ದು, ಸಕಾಲದಲ್ಲಿ ಚಿಕಿತ್ಸೆ ಪಡೆಯುವುದು ಮುಖ್ಯವಾಗಿದೆ ಎಂದರು.

ಕುಷ್ಠರೋಗ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕಿದೆ. ಮಹಾತ್ಮ ಗಾಂಧೀಜಿಯವರ ಕನಸಾದ ಕುಷ್ಠರೋಗ ಮುಕ್ತ ಭಾರತವನ್ನು ನಿರ್ಮಿಸಲು ಎಲ್ಲರೂ ಕೈಜೋಡಿಸಿ ಸಮಾಜದಲ್ಲಿ ಕುಷ್ಠ ರೋಗದ ಬಗ್ಗೆ ಇರುವ ಕಳಂಕ ಮತ್ತು ತಾರತಮ್ಯ ಹೋಗಲಾಡಿಸುವಂತೆ ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸಿ.ಪಿ.ಕುಮಾರ ಸ್ವಾಮಿ ಮಾತನಾಡಿ, ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿ ಮನೆ ಮನೆಗೆ ಆಶಾ ಕಾರ್ಯಕರ್ತೆಯರು, ಆರೋಗ್ಯ ಕಾರ್ಯಕರ್ತರು ಭೇಟಿ ನೀಡಿ ಕುಷ್ಠರೋಗದ ಕುರಿತು ಜಾಗೃತಿ ಮೂಡಿಸಿ, ಸಂಶಯಾಸ್ಪದ ಪ್ರಕರಣಗಳನ್ನು ಶೀಘ್ರ ಪತ್ತೆ ಹಚ್ಚಿ ಸೂಕ್ತ ಸಮಯಕ್ಕೆ ಚಿಕಿತ್ಸೆಗೆ ಒಳಪಡಿಸುವಂತೆ ತಿಳಿಸಿದರು.

ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ಜಿ.ಬೃಂದಾ ಮಾತನಾಡಿ, ಕುಷ್ಠರೋಗವು ಮೈಕೋಬ್ಯಾಕ್ಟಿರಿಯಾ ಲೆಪ್ರೆ ಎಂಬ ಸೂಕ್ಷ್ಮಾಣುವಿನಿಂದ ಬರುವ ಖಾಯಿಲೆಯಾಗಿದ್ದು, ಮುಖ್ಯ ವಾಗಿ ಚರ್ಮ ಮತ್ತು ನರಗಳ ಮೇಲೆ ಪ್ರಭಾವ ಬೀರುತ್ತದೆ. ಸಮುದಾಯದಲ್ಲಿ ರುವ ರೋಗಿಗಳು ಕೆಮ್ಮಿದಾಗ ಮತ್ತು ಸೀನಿದಾಗ ಕುಷ್ಠರೋಗಾಣುಗಳು ಒಬ್ಬರಿಂದ ಒಬ್ಬರಿಗೆ ಹರಡಲು ಕಾರಣವಾಗುತ್ತದೆ. ದೇಹದ ಮೇಲಿನ ತಿಳಿ ಬಳಿ ಅಥವಾ ತಾಮ್ರ ಬಣ್ಣದ ಮಚ್ಚೆಗಳು, ಕೈ ಅಥವಾ ಕಾಲುಗಳಲ್ಲಿ ಸ್ಪರ್ಶ ಜ್ಞಾನವಿಲ್ಲದಿರುವುದು ಜೋಮು ಹಿಡಿಯುವುದು ಕುಷ್ಠರೋಗದ ಲಕ್ಷಣಗಳಾಗಿವೆ ಎಂದು ಎಚ್ಚರಿಸಿದರು.

ಉಚಿತ ಚಿಕಿತ್ಸೆ: ಕುಷ್ಠರೋಗವು ಸಂಪೂರ್ಣವಾಗಿ ಗುಣಮುಖವಾಗುವ ಖಾಯಿಲೆಯಾಗಿದ್ದು, ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ಲಭ್ಯವಿದೆ. ಕುಷ್ಠರೋಗದ ಬಗ್ಗೆ ಉದಾಸೀನ ಮಾಡಿದರೆ ಅಂಗ ವಿಕಲತೆ ಖಚಿತವಾಗಿದ್ದು, ಎಚ್ಚರಿಕೆ ವಹಿಸುವುದು ಮುಖ್ಯವಾಗಿದೆ ಎಂದರು.

ಆರ್‌ಸಿಹೆಚ್ ಅಧಿಕಾರಿ ಡಾ.ಸಿರಾಜ್ ಅಹಮದ್, ಸಹಾಯಕ ಸಾಂಖ್ಯಿಕ ಅಧಿಕಾರಿ ಅನಿಲ್ ಕ್ರಿಸ್ಟಿ, ಫಿಜಿಯೋಥೆರಪಿಸ್ಟ್ ಡಾ.ಆರ್.ಟಿ.ಶೃತಿ, ಸಾಂಕ್ರಾಮಿಕ ರೋಗ ಶಾಸ್ತ್ರಜ್ಞೆ ಡಾ.ಕವಿತ, ಕಾರ್ಯಕ್ರಮ ವ್ಯವಸ್ಥಾಪಕಿ ಟಿ.ಪೂಜಾ, ಆರೋಗ್ಯ ನಿರೀಕ್ಷಣಾಧಿಕಾರಿ ಜಿ.ಎಸ್.ಸುಮಂತ, ಅರೆ ವೈದ್ಯಕೀಯ ಕಾರ್ಯಕರ್ತ ಜೆ.ಮಹೇಶ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಸೆಸ್ಕ್ ಪ್ರಧಾನ ಕಚೇರಿಯಲ್ಲಿ ಸಂಭ್ರಮದ ಕನ್ನಡ ಉತ್ಸವ

ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್‌ರಾಜು ನೇತೃತ್ವದಲ್ಲಿ ನುಡಿಹಬ್ಬ



ಮೈಸೂರಿನ ವಿಜಯನಗರ ಎರಡನೇ ಹಂತದಲ್ಲಿರುವ ಸೆಸ್ಕ್‌ನ ಪ್ರಧಾನ ಕಚೇರಿಯಲ್ಲಿ ನಡೆದ 'ಕನ್ನಡ ಉತ್ಸವ–2025' ಸಮಾರಂಭದಲ್ಲಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್‌ರಾಜು ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಜ.29(ಎಂಟಿವೈ)– ಮೈಸೂರಿನ ವಿಜಯನಗರ ಎರಡನೇ ಹಂತದಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಚಾವಿಸನಿನಿ) ಪ್ರಧಾನ ಕಚೇರಿಯಲ್ಲಿ ನಡೆದ 'ಕನ್ನಡ ಉತ್ಸವ–2025'ರಲ್ಲಿ ಸಿಬ್ಬಂದಿ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡುವ ಮೂಲಕ ಗಮನ ಸೆಳೆದರು.

ಕನ್ನಡ ಉತ್ಸವದಲ್ಲಿ ಗಾಯನ, ನೃತ್ಯ, ಕಿರುನಾಟಕ ಸೇರಿದಂತೆ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ದಿನನಿತ್ಯದ ಕೆಲಸದ ಒತ್ತಡದ ನಡುವೆ ಕೆಲಕಾಲ ಸಂಭ್ರಮಿಸಿದರು.

ಕಾರ್ಯಕ್ರಮದಲ್ಲಿ ಏರ್ಪಡಿಸಿದ್ದ ಆಹಾರ ಮೇಳದಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ, ಒಲೆರಹಿತವಾಗಿ ಹಲವು ಬಗೆಯ ತಿಂಡಿ ತಿನಿಸು ತಯಾರಿಸಿ ಗಮನ ಸೆಳೆದರು. ಅಲ್ಲದೆ, ರಂಗೋಲಿ ಸ್ಪರ್ಧೆ, ಕೇರಂ, ರಸಪ್ರಶ್ನೆ, ಮೊಬೈಲ್ ಫೋಟೋಗ್ರಫಿ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನು ನಿಗಮದ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಮುನಿಗೋಪಾಲ್ ರಾಜು ಉದ್ಘಾಟಿಸಿ ಮಾತನಾಡಿ, ಕನ್ನಡದ ಹಬ್ಬವನ್ನು ಕೇವಲ ನವೆಂಬರ್ ತಿಂಗಳಿಗೆ ಮೀಸಲಿಡದೆ, ಪ್ರತಿನಿತ್ಯ ಆಚರಿಸಬೇಕು. ಕನ್ನಡ ನಮ್ಮ ಮಾತೃಭಾಷೆ ಎಂಬುದು ಹೆಮ್ಮೆಯ ಸಂಗತಿಯಾಗಿದೆ. ಕೆಲಸದ ಒತ್ತಡದ ನಡುವೆ ನಮ್ಮಲ್ಲಿರುವ ಪ್ರತಿಭೆಗಳನ್ನು ಗುರುತಿಸುವುದನ್ನೇ ಮರೆತಿದ್ದೇವೆ. ಈ ಎಲ್ಲ ಚಟುವಟಿಕೆಗಳ ಜೊತೆಗೆ ಕಚೇರಿ ಕೆಲಸಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿ, ನಿಗಮದ ಪ್ರಗತಿಗೆ ಎಲ್ಲರೂ ಸಹಕರಿಸಬೇಕಿದೆ ಎಂದು ಸಲಹೆ ನೀಡಿದರು.

ಸಮಾರಂಭದಲ್ಲಿ ಸೆಸ್ಕ್ ತಾಂತ್ರಿಕ ನಿರ್ದೇಶಕ ಡಿ.ಜೆ.ದಿವಾಕರ್, ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ) ಶರಣಮ್ಮ ಎಸ್.ಜಂಗಿನ, ಮುಖ್ಯ ಆರ್ಥಿಕ ಅಧಿಕಾರಿ ಜಿ.ರೇಣುಕಾ, ಮುಖ್ಯ ಲೆಕ್ಕ ಪರಿಶೋಧಕಿ ನಿಂಗರಾಜಮ್ಮ, ಪ್ರಧಾನ ವ್ಯವಸ್ಥಾಪಕರಾದ ಡಾ.ಬಿ.ಆರ್. ರೂಪಾ, ಎಲ್.ಲೋಕೇಶ್, ಹೆಚ್.ಆರ್. ದಿನೇಶ್, ಟಿ.ರಾಮಸ್ವಾಮಿ ಸೇರಿದಂತೆ ಇತರ ಅಧಿಕಾರಿಗಳು ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು.

ಮನರೇಗಾ ಮರು ಸ್ಥಾಪನೆಗೆ ಆಗ್ರಹಿಸಿ ಫೆ.1ಕ್ಕೆ ಅಹೋರಾತ್ರಿ ಧರಣಿ



ಮನರೇಗಾ ಹೋರಾಟ ಕುರಿತು ಕಾಂಗ್ರೆಸ್ ಕಚೇರಿಯಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಮೈಸೂರು, ಜ.29(ಎಂಕೆ)– ಮನರೇಗಾ(ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ) ಯೋಜನೆ ಮರು ಸ್ಥಾಪಿಸುವಂತೆ ಆಗ್ರಹಿಸಿ ಮೈಸೂರು ನಗರ ಕಾಂಗ್ರೆಸ್ ವತಿಯಿಂದ ಅಹೋರಾತ್ರಿ ಧರಣಿ ನಡೆಸಲು ನಿರ್ಧರಿಸಲಾಯಿತು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಗುರುವಾರ ನಡೆದ ಮನರೇಗಾ ಹೋರಾಟ ಕುರಿತು ನಡೆದ ಪೂರ್ವಭಾವಿ ಸಭೆಯಲ್ಲಿ ಫೆ.1ರ ಸಂಜೆ 7 ಗಂಟೆಯಿಂದ ಮರುದಿನ(ಫೆ.2) ಬೆಳಗ್ಗೆ 6 ಗಂಟೆಯವರೆಗೆ ಧರಣಿ ನಡೆಸಲು ನಿರ್ಧಾರ ಕೈಗೊಳ್ಳಲಾಯಿತು.

ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ ಮಾತಾಡಿ, ಮನರೇಗಾ ಯೋಜನೆ ಗ್ರಾಮೀಣ ಪ್ರದೇಶಕ್ಕೆ ಅನ್ವಯವಾದರೂ ಮಹತ್ವದ ಯೋಜನೆಯನ್ನು ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮದಾಗಿದೆ. ಕೇಂದ್ರ ಸರ್ಕಾರ ನೂತನವಾಗಿ ಜಾರಿಗೆ ತಂದಿರುವ ವಿಬಿ–ಜಿ–ರಾಮ್–ಜಿ ಕಾಯಿದೆ ರದ್ದಾಗಿ ಮನರೇಗಾ ಮರು ಸ್ಥಾಪನೆಯಾಗಬೇಕಾದರೆ ಹೋರಾಟ ಅನಿವಾರ್ಯ ಎಂದರು.

ಈಗಾಗಲೇ ರಾಜ್ಯಾದ್ಯಂತ ಹೋರಾಟಗಳು ನಡೆಯುತ್ತಿದ್ದು, ಅದರಂತೆ ಮೈಸೂರಿನ ಟೌನ್‌ಹಾಲ್ ಆವರಣದಲ್ಲಿ ಅಹೋರಾತ್ರಿ ಧರಣಿ ನಡೆಸಲಾಗುವುದು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ನೇತೃತ್ವದಲ್ಲಿ ಧರಣಿ ನಡೆಯಲಿದ್ದು, ಸ್ಥಳೀಯ ಶಾಸಕರು, ಮಾಜಿ ಶಾಸಕರು, ಕಾಂಗ್ರೆಸ್‌ನ ಎಲ್ಲಾ ಮುಖಂಡರು, ಕಾರ್ಯಕರ್ತರು ಭಾಗವಹಿಸಬೇಕು ಎಂದರು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಮೇಯರ್‌ಗಳಾದ ಬಿ.ಎಲ್.ಭೈರಪ್ಪ, ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ನಗರ ಪ್ರಧಾನ ಕಾರ್ಯದರ್ಶಿ ಶಿವಣ್ಣ, ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಮಹೇಶ್ ಮತ್ತಿತರರಿದ್ದರು.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 30 ಶುಕ್ರವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 281 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಪ್ರತಿ ತಿಂಗಳ ಮೊದಲ ಶನಿವಾರ ಸರ್ಕಾರಿ ನೌಕರರು 'ಖಾದಿ' ಉಡುಪು ಧರಿಸುವುದು

ಸರ್ಕಾರದ ಸುತ್ತೋಲೆ



ಬೆಂಗಳೂರು, ಜ.29– ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಸಂಸ್ಥೆಗಳು, ನಿಗಮ ಮಂಡಳಿಗಳು, ಸ್ವಾಯತ್ತ ಸಂಸ್ಥೆಗಳು, ವಿಶ್ವವಿದ್ಯಾಲಯಗಳ ಅಧಿಕಾರಿ, ನೌಕರರು ಸ್ವಯಂ ಪ್ರೇರಣೆಯಿಂದ ಪ್ರತಿ ತಿಂಗಳ ಮೊದಲ ಶನಿವಾರ 'ಖಾದಿ' ಉಡುಪನ್ನು ಧರಿಸುವಂತೆ ರಾಜ್ಯ ಸರ್ಕಾರ ಆದೇಶಿಸಿದೆ.

ರಾಜ್ಯದಲ್ಲಿ ಖಾದಿ ಬಳಕೆ ಉತ್ತೇಜಿಸುವ ನಿಟ್ಟಿನಲ್ಲಿ ಈ ಮಹತ್ವದ ನಿರ್ಧಾರ ಕೈಗೊಂಡಿದ್ದು, ಈ ಸಂಬಂಧ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಗುರುವಾರ ಸುತ್ತೋಲೆ ಹೊರಡಿಸಿದ್ದಾರೆ. ಈ ಕ್ರಮವು ಸರ್ಕಾರಿ ಅಧಿಕಾರಿ, ನೌಕರರಲ್ಲಿ ಸ್ವದೇಶಿ ಉತ್ಪನ್ನಗಳ ಬಗ್ಗೆ ಗೌರವ, ಐಕ್ಯತೆ, ರಾಷ್ಟ್ರೀಯ ಭಾವನೆ, ಭಾರತೀಯತೆ, ಸ್ವಾಭಿಮಾನ ಮತ್ತು ಸಾಮಾಜಿಕ ಜವಾಬ್ದಾರಿಯ ಭಾವನೆಯನ್ನು ಬೆಳೆಸುವಲ್ಲಿ ಸಹಾಯಕವಾಗಲಿದೆ ಎಂದು ಅವರು ಹೇಳಿದ್ದಾರೆ.

ಸುತ್ತೋಲೆಯಲ್ಲೇನಿದೆ: ಖಾದಿ ಕೇವಲ ಒಂದು ಉಡುಪು ಮಾತ್ರವಲ್ಲ, ಅದು ರಾಷ್ಟ್ರದ ಗೌರವ ಮತ್ತು ಹೆಮ್ಮೆಯ ಪ್ರತೀಕವಾಗಿದೆ. ಪ್ರಸ್ತುತ ಖಾದಿ ನೇಕಾರರು ನೂತನ ಶೈಲಿಯ ವಿನ್ಯಾಸದಲ್ಲಿ ಉಡುಪುಗಳನ್ನು ತಯಾರಿಸಲು ಮುಂದಾಗಿದ್ದಾರೆ. ಅಲ್ಲದೇ, ಖಾದಿ ಉತ್ಪಾದನೆಯು ಗ್ರಾಮೀಣ ಆರ್ಥಿಕತೆಯ ಮೂಲ ಆಧಾರವಾಗಿದ್ದು, ■10ನೇ ಪುಟಕ್ಕೆ

ವಿಧಾನಮಂಡಲ ಅಧಿವೇಶನ ಫೆಬ್ರವರಿ 4ರವರೆಗೆ ವಿಸ್ತರಣೆ


ಬೆಂಗಳೂರು, ಜ.29– ರಾಜ್ಯ ವಿಧಾನಮಂಡಲದ ಅಧಿವೇಶನವನ್ನು ಫೆಬ್ರವರಿ 4ರವರೆಗೆ, ಅಂದರೆ ಇನ್ನೂ ನಾಲ್ಕು ದಿನಗಳವರೆಗೆ ವಿಸ್ತರಿಸಲಾಗುವುದು ಎಂದು ಸ್ಪೀಕರ್ ಯು.ಟಿ.ಖಾದರ್ ಗುರುವಾರ ಪ್ರಕಟಿಸಿದ್ದಾರೆ.

ಜನವರಿ 22ರಿಂದ ಪ್ರಾರಂಭವಾದ ವಿಶೇಷ ಜಂಟಿ ಅಧಿವೇಶನ ಜನವರಿ 31ರಂದು ಮುಕ್ತಾಯಗೊಳ್ಳಬೇಕಿತ್ತು. ಆದರೆ ನಿನ್ನೆ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಮನರೇಗಾ ಕಾಯ್ದೆ ಕುರಿತು ಸಮಗ್ರ ಚರ್ಚೆ ನಡೆಸಲು ಅಧಿವೇಶನವನ್ನು ವಿಸ್ತರಿಸುವ ಬಗ್ಗೆ ಸಿಎಂ ಸಿದ್ದರಾಮಯ್ಯ ಒಲವು ವ್ಯಕ್ತಪಡಿಸಿದ್ದರು. ಜನವರಿ 22ರಿಂದ ಪ್ರಾರಂಭವಾದ ಒಂಬತ್ತನೇ ಅಧಿವೇಶನ ಜನವರಿ 31ರ ಬದಲಿಗೆ ಫೆಬ್ರವರಿ 4ರವರೆಗೆ ಮುಂದುವರಿಸಲು ಇಂದು ನಡೆದ ಸದನ ಸಲಹಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಯುಟಿ ಖಾದರ್ ತಿಳಿಸಿದ್ದಾರೆ.

ಜನವರಿ 30ರಂದು ವಿಧಾನಸಭೆಯ ಜಂಟಿ ಅಧಿವೇಶನ ವನ್ನು ಉದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣದ ಕುರಿತು ಚರ್ಚೆ ನಡೆಯಲಿದೆ ಎಂದು ಸ್ಪೀಕರ್ ಹೇಳಿದ್ದಾರೆ. ಜನವರಿ 31ರಂದು ಅಧಿವೇಶನ ಇರುವುದಿಲ್ಲ. ಫೆಬ್ರವರಿ 2ರಂದು ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತರಿಸಲಿದ್ದಾರೆ ಎಂದು ಖಾದರ್ ಸದನಕ್ಕೆ ತಿಳಿಸಿದರು.

ಈ ಸರ್ಕಾರದಲ್ಲಿ ಕಮಿಷನ್, ಭ್ರಷ್ಟಾಚಾರ ಹೆಚ್ಚಿದೆ...!

ಮತ್ತೆ ಸಿಡಿದೆದ್ದ ಗುತ್ತಿಗೆದಾರರು; ಮಾ.5ರೊಳಗೆ ಬಾಕಿ 37 ಸಾವಿರ ಕೋಟಿ ನೀಡುವಂತೆ ಸರ್ಕಾರಕ್ಕೆ ಗಡುವು



ಬೆಂಗಳೂರು, ಜ.29– ರಾಜ್ಯ ಸರಕಾರದ ವಿರುದ್ಧ ಸಿಡಿದೆದ್ದಿರುವ ರಾಜ್ಯ ಗುತ್ತಿಗೆದಾರರ ಸಂಘವು ಹಿಂದಿನ ಬಿಜೆಪಿ ಸರ್ಕಾರಕ್ಕಿಂತ ಈ ಸರ್ಕಾರದಲ್ಲಿ ಕಮಿಷನ್ ಹಾಗೂ ಭ್ರಷ್ಟಾಚಾರ ಹೆಚ್ಚಿದೆ ಎಂದು ದೂರಿದ್ದು, 37,370 ಕೋಟಿ ರೂ. ಬಾಕಿ ಬಿಲ್ ಪಾವತಿಗೆ ಮಾರ್ಚ್ 5ರ ಗಡುವು ನೀಡಿದೆ. ತಪ್ಪಿದಲ್ಲಿ ರಾಜ್ಯದೆಲ್ಲೆಡೆ ಸರಕಾರಿ ಕಾಮಗಾರಿಗಳನ್ನು ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವ ಎಚ್ಚರಿಕೆ ಕೊಟ್ಟಿದೆ.

ಬಾಕಿ ಬಿಲ್ ಪಾವತಿ ಸಂಬಂಧ ನಗರದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಾಜ್ಯ ಗುತ್ತಿಗೆದಾರ ಸಂಘದ ಅಧ್ಯಕ್ಷ ಆರ್.ಮಂಜುನಾಥ್, ಸರಕಾರ ಮೂರು ವರ್ಷಗಳಿಂದ ಬಾಕಿ ಬಿಲ್ ಬಿಡುಗಡೆ ಮಾಡದ ಕಾರಣ ಗುತ್ತಿಗೆದಾರರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಾಲ ಹಾಗೂ ಬಡ್ಡಿ ಪಾವತಿಸಲಾಗದೆ ವಿಷ ಕುಡಿಯುವ ಸ್ಥಿತಿಗೆ ತಲುಪಿದ್ದಾರೆ ಎಂದು ಆರೋಪಿಸಿದರು.


ಲೋಕೋಪಯೋಗಿ, ಜಲಸಂಪನ್ಮೂಲ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಸಣ್ಣ ನೀರಾವರಿ, ನಗರಾಭಿವೃದ್ಧಿ, ವಸತಿ, ಕಾರ್ಮಿಕ, ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಗುತ್ತಿಗೆದಾರರಿಗೆ 37 ಸಾವಿರ ಕೋಟಿ ರೂ. ಬಾಕಿ ಬಿಲ್ ಬಿಡುಗಡೆ ಮಾಡಬೇಕಿದೆ. ಈ ವಿಷಯವನ್ನು ರಾಹುಲ್ ಗಾಂಧಿ ಅವರ ಗಮನಕ್ಕೆ ತರುವುದಕ್ಕೂ ನಿರ್ಧರಿಸಲಾಗಿದೆ. ಸರಕಾರ ತಕ್ಷಣ ಬಿಲ್ ಬಿಡುಗಡೆ ಮಾಡದಿದ್ದರೆ ಉಗ್ರ ಹೋರಾಟ ನಡೆಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಕಮಿಷನ್ ಹೆಚ್ಚಿದೆ: ಹಿಂದಿನ ಬಿಜೆಪಿ ಸರಕಾರಕ್ಕಿಂತ ಈ ಸರಕಾರದಲ್ಲಿ ಕಮಿಷನ್ ಹಾಗೂ ಭ್ರಷ್ಟಾಚಾರ ಹೆಚ್ಚಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕೃತ ಸಭೆ ಕರೆದರೆ ದಾಖಲೆಗಳ ಸಮೇತ ಎಲ್ಲಾ ಮಾಹಿತಿ ನೀಡುತ್ತೇವೆ. 2025ರ ಏಪ್ರಿಲ್‌ನಲ್ಲಿ ಬಾಕಿ ಬಿಲ್‌ನ ಹಣ ಬಿಡುಗಡೆ ಮಾಡುವುದಾಗಿ ಸಿಎಂ ಸಿದ್ದರಾಮಯ್ಯ ಭರವಸೆ ಕೊಟ್ಟಿದ್ದರು. ಆದರೆ, ಅವರು ಆ ಭರವಸೆ ಉಳಿಸಿಕೊಂಡಿಲ್ಲ. ನಮ್ಮ ಸಮಸ್ಯೆ ಆಲಿಸಲು ಸಭೆಯನ್ನೂ ಕರೆದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. 10 ಮಹಾನಗರ ಪಾಲಿಕೆ ಹಾಗೂ ಕಾರ್ಮಿಕ ಇಲಾಖೆಯಲ್ಲಿ ಸ್ಥಳೀಯ ಗುತ್ತಿಗೆದಾರರಿಗೆ ಅನ್ಯಾಯವಾಗುವಂತೆ ಪ್ಯಾಕೇಜ್ ಟೆಂಡರ್ ಮಾಡಲಾಗುತ್ತಿದೆ ಎಂದು ದೂರಿದ್ದಾರೆ.

ಎರಡೂವರೆ ವರ್ಷದಿಂದ ನಮ್ಮದು ನರಕಯಾತನೆ

ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಸಚಿವ ಸತೀಶ್ ಜಾರಕಿಹೊಳಿ ಅವರು ಸಮಸ್ಯೆಗಳಿಗೆ ಒಂದಿಷ್ಟು ಸ್ಪಂದಿಸುತ್ತಿದ್ದರೂ, ಅಂತಿಮವಾಗಿ ಹಣಕಾಸು ಇಲಾಖೆಯತ್ತ ಕೈ ತೋರಿಸಲಾಗುತ್ತಿದೆ. ಹೀಗಾಗಿ, ಸಂಘವು ಕೆಲ ನಿರ್ಧಾರಗಳನ್ನು ಕೈಗೊಂಡಿದೆ. ಕಳೆದ ಎರಡೂವರೆ ವರ್ಷಗಳಿಂದ ನರಕಯಾತನೆ ಅನುಭವಿಸುತ್ತಿದ್ದೇವೆ. ನಮ್ಮನ್ನು ಕೆಣಕಲು ಹೋಗಬೇಡಿ ಎಂದು ಮುಖ್ಯಮಂತ್ರಿಗಳಿಗೆ ವಿನಂತಿಸುತ್ತೇವೆ. ಸರಕಾರ ಮಾರ್ಚ್ 5ರೊಳಗೆ ಸ್ಪಂದಿಸದಿದ್ದರೆ ಎಲ್ಲಾ ಸರ್ಕಾರಿ ಕಾಮಗಾರಿಗಳು ಬಂದ್ ಆಗಲಿವೆ. ಒಂದೇ ಬಾರಿ ಹಣ ನೀಡಲು ಸಾಧ್ಯವಾಗದಿದ್ದರೆ ಹಂತ–ಹಂತವಾಗಿಯಾದರೂ ಬಿಲ್ ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಿದರು.

ಸರ್ಕಾರಿ ವೈದ್ಯರು ಖಾಸಗಿ ಆಸ್ಪತ್ರೆಗಳಲ್ಲಿ ಒಳರೋಗಿಗಳಿಗೆ ಚಿಕಿತ್ಸೆ ನೀಡುವಂತಿಲ್ಲ



ಬೆಂಗಳೂರು, ಜ.29– ಸರ್ಕಾರಿ ವೈದ್ಯರು ಖಾಸಗಿ ಆಸ್ಪತ್ರೆಗಳಲ್ಲಿ ಒಳರೋಗಿಗಳಿಗೆ ಚಿಕಿತ್ಸೆ ನೀಡುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಗುರುವಾರ ಹೇಳಿದ್ದಾರೆ.



ಆದಾಗ್ಯೂ, ಸರ್ಕಾರಿ ವೈದ್ಯರು ತಮ್ಮ ನಿಯಮಿತ ಸರ್ಕಾರಿ ಕರ್ತವ್ಯಗಳನ್ನು ಪೂರ್ಣಗೊಳಿಸಿದ ನಂತರ ಖಾಸಗಿ ಚಿಕಿತ್ಸಾಲಯ ಅಥವಾ ಆಸ್ಪತ್ರೆಗಳಲ್ಲಿ ಹೊರರೋಗಿ ವಿಭಾಗದಲ್ಲಿ(OPD) ಮಾತ್ರ ಸೇವೆ ಸಲ್ಲಿಸಲು ಅವಕಾಶವಿದೆ ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ. ಅಂತಹ ಖಾಸಗಿ ಸೇವೆ ನೀಡುವ ಬಗ್ಗೆ ಸಂಪೂರ್ಣ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸಬೇಕು. ಈ ಷರತ್ತುಗಳ ಯಾವುದೇ ಉಲ್ಲಂಘನೆಯು ಸಂಬಂಧಪಟ್ಟ ವೈದ್ಯರ ವಿರುದ್ಧ ಕ್ರಮಕ್ಕೆ ಕಾರಣವಾಗುತ್ತದೆ ಎಂದು ರಾವ್ ಎಚ್ಚರಿಸಿದ್ದಾರೆ.

ಇಂದು ವಿಧಾನಸಭೆಗೆ ಮಾಹಿತಿ ನೀಡಿದ ಸಚಿವರು, ಸರ್ಕಾರಿ ಆದೇಶಗಳ ಪ್ರಕಾರ ಸರ್ಕಾರಿ ವೈದ್ಯರು ಸೀಮಿತ ಖಾಸಗಿ ಸೇವೆಗಳನ್ನು ಒದಗಿಸಲು ಅನುಮತಿಸಲಾಗಿದ್ದರೂ, ಅವರ ■10ನೇ ಪುಟಕ್ಕೆ

ಸಿಎಂ ಪುತ್ರನ ಹಸ್ತಕ್ಷೇಪದಿಂದ ಬೇಸತ್ತು ಸಚಿವ ಸ್ಥಾನಕ್ಕೆ ರಾಜೀನಾಮೆ ವಿಚಾರ!; ಜಾರ್ಜ್ ಸ್ಪಷ್ಟನೆ

ಬೆಂಗಳೂರು, ಜ.29– ಇಂಧನ ಸಚಿವ ಕೆ.ಜೆ.ಜಾರ್ಜ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ಮುಂದಾಗಿದ್ದರೇ...! ಈ ವಿಚಾರ ಮಾಧ್ಯಮಗಳಲ್ಲಿ ವರದಿಯಾಗಿ ನಂತರ ವಿಧಾನಸಭೆಯಲ್ಲಿ ಕೂಡ ಪ್ರತಿಧ್ವನಿಸಿದ ಪ್ರಸಂಗ ಇಂದು ನಡೆಯಿತು. ಇಂಧನ ಇಲಾಖೆಯ ಅಧಿಕಾರಿಗಳ ವರ್ಗಾವಣೆ ವಿಚಾರವಾಗಿ ವಿಶ್ವಾಸಕ್ಕೆ ಪಡೆಯದೆ ನಿರ್ಧಾರ ಕೈಗೊಳ್ಳಲಾಗಿದೆ ಎಂಬ ಕಾರಣಕ್ಕಾಗಿ ಅಸಮಾಧಾನಗೊಂಡು ಕೆ.ಜೆ.ಜಾರ್ಜ್ ರಾಜೀನಾಮೆ ನೀಡಲು ಮುಂದಾಗಿದ್ದರು. ಸಿಎಂಗೆ ರಾಜೀನಾಮೆ ಪತ್ರ ನೀಡಲು ಮುಂದಾಗಿದ್ದರು. ಆಗ ಸಿಎಂ ಅವರ ಕಾನೂನು ಸಲಹೆಗಾರ ಪೊನ್ನಣ್ಣ ಅವರು ಮಧ್ಯೆ ಪ್ರವೇಶಿಸಿ, ಜಾರ್ಜ್ ಅವರ ಮನವೊಲಿಸಿದರು ಎಂಬ ವಿಚಾರ ಮಾಧ್ಯಮಗಳಲ್ಲಿ ವರದಿಯಾಗಿದೆ.



ಕೆ.ಜೆ.ಜಾರ್ಜ್




ಯತೀಂದ್ರ

ಈ ಬಗ್ಗೆ ವಿಧಾನಸಭೆಯಲ್ಲಿ ಸ್ವತಃ ಕೆಜೆ ಜಾರ್ಜ್ ಸ್ಪಷ್ಟನೆ ನೀಡಿದ್ದಾರೆ.

ಇಂಧನ ಇಲಾಖೆಯ ಕೆಲವು ಅಧಿಕಾರಿಗಳನ್ನು ವರ್ಗಾವಣೆ ಮಾಡಲು ಸಿಎಂ ಕಚೇರಿ ಮುಂದಾಗಿತ್ತು. ಸಿಎಂ ಪುತ್ರ ಯತೀಂದ್ರ ಇಂಧನ ಇಲಾಖೆ ■10ನೇ ಪುಟಕ್ಕೆ

ವಿಕಲಚೇತನರಿಗೆ 3 ತಿಂಗಳಲ್ಲಿ ಬೃಹತ್ ಉದ್ಯೋಗ ಮೇಳ

ಬೆಂಗಳೂರು, ಜ.29(ಕೆಎಂಶಿ)– ವಿಕಲಚೇತನರಿಗಾಗಿಯೇ ಮುಂದಿನ ಮೂರು ತಿಂಗಳಲ್ಲಿ ನಗರದ ಕಂಠೀರವ ಕ್ರೀಡಾಂಗಣದಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗುವುದು ಎಂದು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವ ಡಾ.ಶರಣಪ್ರಕಾಶ್ ಆರ್. ಪಾಟೀಲ್ ವಿಧಾನಸಭೆಗೆ ತಿಳಿಸಿದರು.



ಪ್ರಶ್ನೋತ್ತರ ವೇಳೆಯಲ್ಲಿ ಗುರುರಾಜ ಶೆಟ್ಟಿ ಗಂಟಿಹೊಳೆ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಪ್ರಸಕ್ತ ಸಾಲಿನಲ್ಲಿ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ರಾಜ್ಯದ ವಿಕಲಚೇತನರನ್ನು ತಾಂತ್ರಿಕ ಜ್ಞಾನದೊಂದಿಗೆ ಆರ್ಥಿಕತೆಯಲ್ಲಿ ಮುನ್ನಡೆಸುವ ಉದ್ದೇಶದಿಂದ ಮಾರುಕಟ್ಟೆ ಬೇಡಿಕೆಗೆ ಅನುಗುಣವಾದ ವೃತ್ತಿ ತರಬೇತಿ ಮೂಲಕ ಒಂದು ಸಾವಿರ ಅಭ್ಯರ್ಥಿಗಳಿಗೆ 3 ಕೋಟಿ ರೂ. ವೆಚ್ಚದಲ್ಲಿ ಕೌಶಲ್ಯ ತರಬೇತಿಯ ಜೊತೆಗೆ ಟೂಲ್‌ಕಿಟ್ ವಿತರಣೆ ಹಾಗೂ ಉದ್ಯೋಗಾವಕಾಶವನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರದಿಂದ ಉದ್ಯಮಶೀಲತಾಭಿವೃದ್ಧಿ ತರಬೇತಿಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ವಿಕಲಚೇತನರಿಗೆ ಸರ್ಕಾರದ ಆದೇಶದ ಅನ್ವಯ ಶೇ.3ರಷ್ಟಿದ್ದ ಮೀಸಲಾತಿ ಪ್ರಮಾಣವನ್ನು ಶೇ.5ಕ್ಕೆ ಹೆಚ್ಚಿಸಿ ತರಬೇತಿ ಕಾರ್ಯಕ್ರಮಗಳನ್ನು ಒದಗಿಸಲಾಗಿದೆ. 2017–18ನೇ ಸಾಲಿನಿಂದ 2024–25ನೇ ಸಾಲಿನವರೆಗೆ ನೋಂದಣಿಯಾದ ಅಭ್ಯರ್ಥಿಗಳಲ್ಲಿ 540 ಅಭ್ಯರ್ಥಿಗಳು ವಿವಿಧ ತರಬೇತಿದಾರ ಸಂಸ್ಥೆಗಳ ಮೂಲಕ ತರಬೇತಿ ಪಡೆದಿದ್ದಾರೆ. 83 ವಿಕಲಚೇತನ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ದೊರೆತಿದೆ ಎಂದು ಮಾಹಿತಿ ನೀಡಿದರು.

ಅಧಿಕಾರ ಹಂಚಿಕೆ; ವಿಳಂಬ ಧೋರಣೆಗೆ ಡಿಕೆಶಿ ಬೆಂಬಲಿತ ಶಾಸಕರ ಬೇಸರ

ಬೆಂಗಳೂರು, ಜ.29(ಕೆಎಂಶಿ)– ಅಧಿಕಾರ ಹಂಚಿಕೆ ಕುರಿತು ಕಾಂಗ್ರೆಸ್ ಹೈಕಮಾಂಡ್ ಚರ್ಚೆಗೆ ಕರೆಯಬಹುದಾದ ದಿನಗಳನ್ನು ತಪ್ಪಿಸುವ ಉದ್ದೇಶದಿಂದಲೇ ವಿಧಾನಮಂಡಲದ ಅಧಿವೇಶನ ವಿಸ್ತರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹೊರಟಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆಂಬಲಿತ ಸದಸ್ಯರು ಬೇಸರ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ಕಾಂಗ್ರೆಸ್ ಗೊಂದಲ ನಿವಾರಿಸಲು ಪ್ರಿಯಾಂಕಾ ಗಾಂಧಿ ಮುಂದಾಗಿದ್ದು, ಜ.31ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ದೆಹಲಿಗೆ ಕರೆಸಿ ಫೆಬ್ರವರಿ 2ರೊಳಗೆ ಅಧಿಕಾರ ಹಂಚಿಕೆ ವಿವಾದ ಪರಿಹರಿಸಲು ಹೊರಟಿದ್ದಾರೆ. ಈ ಬಗ್ಗೆ ಎಐಸಿಸಿಯಿಂದ ಉಭಯ ನಾಯಕರಿಗೆ ಮಾಹಿತಿ ಬಂದಿದೆಯಾದರೂ ಮುಖ್ಯಮಂತ್ರಿ ಅವರು, ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಚರ್ಚೆ ಕಲಾಪವನ್ನು ಫೆಬ್ರವರಿ 4ರವರೆಗೂ ವಿಸ್ತರಿಸಲು ಕಾರಣರಾಗಿದ್ದಾರೆ.

ಸದನ ಕಲಾಪ ವಿಸ್ತರಿಸಲು ಕಲಾಪ ಸಲಹಾ ಸಮಿತಿ ಸಭೆ ಕರೆಯುವಂತೆ ವಿಧಾನಸಭಾಧ್ಯಕ್ಷರಿಗೆ ಪತ್ರ ನೀಡಿದ್ದಾರೆ. ಪ್ರಸ್ತುತ ಅಧಿವೇಶನವು ಜನವರಿ 30ಕ್ಕೆ ಅಂತ್ಯಗೊಳ್ಳಬೇಕಿತ್ತು. ಆದರೆ, ಕಲಾಪ ವಿಸ್ತರಿಸುವ ಮೂಲಕ ಎಐಸಿಸಿ ಸಭೆಯ ಸಮಯ ನಿಗದಿ ಮಾಡದಿರುವಂತೆ ಪರೋಕ್ಷ ಒತ್ತಡ ಹೇರುವಲ್ಲಿ ಮುಂದಾಗಿದ್ದಾರೆ ಎಂದು ದೂರಿದ್ದಾರೆ.

ಒಂದೆಡೆ ಕಲಾಪ ವಿಸ್ತರಿಸಲು ಮುಂದಾಗಿರುವ ಮುಖ್ಯಮಂತ್ರಿ, ಇನ್ನೊಂದೆಡೆ ಫೆಬ್ರವರಿ 2ರಿಂದಲೇ 2026–27ನೇ ಸಾಲಿನ ಮುಂಗಡ ಪತ್ರ ಮಂಡನೆಯ ಪೂರ್ವಭಾವಿ ಸಭೆಗಳನ್ನು ನಿಗದಿ ಮಾಡಿದ್ದಾರೆ. ■10ನೇ ಪುಟಕ್ಕೆ

ಪೊಲೀಸರಿಗೆ ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವಗಳಿಗೆ ರಜೆ ಭಾಗ್ಯ



ಬೆಂಗಳೂರು, ಜ.29– ಇನ್ನು ಮುಂದೆ ರಾಜ್ಯ ಪೊಲೀಸ್ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವಕ್ಕೆ ರಜೆ ಸಿಗಲಿದೆ.



ಡಾ.ಎಂ.ಎ. ಸಲೀಂ

ಈ ಸಂಬಂಧ ಪೊಲೀಸ್ ಮಹಾ ನಿರ್ದೇಶಕ ಡಾ. ಎಂ.ಎ. ಸಲೀಂ, ಇಂದು ಸುತ್ತೋಲೆ ಹೊರಡಿಸಿದ್ದು, ಪೊಲೀಸ್ ಅಧಿಕಾರಿ ಗಳು ಮತ್ತು ಸಿಬ್ಬಂದಿ ಈ ಎರಡು ಸಂದರ್ಭ ರಜೆ ಕೋರಿದರೆ ಮಂಜೂರು ಮಾಡುವಂತೆ ರಾಜ್ಯದ ಎಲ್ಲಾ ಮಹಾ ನಗರಗಳ ಕಮಿಷನರ್, ಜಿಲ್ಲೆಗಳ ಎಸ್‌ಪಿ ಹಾಗೂ ಎಲ್ಲಾ ಘಟಕಗಳ ಮುಖ್ಯಸ್ಥರಿಗೆ ನಿರ್ದೇಶನ ನೀಡಿದ್ದಾರೆ.

ಸಾರ್ವಜನಿಕರ ಸುರಕ್ಷತೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡಲು, ಕಠಿಣ ಪರಿಸ್ಥಿತಿಗಳಲ್ಲಿ ಕೆಲಸ ನಿರ್ವಹಿಸುವ ಪೊಲೀಸ್ ಸಿಬ್ಬಂದಿಗೆ ಹುಟ್ಟುಹಬ್ಬ ಮತ್ತು ವಿವಾಹ ವಾರ್ಷಿಕೋತ್ಸವಗಳಂತಹ ವೈಯಕ್ತಿಕ ಕಾರ್ಯಕ್ರಮ ಗಳು ಮಹತ್ವದ್ದಾಗಿವೆ. ಈ ವಿಶೇಷ ದಿನಗಳಲ್ಲಿ ರಜೆ ಪಡೆಯುವುದರಿಂದ ಅಧಿಕಾರಿಗಳು ಮತ್ತು ಸಿಬ್ಬಂದಿ ಭಾವನಾತ್ಮಕವಾಗಿ ಪುನಶ್ಚೇತನಗೊಳ್ಳಲು, ಕುಟುಂಬದೊಂದಿಗೆ ನೆಮ್ಮದಿಯಿಂದ ಸಮಯ ಕಳೆಯಲು ಹಾಗೂ ಕರ್ತವ್ಯ ಮತ್ತು ವೈಯಕ್ತಿಕ ಜೀವನದ ಸಮತೋಲನ ಕಾಪಾಡಿಕೊಳ್ಳಲು ಇದು ಸಹಾಯವಾಗುತ್ತದೆ.

ಹೆಬ್ಬಾಳು ಕೈಗಾರಿಕಾ ಪ್ರದೇಶದ ಕೆಮಿಕಲ್ಸ್ ಫ್ಯಾಕ್ಟರಿಯಲ್ಲಿ ಡ್ರಗ್ಸ್ ತಯಾರಿಕೆ ಪ್ರಕರಣ

ಫ್ಯಾಕ್ಟರಿ ಮಾಲೀಕನ ಕೋರ್ಟ್ ಮೂಲಕ ವಶಕ್ಕೆ ಪಡೆದ ಎನ್‌ಸಿಬಿ

ಮೈಸೂರು,ಜ.29(ಪಿಎಂ)– ಡ್ರಗ್ಸ್ ಪ್ರಕರಣ ಸಂಬಂಧ ಹೆಬ್ಬಾಳು ಕೈಗಾರಿಕಾ ಪ್ರದೇಶದ ಕೆಮಿಕಲ್ಸ್ ಕಾರ್ಖಾನೆ ಮೇಲೆ ದಾಳಿ ನಡೆಸಿ, ನಿನ್ನೆ ಇಡೀ ದಿನ ಶೋಧನೆ ನಡೆಸಿದ್ದ ಅಹ್ಮದಾಬಾದ್ ಎನ್‌ಸಿಬಿ ಅಧಿಕಾರಿಗಳ ತಂಡ, ಬಳಿಕ ಅದರ ಮಾಲೀಕ ಗಣಪತ್ ಲಾಲ್‌ನನ್ನು ವಶಕ್ಕೆ ಪಡೆದಿತ್ತು. ತೀವ್ರ ವಿಚಾರಣೆ ಬಳಿಕ ಗುರುವಾರ ಮೈಸೂರು ಕೋರ್ಟ್‌ಗೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಮತ್ತೆ ತನ್ನ ವಶಕ್ಕೆ ಪಡೆದಿದೆ. ಗುರುವಾರ ಮಧ್ಯಾಹ್ನ 1 ಗಂಟೆ ಸುಮಾರಿಗೆ ಮೈಸೂರಿನ ಕೆಆರ್ ಆಸ್ಪತ್ರೆಯಲ್ಲಿ ಗಣಪತ್ ಲಾಲ್‌ನ ವೈದ್ಯಕೀಯ ಪರೀಕ್ಷೆ ಬಳಿಕ ಸಂಜೆ ವೇಳೆಗೆ ಈತನನ್ನು ಮೈಸೂರಿನ ಜಯನಗರದ ಜಿಲ್ಲಾ ನ್ಯಾಯಾಲಯದ 5ನೇ ಜೆಎಂಎಫ್‌ಸಿ ಕೋರ್ಟ್‌ನಲ್ಲಿ ಹಾಜರು ಪಡಿಸಲಾಯಿತು. ವಿಚಾರಣೆಗಾಗಿ ಅಂತರರಾಜ್ಯಕ್ಕೆ ಕರೆದೊಯ್ಯುವ ಹಿನ್ನೆಲೆಯಲ್ಲಿ ಟ್ರಾನ್ಸಿಟ್ ವಾರಂಟ್ ಪಡೆದು, ಆತನನ್ನು ವಶಕ್ಕೆ ಪಡೆದು ಕರೆದೊಯ್ದರು. ಸದರಿ ಕೆಮಿಕಲ್ಸ್ ಕಾರ್ಖಾನೆಯಲ್ಲಿ ವಶಕ್ಕೆ ■10ನೇ ಪುಟಕ್ಕೆ



ಮೈಸೂರಿನ ಜಯನಗರದ ಕೋರ್ಟ್ ಆವರಣದಿಂದ ಗಣಪತ್ ಲಾಲ್‌ನನ್ನು ಜೀಪ್‌ನಲ್ಲಿ ಕರೆದೊಯ್ಯುತ್ತಿರುವ ಎನ್‌ಸಿಬಿ ಅಧಿಕಾರಿಗಳ ತಂಡ.

ಮೈಸೂರು ಹೊರ ವಲಯದಲ್ಲೂ ಡ್ರಗ್ಸ್ ತಯಾರಿಕೆ...!

ಪೊಲೀಸರ ತೀವ್ರ ಪರಿಶೀಲನೆ



ಮೈಸೂರು ದಕ್ಷಿಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪರಿಶೀಲನೆ ನಡೆಸುತ್ತಿರುವುದು.

ಮೈಸೂರು, ಜ.29(ಆರ್‌ಕೆ)– ಮೈಸೂರು ಗ್ರಾಮಾಂತರ ಪ್ರದೇಶಕ್ಕೂ ಡ್ರಗ್ಸ್ ಜಾಲ ವ್ಯಾಪಿಸಿರುವ ಆತಂಕಕಾರಿ ಸಂಗತಿ ಬೆಳಕಿಗೆ ಬಂದಿದೆ. ಮೈಸೂರು ದಕ್ಷಿಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೆಮಿಕಲ್ ತಯಾರಿಕಾ ಘಟಕದ ಮೇಲೆ ಪೊಲೀಸರು ದಾಳಿ ನಡೆಸಿ, ಪರಿಶೀಲನೆ ನಡೆಸಿದ್ದಾರೆ.

ನಗರದ ಹೆಬ್ಬಾಳು ಕೈಗಾರಿಕಾ ಪ್ರದೇಶದ ಕೆಮಿಕಲ್ಸ್ ಕಾರ್ಖಾನೆ ಮೇಲೆ ರಾಷ್ಟ್ರೀಯ ಮಾದಕ ದ್ರವ್ಯ ನಿಯಂತ್ರಣ ಬ್ಯೂರೋ(ಎನ್‌ಸಿಬಿ) ಅಧಿಕಾರಿಗಳ ತಂಡ ದಾಳಿ ನಡೆಸಿದ ನಂತರ ಎಚ್ಚೆತ್ತುಕೊಂಡಿರುವ ಪೊಲೀಸರು ಎಲ್ಲೆಡೆ ತಲಾಶ್ ನಡೆಸುತ್ತಿದ್ದಾರೆ.

ಹಾಗೆಯೇ ದಕ್ಷಿಣ ಠಾಣೆ ಪೊಲೀಸರು ಪರಿಶೀಲನೆ ನಡೆಸುವ ವೇಳೆ ಮಾದಕ ದ್ರವ್ಯ ತಯಾರಿಸುತ್ತಿರುವ ಶಂಕೆ ವ್ಯಕ್ತವಾಗಿದ್ದು, ವಿಷಯ ತಿಳಿಯುತ್ತಿದ್ದಂತೆ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಎಎಸ್ಪಿಗಳಾದ ಲೋಕೇಶ್, ಸಿ.ಮಲ್ಲಿಕ್, ಡಿವೈಎಸ್ಪಿ ರಾಜಣ್ಣ ದೌಡಾಯಿಸಿ, ಪರಿಶೀಲನೆ ನಡೆಸಿದ್ದಾರೆ. ಇನ್ಸ್‌ಪೆಕ್ಟರ್ ಶೇಖರ್ ನೇತೃತ್ವದಲ್ಲಿ ಶೋಧ ಮುಂದುವರೆದಿದ್ದು, ಜಿಲ್ಲಾ ಶ್ವಾನದಳ, ಬೆರಳಚ್ಚು ಮುದ್ರೆ ಘಟಕದ ಸಿಬ್ಬಂದಿಯೂ ಪರಿಶೀಲಿಸಿದ್ದಾರೆ.

ಡ್ರಗ್ಸ್ ಪಾರ್ಕ್ ಆಗುತ್ತಿದೆ...!

ಬೆಂಗಳೂರು: ಮುಖ್ಯಮಂತ್ರಿಗಳ ತವರು ಜಿಲ್ಲೆ ಮೈಸೂರಿನಲ್ಲಿ ಡ್ರಗ್ಸ್ ಫ್ಯಾಕ್ಟರಿ ಪತ್ತೆ ಹಚ್ಚಲು ಮಹಾರಾಷ್ಟ್ರ ಪೊಲೀಸರೇ ಬರಬೇಕಾಯಿತು. ಇಷ್ಟರ ಮಟ್ಟಿಗೆ ರಾಜ್ಯದ ಕಾನೂನು ಸುವ್ಯವಸ್ಥೆ ಹಾಳಾಗಿದೆ ಎಂದು ಬಿಜೆಪಿ ಶಾಸಕ ಸುನಿಲ್ ಕುಮಾರ್ ಆತಂಕ ವ್ಯಕ್ತಪಡಿಸಿದ್ದಾರೆ.



ವಿಧಾನಸಭೆ ಅಧಿವೇಶನದಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ತವರು ಜಿಲ್ಲೆಯಲ್ಲಿದ್ದ ಡ್ರಗ್ಸ್ ಫ್ಯಾಕ್ಟರಿ ಪತ್ತೆಗೆ ಮಹಾರಾಷ್ಟ್ರದ ಪೊಲೀಸರು ಬರಬೇಕಾಯಿತು. ಬೆಂಗಳೂರಿನಲ್ಲಿ ಡ್ರಗ್ಸ್ ದಂಧೆ ಪತ್ತೆಗೆ ಬೇರೆ ರಾಜ್ಯದ ಪೊಲೀಸರೇ ಬರಬೇಕಾಯಿತು. ಇದನ್ನು ಸ್ವತಃ ಮುಖ್ಯಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ, ನೀವ್ಯಾಕೆ ಡ್ರಗ್ಸ್ ದಂಧೆಯನ್ನು ■10ನೇ ಪುಟಕ್ಕೆ

ಮೈಸೂರಿಗೆ ಅಪಖ್ಯಾತಿ

ಮೈಸೂರು,ಜ.29(ಪಿಎಂ)– ಸಂಸ್ಕೃತಿ ಮತ್ತು ಪರಂಪರೆಗೆ ಹೆಸರಾಗಿದ್ದ ಮೈಸೂರು ನಗರವು ಇಂದು ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಮಾದಕ ದ್ರವ್ಯ ತನಿಖೆಗಳಿಂದಾಗಿ ಅಪಖ್ಯಾತಿ ಪಡೆಯುವಂತಾಗಿದೆ ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ದೂರಿದ್ದಾರೆ. ಬಂಧಿತ ಆರೋಪಿಯೊಬ್ಬ ನೀಡಿದ ಮಾಹಿತಿ ಮೇರೆಗೆ ಮಾದಕ ದ್ರವ್ಯ ನಿಯಂತ್ರಣ ಮಂಡಳಿ (ಎನ್‌ಸಿಬಿ) ಬುಧವಾರ ಮೈಸೂರಿನಲ್ಲಿ ದಾಳಿ ನಡೆಸಿದೆ. ಒಂದು ವೇಳೆ ಅಲ್ಲಿ ಯಾವುದೇ ನಿಷೇಧಿತ ವಸ್ತುಗಳು ಪತ್ತೆಯಾಗದಿದ್ದರೂ, ಮೈಸೂರಿನಲ್ಲಿ ನಡೆಯುತ್ತಿರುವ ಈ ಬೆಳವಣಿಗೆಗಳು ತೀವ್ರ ಕಳವಳಕಾರಿ. ಮಾದಕ ದ್ರವ್ಯ ಜಾಲದ ತನಿಖೆಗಳು ಪದೇ ಪದೇ ■10ನೇ ಪುಟಕ್ಕೆ



ನಕ್ಕರೆ ಅದೇ ಸ್ವರ್ಗ

ಗುಂಡ : ನಾನು ಕೇಳಿದ್ದು ಯಾವ ಅಂಗಡಿಯಲ್ಲೂ ಸಿಗುತ್ತಿಲ್ಲ. ಇದೆಂಥ ಊರು?
ತಿಮ್ಮ : (ಅಚ್ಚರಿಯಿಂದ) ಅದೇನಪ್ಪ ಅಂತದ್ದು ನೀನು ಕೇಳಿದ್ದು?
ಗುಂಡ : 'ಸಾಲ'

ಮೈಸೂರು ಮಿತ್ರ
ಶುಕ್ರವಾರ, ಜನವರಿ 30, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ದಾರಿ ತಪ್ಪುವುದು ಸಹಜ. ಆದರೆ ತಪ್ಪಿದ ದಾರಿಯಲ್ಲಿ ಪ್ರಯಾಣ ಮುಂದುವರಿಸುವುದು ವಿಪರ್ಯಾಸ.

ವೇದ ಸುಳ್ಳಾದರೂ
ಗಾದೆ ಸುಳ್ಳಾಗದು { ಎಲ್ಲ ಬಿಟ್ಟು, ಭಂಗಿ ನೆಟ್ಟ

ನಿಮ್ಮ ಪತ್ರಗಳು

ವಿಪರೀತ ಕೋತಿಗಳ ಹಾವಳಿಗೆ ಮುಕ್ತಿ ಇಲ್ಲವೇ?

ಮಾನ್ಯರೆ,


ಮೈಸೂರಿನ ವಿಶ್ವೇಶ್ವರನಗರದ ತಪೋವನ ಅಪಾರ್ಟ್‌ಮೆಂಟ್‌ನಲ್ಲಿ (ರಾಜರಾಜೇಶ್ವರಿ ದೇವಸ್ಥಾನದ ಎದುರು) ಸುಮಾರು 110 ಕುಟುಂಬಗಳು ವಾಸಿಸುತ್ತಿದ್ದು, ಕಳೆದ ಹಲವಾರು ತಿಂಗಳಿಂದ ಇಲ್ಲಿ ಹಾಗೂ ಸುತ್ತಮುತ್ತ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುವ ನಿವಾಸಿಗಳು ಕೋತಿಗಳ ಹಾವಳಿಯಿಂದ ಇನ್ನಿಲ್ಲದ ರೀತಿ ತೊಂದರೆ ಅನುಭವಿಸುವಂತಾಗಿದೆ. ದಿನನಿತ್ಯ ಮುಂಜಾನೆಯಿಂದ ರಾತ್ರಿವರೆಗೂ ಒಂದಲ್ಲಾ ಒಂದು ರೀತಿಯಲ್ಲಿ ಅವುಗಳ ಕಾಟ ಹೆಚ್ಚಾಗಿದ್ದು, ಮನೆಗಳಿಗೆ ನುಗ್ಗಿ ಪದಾರ್ಥಗಳನ್ನೆಲ್ಲಾ ಚೆಲ್ಲಾಪಿಲ್ಲಿ ಮಾಡಿ ಇನ್ನಿಲ್ಲದ ರೀತಿ ತೊಂದರೆ ಕೊಡುವುದರ ಮೂಲಕ ನಿವಾಸಿಗಳಿಗೆ ಇದರಿಂದ ಪಾರಾಗುವುದೇ ದೊಡ್ಡ ಸಮಸ್ಯೆಯಾಗಿದೆ.

ಮಕ್ಕಳು, ವೃದ್ಧರು ಜೀವಭಯದಿಂದ ಓಡಾಡುವ ಸ್ಥಿತಿ ನಿರ್ಮಾಣವಾಗಿದೆ. ನಿವಾಸಿಗಳು ಹೊರಗಡೆಯಿಂದ ತರುವ ಹಣ್ಣು-ಹಂಪಲು, ತರಕಾರಿ, ದಿನಸಿ ಪದಾರ್ಥ, ತಿಂಡಿ ತಿನಿಸುಗಳನ್ನು ಅಪಾರ್ಟ್‌ಮೆಂಟ್ ಒಳಗೆ ಹೊತ್ತು ತರುವ ಸಂದರ್ಭದಲ್ಲಿ ಕೋತಿಗಳ ದಾಳಿಗೆ ಒಳಗಾಗಿ ಎಲ್ಲವೂ ಚೆಲ್ಲಾಪಿಲ್ಲಿಯಾಗಿ ಬರಿಗೈಲಿ ಮನೆಯೊಳಗೆ ಪ್ರವೇಶಿಸುವ ಪರಿಸ್ಥಿತಿ ಅನೇಕ ಸಂದರ್ಭದಲ್ಲಿ ಎದುರಾಗಿದೆ ಹಾಗೂ ಮನೆಗಳ ಒಣ ಮತ್ತು ಹಸಿ ಕಸಗಳನ್ನು ಆಯುವ ಸಿಬ್ಬಂದಿಗಳು ಬರುವ ಸಮಯದಲ್ಲಿ, ಕೆಲ ಮನೆಯವರು ದಿನನಿತ್ಯ ಬೇಗನೇ ಕೆಲಸಕ್ಕೆ ನಿರ್ಗಮಿಸುವ ಪ್ರಮೇಯದ ಕಾರಣ ತಮ್ಮ ತಮ್ಮ ಮನೆಯ ಮುಂದೆ ಕಸ ಇಟ್ಟು ಹೋಗುವ ಸಮಯದಲ್ಲಿ ಕೋತಿಗಳು ಅವುಗಳನ್ನೆಲ್ಲಾ ಇಡೀ ಅಪಾರ್ಟ್ಮೆಂಟ್ ತುಂಬಾ ಹರಡಿ ಗಲೀಜು ಮಾಡುವುದಲ್ಲದೆ ಅಲ್ಲಲ್ಲಿ ಮಲ ಮೂತ್ರವನ್ನು ಮಾಡಿ ಕೆಟ್ಟ ದುರ್ವಾಸನೆಯನ್ನು ಅನುಭವಿಸುವ ಪರಿಸ್ಥಿತಿ ಇಲ್ಲಿಯ ನಿವಾಸಿಗಳದ್ದು.

ಈ ಬಗ್ಗೆ ಹಲವು ದೂರುಗಳನ್ನು ನಮ್ಮ ಆಡಳಿತ ಮಂಡಳಿಯ ಮುಖ್ಯಸ್ಥರು ಮೈಸೂರು ನಗರ ಪಾಲಿಕೆ ಹಾಗೂ ಅರಣ್ಯ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಿದ್ದಲ್ಲದೆ ಲಿಖಿತ ಮೂಲಕವೂ ದೂರು ಕೊಟ್ಟರೂ ಇದುವರೆವಿಗೆ ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ದಯವಿಟ್ಟು ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವ ಮೂಲಕ ಇಲ್ಲಿಯ ನಿವಾಸಿಗಳು ಕೋತಿಗಳ ಹಾವಳಿಯಿಂದ ಅನುಭವಿಸುತ್ತಿರುವ ತೊಂದರೆ, ಹಾನಿಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಇಲ್ಲಿನ ನಿವಾಸಿಗಳ ಮನವಿ.

– ಜಿ.ಎಸ್. ಗಣೇಶ್ ರಾವ್, ತಪೋವನ ಅಪಾರ್ಟ್‌ಮೆಂಟ್,
ರಾಜರಾಜೇಶ್ವರಿ ದೇವಸ್ಥಾನದ ಎದುರು, ವಿಶ್ವೇಶ್ವರನಗರ, ಮೈಸೂರು

'ಪ್ರಸಾದ'ದ ನಂತರ ತೀರ್ಥ ಯೋಜನೆಯೂ ಬರಬಹುದು!




ಮಾನ್ಯರೆ,

ಎಲ್ಲ ಬಿಟ್ಟು ಭಂಗಿ ನೆಟ್ಟ ಎನ್ನುವಂತೆ, ಪ್ರಸಾದ ಯೋಜನೆಯಡಿ ಬೆಟ್ಟಕ್ಕೆ ಯಾಕ್ರೋ ಅನಾವಶ್ಯಕವಾಗಿ ಬಾರ ಹೇರುತ್ತೀರಾ? ಹಿಂದೆ ನಡೆದ ಅಭಿವೃದ್ಧಿ ಕಾಮಗಾರಿಗಳ ಬಾರವನ್ನು ಹೊರಲಾರದೆ 2021ರಲ್ಲಿ ನಂದಿ ರಸ್ತೆ ಕುಸಿದಿದ್ದನ್ನು ಇನ್ನೂ ಸುಸ್ಥಿತಿಗೆ ತರಲಾಗಿಲ್ಲ, ಈಗ ಮತ್ತೇ ದೇವಸ್ಥಾನದ ಬಳಿಯೇ ಅಗೆಯುತ್ತಿರುವುದು ಎಷ್ಟು ಸರಿ? ಪ್ರಕೃತಿಯು ತನ್ನದೇ ಆದ ಸಮತೋಲನವನ್ನು ಕಾಯ್ದುಕೊಂಡಿರುತ್ತದೆ. ಅಭಿವೃದ್ಧಿಯ ಹೆಸರಿನಲ್ಲಿ ಕೈಹಾಕಿದರೆ ಅದು ಖಂಡಿತ ಮುನಿಯುತ್ತದೆ, ಇದರಿಂದ ಅವಗಡಗಳಿಗೆ ಕಾರಣವಾಗುತ್ತದೆ. ಚಾಮುಂಡಿಬೆಟ್ಟ ಹೇಗಿದೆಯೋ ಹಾಗೆ ಬಿಟ್ಟರೆ ಇಡೀ ಮೈಸೂರು ನಗರಕ್ಕೇ ಒಳ್ಳೆಯದು, ಇಲ್ಲವಾದಲ್ಲಿ ವಿಕೋಪಗಳಿಗೆ ಬಲಿ ಆಗಬೇಕಾದೀತು. ಬೆಟ್ಟದ ಕೆಳಗೆ ನಗರದಲ್ಲಿ ಹಾಸಿ ಹೊದ್ದಿಕೊಳ್ಳುವಷ್ಟು ಕಾಮಗಾರಿಗಳು ಆಗಬೇಕಾಗಿವೆ, ಅವುಗಳಾಗಲಿ. ಚಾಮುಂಡಿ ಬೆಟ್ಟವು ಪ್ರವಾಸಿ ತಾಣವಲ್ಲ, ಅದು ಧಾರ್ಮಿಕ ಸ್ಥಳ ಎನ್ನುವುದು ಮೈಸೂರಿಗರ ನಂಬಿಕೆ. ಇಂದು ಪ್ರಸಾದ ಯೋಜನೆಯಲ್ಲಿ ಬೆಟ್ಟದ ಅಭಿವೃದ್ಧಿ ಮುಂದೆ ತೀರ್ಥ ಯೋಜನೆಯಡಿ (ಕಲ್ಪನೆ) ಏನು ಕಾದಿದೆಯೋ ಬಲ್ಲವರಾರು. ಚಾಮುಂಡಿಬೆಟ್ಟ ಮೈಸೂರಿನ ಕಳಸ, ಅದನ್ನು ಎಷ್ಟು ಸೂಕ್ಷ್ಮವಾಗಿ ಇಟ್ಟುಕೊಳ್ಳುತ್ತೇವೆಯೋ ಅಷ್ಟೇ ನಮಗೆ ಒಳ್ಳೆಯದು, ಗೋಪುರದ ಕಳಸವನ್ನು ನೋಡಿ ಕೈಮುಗಿಯುವುದಕ್ಕೆ ಮಾತ್ರ ಸೀಮಿತ, ಮುಟ್ಟುವುದಕ್ಕೆ ಹೋಗಬಾರದು.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು

ನಾಡು ಕಂಡ ಶ್ರೇಷ್ಠ ಕಾರ್ಮಿಕ ದುರೀಣ ಅನಂತ ಸುಬ್ಬರಾವ್



ಮಾನ್ಯರೆ,

ಹಿರಿಯ ಕಾರ್ಮಿಕ ಧುರೀಣ, ಕಮ್ಯುನಿಸ್ಟ್ ಪಕ್ಷದ ಹಿರಿಯ ನಾಯಕ ಅನಂತ ಸುಬ್ಬರಾವ್ ನಿಧನ ದೇಶದ ಕಾರ್ಮಿಕ ಹೋರಾಟಗಳಿಗೆ ಉಂಟಾದ ತೀವ್ರ ನಷ್ಟವಾಗಿದೆ. ಸುಮಾರು 4–5 ದಶಕಗಳಿಂದ ಕಾರ್ಮಿಕ ಚಳವಳಿಗಳಲ್ಲಿ ಮುಂಚೂಣಿಯಲ್ಲಿದ್ದ ಅನಂತ ಸುಬ್ಬರಾಯರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕಾರ್ಮಿಕ ಒಕ್ಕೂಟಗಳ ನೇತೃತ್ವ ವಹಿಸಿ, ನೂರಾರು ಕಾರ್ಮಿಕ ಚಳುವಳಿಗಳಿಗೆ ಪ್ರೇರಕ ಶಕ್ತಿಯಾಗಿದ್ದರು. ಅಲ್ಲಿಯ ಕಾರ್ಮಿಕರ ಒಂದು ವರ್ಗ ಇವರ ಬಗ್ಗೆ ಅಸಂತುಷ್ಟಗೊಂಡಿತ್ತು ಎನ್ನಲಾಗಿದ್ದು, ಕ್ರಮೇಣವಾಗಿ ಅದು ಮರೆಯಾಗಿ, ಅನಂತ ಸುಬ್ಬರಾಯರು ಮತ್ತೆ ತಮ್ಮ ಸ್ಥಾನಕ್ಕೆ ಹಿಂದಿರುಗಿದ್ದರು. ಕಾಕತಾಳೀಯ ಎಂದರೆ, ಅವರ ಸಾವಿನ ಸಂದರ್ಭದಲ್ಲಿ ಕೂಡ ಸಾರಿಗೆ ನೌಕರರ ಬೆಂಗಳೂರು ಚಲೋ ಕಾರ್ಯಕ್ರಮದ ಅಂತಿಮ ಸಿದ್ಧತೆಯಲ್ಲಿದ್ದರು ಎನ್ನಲಾಗಿದ್ದು, ಉದ್ದೇಶಿತ ಬೆಂಗಳೂರು ಚಲೋ ಕಾರ್ಯಕ್ರಮ ದಿನಾಂಕ 29.01.2026 ರಂದು ನಿಗದಿಯಾಗಿತ್ತು.

ಕಾರ್ಮಿಕ ನಾಯಕನಾದವನಿಗೆ, ಶಿಸ್ತು, ಸಂಯಮ, ಬದ್ಧತೆ, ದೂರದರ್ಶಿತ್ವ, ಕಾರ್ಮಿಕ ಕಾನೂನುಗಳ ಬಗ್ಗೆ ಆಳವಾದ ಅರಿವು ಮುಂತಾದ ವಿಚಾರಗಳು ತಿಳಿದಿರಬೇಕು. ಜೊತೆ ಜೊತೆಗೆ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಆಳವಾದ ಅಧ್ಯಯನ ಮತ್ತು ಅವುಗಳ ಪರಿಹಾರೋಪಾಯಗಳನ್ನು ಅರಿತಿರಬೇಕು. ಯಾವುದೇ ಕಾರಣಕ್ಕೂ, ಕಾರ್ಮಿಕರ ಹಿತಾಸಕ್ತಿಗಳನ್ನು ಬಲಿಕೊಡಬಾರದು ಹಾಗೂ ಕಾರ್ಮಿಕರನ್ನು ಜೊತೆಯಾಗಿ ಕರೆದುಕೊಂಡು ಹೋಗುವ ಚೈತನ್ಯ ಇರಬೇಕು. ಬಹುತೇಕ ಈ ಎಲ್ಲಾ ಗುಣಗಳನ್ನು ಮೈಗೂಡಿಸಿಕೊಂಡಿದ್ದ ಹಿರಿಯ ಕಮ್ಯುನಿಸ್ಟ್ ನಾಯಕ ಅನಂತ ಸುಬ್ಬರಾಯರ ಆತ್ಮಕ್ಕೆ ಶಾಂತಿ ಕೋರೋಣ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಸದ್ಗುರು
ಸಂಸ್ಥಾಪಕರು,
ಇಶಾ ಫೌಂಡೇಷನ್

ಅನುಭಾವದ ಚಿಂತನೆಗಳು

ಶಿಕ್ಷಣ ಪದ್ಧತಿಯು ನಿರರ್ಥಕವೇಕೆಂದು ಭಾಸವಾಗುತ್ತದೆ

ಕಂಪ್ಯೂಟರ್ ವಿಜ್ಞಾನ ಪದವಿಯ ಮೊದಲ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದ ಒಬ್ಬ ವಿದ್ಯಾರ್ಥಿಯ ಪ್ರಕಾರ, ಅಲ್ಲಿ ಓದುತ್ತಿದ್ದ ಎಲ್ಲರೂ 15 ವರ್ಷಗಳಿಗಿಂತ ಜಾಸ್ತಿ ಕಾಲ ಶಿಕ್ಷಣವನ್ನು ಪಡೆದಿದ್ದರೂ ಅವರು ಕಲಿತ ಅನೇಕ ವಿಷಯಗಳಿಗೆ ಯಾವುದೇ ಉಪಯೋಗ ಅಥವಾ ಪ್ರಯೋಜನ ಕಂಡಿಲ್ಲ.

ಹಾಗಾಗಿ, ಅವರಿಗೆ ಅವರು ಓದಿದ ಕೆಲ ವಿಷಯಗಳು ನಿರರ್ಥಕ ಎನಿಸುತ್ತಿದೆಯಂತೆ! ಕಡೇಪಕ್ಷ ಎಂಜಿನಿಯರಿಂಗ್ ಕಾಲೇಜಿನಲ್ಲಿ ಹಾಗೆಲ್ಲಾ ಆಗಬಾರದು! ಪ್ರೌಢಶಾಲೆಯಲ್ಲಿ ಹಾಗೆನಿಸಬಹುದು ಎಂದು ನಾನು ಅರ್ಥಮಾಡಿಕೊಳ್ಳುತ್ತೇನೆ? ಅಲ್ಲಿ ಓದುವ ಹಲವಾರು ವಿಷಯಗಳು ನಿರರ್ಥಕ. ಆದರೆ, ಒಂದು ತಾಂತ್ರಿಕ ಕಾಲೇಜಿನಲ್ಲಿ ಅಂತಹದೆಲ್ಲಾ ಆಗಬಾರದು.


ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಕೇವಲ ಇಂಗ್ಲೆಂಡಿನ ರಾಣಿಯ ಸೇವೆಗಾಗಿ ಗುಮಾಸ್ತರನ್ನು ಒದಗಿಸಲು ಸೃಷ್ಟಿಸಲಾಯಿತು. ಅದರ ಹಿಂದೆ ಯಾವುದೇ ಸೃಜನಶೀಲತೆ ಇರಲಿಲ್ಲ-ವಿಧೇಯತೆ ನಮ್ಮ ಶಿಕ್ಷಣ ವ್ಯವಸ್ಥೆಯ ಪ್ರಮುಖ ಅಂಶವಾಗಿತ್ತು. ಇದಕ್ಕಾಗಿಯೇ ನೀವೊಂದು ಸಂಪೂರ್ಣ ಪಠ್ಯಪುಸ್ತಕವನ್ನು ಕಂಠಪಾಠ ಮಾಡಿ ಕೇವಲ ಅದನ್ನೇ ಪರೀಕ್ಷೆಯಲ್ಲಿ ಕಕ್ಕಬೇಕಿತ್ತು. ಅದನ್ನು ಶಿಕ್ಷಣದಲ್ಲಿನ ಹಿರಿಮೆಯೆಂದು ಭಾವಿಸಲಾಗಿತ್ತು. ತಾಂತ್ರಿಕ ಶಿಕ್ಷಣದಲ್ಲಿ ಈ ಪರಿಸ್ಥಿತಿ ಇದೆ ಎಂದು ನಾನು ಅಷ್ಟಾಗಿ ಹೇಳುವುದಿಲ್ಲ. ಅದು ಭಿನ್ನವಾಗಿದೆ ಎಂದು ನಾನು ತಿಳಿಯುತ್ತೇನೆ.

ಶಿಕ್ಷಣದ ಆದ್ಯತೆಯ ಬದಲಾವಣೆ

ಭಾರತದ ಜವಳಿ ಉದ್ಯಮದ ಮೇಲೆ ನಾವೊಂದು ನೀತಿಯನ್ನು ಬರೆದೆವು, ನದಿಗಳು ಮತ್ತು ಕೃಷಿಯ ಬಗ್ಗೆ ನಾವೊಂದು ನೀತಿಯನ್ನು ಬರೆದೆವು. ಮತ್ತೀಗ, ಶಿಕ್ಷಣದ ಬಗ್ಗೆ ಒಂದು ನೀತಿಯನ್ನು ಬರೆಯುವುದರಲ್ಲಿ ಕಾರ್ಯ ನಿರತರಾಗಿದ್ದೇವೆ.

ನಾನು ನಿರಂತರವಾಗಿ ಹೇಳಿದ ಬಳಿಕ, ಸರ್ಕಾರವು ಇತ್ತೀಚಿಗಷ್ಟೆ, ವಿದ್ಯಾರ್ಥಿಗಳು ಶಾಲೆಯಲ್ಲಿ ಕೇವಲ ಐವತ್ತು ಪ್ರತಿಶತದಷ್ಟು ಸಮಯವನ್ನು ಮಾತ್ರ ಶೈಕ್ಷಣಿಕ ವಿಷಯಗಳೆಡೆಗೆ ನೀಡಬೇಕು ಮತ್ತು ಉಳಿದ ಸಮಯದಲ್ಲಿ ಕ್ರೀಡೆ, ಕಲೆ, ಸಂಗೀತ, ಕರಕುಶಲ ಮತ್ತು ಇನ್ನಿತರ ವಿಷಯಗಳ ಕಡೆಗೆ ಗಮನಹರಿಸಬೇಕು ಎಂಬುದಾಗಿ ಘೋಷಿಸಿತು. ಕೇವಲ ಸ್ವಲ್ಪ ಹಿಂದೆಯಷ್ಟೇ ಇದನ್ನು ಘೋಷಿಸಲಾಯಿತು. ಪ್ರಕಟಣೆ ಹೊರಡಿಸುವುದು ಒಳ್ಳೆಯದೇ, ಆದರೆ ಶಾಲೆಗಳು ಈ ಬದಲಾವಣೆಗೆ ಸಜ್ಜುಗೊಂಡಿಲ್ಲ. ಮಕ್ಕಳಿಗೆ ನಾವೆಷ್ಟು ಗಣಿತ ಮತ್ತು ವಿಜ್ಞಾನವನ್ನು ಹೇಳಿಕೊಡುತ್ತೇವೆಯೋ, ಅಷ್ಟೇ ಸಂಗೀತ, ಕಲೆ, ಮತ್ತು ಇನ್ನಿತರ ವಿವಿಧ ವಿಷಯಗಳನ್ನು ಕಲಿಸಬೇಕೆಂದು ನಾನು ಯಾವಾಗಲೂ ಹೇಳುತ್ತಿರುತ್ತೇನೆ. ನಮ್ಮ ಶಾಲೆಗಳು ಈ ರೀತಿಯಲ್ಲೇ ನಿರ್ವಹಿಸಲ್ಪಡುತ್ತಿವೆ, ಆದರೆ ಅವುಗಳ ಸಂಖ್ಯೆ ಬಹಳ ಕಡಿಮೆ.

ಇದೀಗ ಕೇಂದ್ರ ಸರ್ಕಾರವು ಇದನ್ನು ಘೋಷಿಸಿದೆಯಾದರೂ, ಇದನ್ನು ಕಾರ್ಯರೂಪಕ್ಕೆ ತರಲು ಬಹಳಷ್ಟು ಸಮಯ ಬೇಕಾಗುವುದು. ಇದಕ್ಕೆ ಮೂಲಭೂತವಾದ ಮಾನವ ಸೌಕರ್ಯ, ಕಟ್ಟಡಗಳ ಸೌಕರ್ಯ, ತರಬೇತಿ ಮತ್ತಿನ್ನಿತರ ಅನೇಕ ವಿಷಯಗಳ ಅಗತ್ಯತೆ ಇದ್ದು, ಈ ದೇಶದಲ್ಲಿ ಇನ್ನೂ ಇದೆಲ್ಲಾ ಆಗಬೇಕಾಗಿದೆ.



> “ಇಂದಿನ ದಿನಗಳಲ್ಲಿ, ಎಲ್ಲರೂ ವೈದ್ಯಕೀಯ ಅಥವಾ ಇಂಜಿನಿಯರಿಂಗ್ ಶಿಕ್ಷಣವನ್ನು ಪಡೆಯುವುದು ಕೇವಲ ಸಾಮಾಜಿಕ ಪ್ರತಿಷ್ಠೆಯ ಕಾರಣಕ್ಕಾಗಿ ಮಾತ್ರ. ಒಬ್ಬ ಎಲೆಕ್ಟ್ರಿಷಿಯನ್ ಅಥವಾ ಬಡಗಿಯೂ ಕೂಡ, ಒಬ್ಬ ವೈದ್ಯ ಅಥವಾ ಇಂಜಿನಿಯರ್ ಹೊಂದಿರುವಷ್ಟೇ ಪ್ರತಿಷ್ಠೆಯನ್ನು ಹೊಂದಿರಬೇಕು. ಆಗ ಮಾತ್ರ, ಶಿಕ್ಷಣವು ಸರಿಸಮವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ, ಈ ಸಮಾಜದಲ್ಲಿ ಎಲ್ಲರಿಗಿಂತ, ರೈತರು ಉನ್ನತ ಸ್ಥಾನವನ್ನು ಹೊಂದಿರಬೇಕು. ಅವರು ನಮ್ಮ ಅನ್ನದಾತರು.

ಇದು ಸಮಯವನ್ನು ತೆಗೆದುಕೊಳ್ಳುತ್ತದೆ, ಆದರೆ ಕನಿಷ್ಠಪಕ್ಷ ಆ ಉದ್ದೇಶವಾದರೂ ಮೂಡಿಬಂದಿದೆ. ಶಾಲೆಯ ಶೈಕ್ಷಣಿಕ ಭಾಗವನ್ನು ದಿನಕ್ಕೆ ಗರಿಷ್ಠ ಮೂರರಿಂದ ನಾಲ್ಕು ಗಂಟೆಗಳಿಗಷ್ಟೇ ಹೇಗೆ ಸೀಮಿತಗೊಳಿಸಬಹುದೆಂದು ನಾವು ನೋಡುತ್ತಿದ್ದೇವೆ. ಉಳಿದ ಸಮಯದಲ್ಲಿ ಅವರು ಇನ್ನಿತರ ವಿಷಯಗಳನ್ನು ಕಲಿತುಕೊಳ್ಳಬೇಕು.

ಬೆಳೆಯುತ್ತಿರುವ ಅಪಾಯ

ನಾವೀಗ ಕಟ್ಟಿರುವ ರಾಷ್ಟ್ರವು ಹೇಗಿದೆಯೆಂದರೆ, ಒಬ್ಬ ರೈತನ ಮಗ, ತನ್ನ ತಂದೆಯೊಂದಿಗೆ ಜಮೀನಿಗೆ ಹೋಗಿ ಕೃಷಿ ಕೆಲಸ ಮಾಡುತ್ತಿದ್ದರೆ, ಆ ತಂದೆಯನ್ನು ಬಾಲ ಕಾರ್ಮಿಕ ಕಾಯಿದೆಯಡಿ ಬಂಧಿಸಬಹುದು. ಹೌದು, ಇದು ಸತ್ಯ! ದೇಶದಲ್ಲಿ ಇದು ಅತ್ಯಂತ ಅಪಾಯಕಾರಿ ಪರಿಸ್ಥಿತಿಯಾಗಿ ಬೆಳೆಯುತ್ತಿದೆ. ನಮ್ಮ ದೇಶದಲ್ಲಿನ ಕೇವಲ ಎರಡರಿಂದ ನಾಲ್ಕು ಪ್ರತಿಶತದಷ್ಟು ರೈತರು ಮಾತ್ರ ತಮ್ಮ ಮಕ್ಕಳು ಕೃಷಿ ಕೆಲಸ ಮಾಡಬೇಕೆಂದು ಬಯಸುತ್ತಾರೆ. ಹಾಗಾಗಿ, ಇನ್ನು 20 ವರ್ಷಗಳಲ್ಲಿ, ಈ ಪೀಳಿಗೆಯು ಮುಗಿದ ನಂತರ, ನಮ್ಮ ದೇಶದಲ್ಲಿ ಆಹಾರವನ್ನು ಬೆಳೆಯುವವರು ಯಾರು?

ನಿಮಗೆ ತಾಂತ್ರಿಕ ಜ್ಞಾನವಿರಬಹುದು, ನೀವು ಎಂ.ಬಿ.ಎ. ಮತ್ತಿತರ ವಿಷಯಗಳನ್ನು ಮಾಡಬಹುದು. ಆದರೆ ವ್ಯವಸಾಯವನ್ನು ಮಾಡಿ ಒಂದು ಬೆಳೆಯನ್ನು ತೆಗೆಯಿರಿ, ನೋಡೋಣ. ಇದು ತುಂಬಾ ಜಟಿಲವಾದ ಪ್ರಕ್ರಿಯೆ! ಕೃಷಿ ಕೆಲಸವು ಅನಕ್ಷರಸ್ಥರಿಗೆ ಎಂದು ನಾವು ಭಾವಿಸುತ್ತೇವೆ, ಆದರೆ ಅದು ತಪ್ಪು.

ಕೃಷಿಯೆನ್ನುವುದು ಒಂದು ಅತ್ಯಂತ ಜಟಿಲ ಹಾಗೂ ಅತಿ ಸೂಕ್ಷ್ಮವಾದ ಕೆಲಸ. ಸಾಂಪ್ರದಾಯಿಕ ಶಿಕ್ಷಣವನ್ನು ಹೊಂದಿಲ್ಲದ ಕಾರಣ ಅವರಿಗೆ ಬುದ್ಧಿಯಿಲ್ಲವೆಂದಲ್ಲ. ಅವರಿಗೆ ತುಂಬಾ ಪ್ರಮುಖವಾದ ವಿಷಯವು ತಿಳಿದಿದೆ ಮತ್ತು ಅದರಿಂದಾಗಿಯೇ ನಾವೆಲ್ಲರೂ ಸಹ ಊಟ ಮಾಡುತ್ತಿದ್ದೇವೆ ಮತ್ತು ನಮ್ಮ ಹೊಟ್ಟೆಗಳು ತುಂಬಿವೆ. ಆದರೆ, ಮುಂದಿನ ಇಪ್ಪತ್ತೈದು ವರ್ಷಗಳಲ್ಲಿ, ಈ ದೇಶವು ತನ್ನ ಆಹಾರವನ್ನು ತಾನೇ ಉತ್ಪಾದಿಸಲು ಸಾಧ್ಯವಾಗದಂತಹ ಅಪಾಯದ ಸ್ಥಿತಿಯಲ್ಲಿದೆ.

ಸಾಮರ್ಥ್ಯವನ್ನು ಗುರುತಿಸುವುದು

ಕೇವಲ ಒಂದು ನಿರ್ದಿಷ್ಟ ಸಂಖ್ಯೆಯ ಮಕ್ಕಳು ಮಾತ್ರ ಶೈಕ್ಷಣಿಕ ವ್ಯಾಸಂಗವನ್ನು ಮಾಡಬೇಕು. ಇತರರು ಬೇರೆ ಕೌಶಲಗಳು ಮತ್ತು ದೇಶದಲ್ಲಿ ಮಾಡಬಹುದಾದಂತಹ ಇನ್ನಿತರ ವಿಷಯಗಳನ್ನು ಕಲಿತುಕೊಳ್ಳಬೇಕು.

ಇದು ಅವರ ಯೋಗಕ್ಷೇಮಕ್ಕಾಗಿಯೇ! ಎಲ್ಲರ ಮೆದುಳೂ ಸಹ ಶೈಕ್ಷಣಿಕ ವ್ಯಾಸಂಗಕ್ಕಾಗಿ ಮಾಡಲ್ಪಟ್ಟಿರುವುದಿಲ್ಲ. ಬಹಳಷ್ಟು ಜನರು ತಮ್ಮ ಶೈಕ್ಷಣಿಕ ಜೀವನದಲ್ಲಿ ಕಷ್ಟಗಳನ್ನು ಅನುಭವಿಸುತ್ತಾರೆ. ಕೆಲವರು ಶೈಕ್ಷಣಿಕ ವಿಷಯಗಳಲ್ಲಿ ಬಹಳಷ್ಟು ಆನಂದವನ್ನು ಕಾಣುತ್ತಾರೆ, ಆದರೆ ಹಲವರು ಓದುವುದಕ್ಕೆ ಮತ್ತು ಪರೀಕ್ಷೆಗಳನ್ನು ಎದುರಿಸುವುದಕ್ಕೆ ನರಳುತ್ತಾರೆ.

ಇಂತಹವರು ಶೈಕ್ಷಣಿಕ ವ್ಯಾಸಂಗವನ್ನು ಮಾಡಬಾರದು; ತಮ್ಮ ಸಹಜ ಸಾಮರ್ಥ್ಯಕ್ಕನುಸಾರವಾಗಿ ಅವರು ಬೇರೆ ರೀತಿಯ ಕೌಶಲಗಳನ್ನು ಕಲಿಯಬೇಕು. ಆದರೆ, ನಿಮ್ಮ ಸಹಜ ಸಾಮರ್ಥ್ಯವನ್ನು, ನೀವು ಆನಂದದಿಂದ, ಚೆನ್ನಾಗಿ ಮಾಡಬಹುದಾದುದ್ದೇನು ಎಂದು ಗುರುತಿಸುವವರು ಯಾರೂ ಇಲ್ಲ.

ಒಬ್ಬ ಎಲೆಕ್ಟ್ರಿಷಿಯನ್ ಅಥವಾ ಬಡಗಿ/ಒಬ್ಬ ವೈದ್ಯ ಅಥವಾ ಇಂಜಿನಿಯರ್..?

ಹತ್ತರಿಂದ ಹದಿನೈದು ವಯಸ್ಸಿನ ನಡುವೆ, ಮಕ್ಕಳು ತಮ್ಮ ಕಲಿಕೆಯ ವಿಷಯವನ್ನು ಆಯ್ಕೆ ಮಾಡಿಕೊಳ್ಳಬಹುದಾದ ಒಂದು ಪ್ರಕ್ರಿಯೆಯನ್ನು ನಾವು ಶಿಕ್ಷಣ ವ್ಯವಸ್ಥೆಯಲ್ಲಿ ತರಬೇಕು. ಇಂದಿನ ದಿನಗಳಲ್ಲಿ, ಎಲ್ಲರೂ ವೈದ್ಯಕೀಯ ಅಥವಾ ಇಂಜಿನಿಯರಿಂಗ್ ಶಿಕ್ಷಣವನ್ನು ಪಡೆಯುವುದು ಕೇವಲ ಸಾಮಾಜಿಕ ಪ್ರತಿಷ್ಠೆಯ ಕಾರಣಕ್ಕಾಗಿ ಮಾತ್ರ. ಒಬ್ಬ ಎಲೆಕ್ಟ್ರಿಷಿಯನ್ ಅಥವಾ ಬಡಗಿಯೂ ಕೂಡ, ಒಬ್ಬ ವೈದ್ಯ ಅಥವಾ ಇಂಜಿನಿಯರ್ ಹೊಂದಿರುವಷ್ಟೇ ಪ್ರತಿಷ್ಠೆಯನ್ನು ಹೊಂದಿರಬೇಕು. ಆಗ ಮಾತ್ರ, ಶಿಕ್ಷಣವು ಸರಿಸಮವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ, ಈ ಸಮಾಜದಲ್ಲಿ ಎಲ್ಲರಿಗಿಂತ, ರೈತರು ಉನ್ನತ ಸ್ಥಾನವನ್ನು ಹೊಂದಿರಬೇಕು. ಅವರು ನಮ್ಮ ಅನ್ನದಾತರು.

ಮೈಸೂರಲ್ಲಿ ಡ್ರಗ್ಸ್ ತಯಾರಿಕಾ ಘಟಕ ಪತ್ತೆ ಹಿನ್ನೆಲೆ; ಕೈಗಾರಿಕೋದ್ಯಮಿಗಳ ಜೊತೆ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮಹತ್ವದ ಸಭೆ

ಅಕ್ರಮ ವ್ಯವಹಾರಕ್ಕೆ ಆಸ್ಪದ ಮಾಡಿಕೊಡಬೇಡಿ; ನೀವೂ ಭಾಗಿಯಾಗಬೇಡಿ!

- ಕಟ್ಟಡ, ಶೆಡ್‌ಗಳ ಬಾಡಿಗೆಗೆ ಕೊಡುವಾಗ ಸೂಕ್ತ ದಾಖಲಾತಿ ಪಡೆಯಬೇಕು
- ಕಾರ್ಮಿಕರ ಬಗ್ಗೆ ಆಯಾ ಪೊಲೀಸ್ ಠಾಣೆಯಲ್ಲಿ ಮಾಹಿತಿ ನೀಡಿ
- ತಿಂಗಳಿಗೆ ಸರಿಯಾಗಿ ಬಾಡಿಗೆ ಬಂದರೆ ಸಾಕೆಂಬ ಮನೋಭಾವ ಬಿಡಿ





ಮೈಸೂರಿನಲ್ಲಿ ಡ್ರಗ್ಸ್ ತಯಾರಿಕಾ ಘಟಕ ಪತ್ತೆಯಾಗಿರುವ ಹಿನ್ನೆಲೆಯಲ್ಲಿ ನಗರದ ಹೆಬ್ಬಾಳಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಗುರುವಾರ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರು ಕೈಗಾರಿಕೋದ್ಯಮಿಗಳ ಸಭೆ ನಡೆಸಿದರು. (ಎಡಚಿತ್ರ) ಸಭೆಯಲ್ಲಿ ಭಾಗಿಯಾಗಿದ್ದ ಕೈಗಾರಿಕೋದ್ಯಮಿಗಳನ್ನು (ಬಲಚಿತ್ರ) ಕಾಣಬಹುದು.

ಮೈಸೂರು, ಜ.29(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಒಂದಾದ ನಂತರ ಒಂದು ಡ್ರಗ್ಸ್ ತಯಾರಿಕಾ ಘಟಕಗಳು ಪತ್ತೆಯಾಗುತ್ತಿರುವ ಹಿನ್ನೆಲೆಯಲ್ಲಿ ಇದಕ್ಕೆ ಕಡಿವಾಣ ಹಾಕಲು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಇಂದು ಮೈಸೂರಿನ ಕೈಗಾರಿಕೋದ್ಯಮಿಗಳು ಹಾಗೂ ಕೈಗಾರಿಕೆಗಳ ಆಡಳಿತ ಮಂಡಳಿಯ ಪ್ರತಿನಿಧಿಗಳ ಮಹತ್ವದ ಸಭೆ ನಡೆಸಿದರು.

ನಗರದ ಹೆಬ್ಬಾಳಿನ ಸಂಕ್ರಾಂತಿ ಸರ್ಕಲ್ ಬಳಿಯ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಇಂದು ನಡೆದ ಸಭೆಯಲ್ಲಿ ಮೈಸೂರಿನ ಹೆಬ್ಬಾಳು, ಮೇಟಗಳ್ಳಿ, ಹೂಟಗಳ್ಳಿ, ಕೂರ್ಗಳ್ಳಿ ಸೇರಿದಂತೆ ಇತರೆ ಕೈಗಾರಿಕಾ ಬಡಾವಣೆಗಳ 300 ಕ್ಕೂ ಹೆಚ್ಚು ಕೈಗಾರಿಕೋದ್ಯಮಿಗಳು ಹಾಗೂ ಕೈಗಾರಿಕೆಗಳ ಆಡಳಿತ ಮಂಡಳಿಯ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ವೇಳೆ ಮಾತನಾಡಿದ ಸೀಮಾ ಲಾಟ್ಕರ್, ಯಾವುದೇ ಕೈಗಾರಿಕೆಗಳು ಅಕ್ರಮ ವ್ಯವಹಾರಕ್ಕೆ ಅವಕಾಶ ಮಾಡಿಕೊಡಬಾರದು ಹಾಗೂ ಅಕ್ರಮದಲ್ಲಿ ಭಾಗಿಯಾಗಬಾರದು ಎಂದು ಎಚ್ಚರಿಸಿದರು.

ತಪ್ಪು ಮಾಡಿದ್ದೀರಾ ಎಂಬ ದೃಷ್ಟಿಯಿಂದ ನಿಮ್ಮನ್ನು ಇಲ್ಲಿಗೆ ಕರೆಸಿಲ್ಲ, ಯಾವುದೇ ಅಕ್ರಮ ನಡೆಯದಂತೆ, ಎಚ್ಚರಿಕೆ ನೀಡುತ್ತಿದ್ದೇವೆ ಎಂದು ತಿಳಿಸಿದರು.

ಈ ಮೊದಲು ಅಕ್ಕಪಕ್ಕದಲ್ಲಿ ವಾಸ ಮಾಡುವ ಜನರು ಸೇರಿದಂತೆ ಕೈಗಾರಿಕೆಗಳ ಬಗ್ಗೆ ಮಾಹಿತಿ ಇರುತ್ತಿತ್ತು. ಯಾರು ವಾಸ ಮಾಡುತ್ತಿದ್ದಾರೆ, ಏನು ತಯಾರಿಸುತ್ತಿದ್ದಾರೆಂಬ ಮಾಹಿತಿ ಇರುತ್ತಿತ್ತು. ಆದರೆ ಈಗ ಅಕ್ಕ ಪಕ್ಕದಲ್ಲಿ ಯಾರಿದ್ದಾರೆ, ಅಲ್ಲಿ ಏನು ತಯಾರಾಗುತ್ತಿದೆ, ಏನಾಗುತ್ತಿದೆ ಎಂಬ ಕನಿಷ್ಠ ಮಾಹಿತಿಯೂ ಯಾರಿಗೂ ಇಲ್ಲ ಎಂದು ಸೀಮಾ ಲಾಟ್ಕರ್ ಹೇಳಿದರು.

ಇಂದೂ ಅಹಮದಾಬಾದ್ ಎನ್‌ಸಿಬಿ ತಂಡ ಕಾರ್ಯಾಚರಣೆ

ಹೆಬ್ಬಾಳು ಕಾರ್ಖಾನೆಯಲ್ಲಿ ರಾಸಾಯನಿಕ ವಸ್ತುಗಳ ಬಗ್ಗೆ ಮಾಹಿತಿ ಸಂಗ್ರಹ

ಮೈಸೂರು, ಜ.29(ಬಿಎಲ್‌ಯು)– ಅಹಮದಾಬಾದ್ ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೊ (ಎನ್‌ಸಿಬಿ) ಅಧಿಕಾರಿಗಳು ಮೈಸೂರಿನಲ್ಲಿ ಇಂದು ಕೂಡ ಕಾರ್ಯಾಚರಣೆ ನಡೆಸಿದರು.

ನಗರದ ಹೆಬ್ಬಾಳಿನ ಟುಕ್-ಟುಕ್ ಹೌಸ್ ಹೋಲ್ಡ್ ಕೆಮಿಕಲ್ಸ್ ಪ್ರೊಡಕ್ಷನ್ ಸಲ್ಯೂಷನ್ ಮ್ಯಾನುಫ್ಯಾಕ್ಚರಿಂಗ್‌ನಲ್ಲಿ ಬೆಳಿಗ್ಗೆಯಿಂದಲೇ ಪರಿಶೀಲನೆ ನಡೆಸಿದರು. ಕಾರ್ಖಾನೆಯಲ್ಲಿರುವ ರಾಸಾಯನಿಕ ವಸ್ತುಗಳು, ಎಷ್ಟು ಪ್ರಮಾಣ ದಲ್ಲಿವೆ ಎಂಬ ಬಗ್ಗೆ ಪರಿಶೀಲನೆ ನಡೆಸಿದರು. ಈ ವೇಳೆ ಕಾರ್ಖಾನೆಯಲ್ಲಿರುವ ರಾಸಾಯನಿಕ ವಸ್ತುಗಳು, ದ್ರವ್ಯ ಸೇರಿದಂತೆ ಇತರೆ ವಸ್ತುಗಳ ಮಾದರಿಯನ್ನು ಸಂಗ್ರಹಿಸಿ ದ್ದಾರೆ. ಇವುಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲು ಉದ್ದೇಶಿಸಿದ್ದಾರೆ. ನಗರಕ್ಕೆ ನಿನ್ನೆಯೇ ಆಗಮಿಸಿರುವ ಎನ್‌ಸಿಬಿ ಅಧಿಕಾರಿಗಳು ಇಂದು ಕೂಡ ಮೈಸೂರಿನಲ್ಲೇ ವಾಸ್ತವ್ಯ ಹೂಡಿದ್ದು, ಅವರ ತನಿಖೆ ಪ್ರಗತಿಯಲ್ಲಿದೆ.

ಬಾಡಿಗೆ ಬಂದರೆ ಸಾಕು ಎಂಬ ಭಾವನೆ ಬಿಡಿ: ತಿಂಗಳಿಗೆ ಸರಿಯಾಗಿ ಬಾಡಿಗೆ ಬಂದರೆ ಸಾಕು, ಭೋಗ್ಯದ ಹಣ ತಮ್ಮ ಕೈ ಸೇರಿದರೆ ಸಾಕು ಎಂಬ ಮನೋಭಾವವಿದೆ. ಆದರೆ ಬಾಡಿಗೆಗೆ ಪಡೆದವರು ಯಾರು, ಅವರ ಹಿನ್ನೆಲೆ ಏನು, ಅವರು ಅಲ್ಲಿ ಏನು ತಯಾರು ಮಾಡುತ್ತಿದ್ದಾರೆ ಎಂಬ ಯಾವುದೇ ಮಾಹಿತಿ ಮಾಲೀಕರಿಗೆ ಇರುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈಗಲಾದರೂ ಪ್ರತಿಯೊಬ್ಬ ಕಾರ್ಖಾನೆ ಮಾಲೀಕರು ತಾವು ಬಾಡಿಗೆಗೆ ಕೊಟ್ಟಿರುವವರ ಬಗ್ಗೆ ತಮ್ಮ ವ್ಯಾಪ್ತಿಯ ಪೊಲೀಸ್ ಠಾಣೆಗೆ ಸಮಗ್ರ ಮಾಹಿತಿ ನೀಡಬೇಕು ಎಂದು ತಾಕೀತು ಮಾಡಿದರು.

ನಕಲಿ ದಾಖಲಾತಿ ನೀಡಿ ಬಾಡಿಗೆಗೆ ಪಡೆಯುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಬಾಡಿಗೆದಾರರ ಆಧಾರ್ ಕಾರ್ಡ್ ಸೇರಿದಂತೆ ಇತರೆ ದಾಖಲಾತಿಗಳನ್ನು ಸೂಕ್ಷ್ಮವಾಗಿ ಪರಿಶೀಲನೆ ನಡೆಸಬೇಕು ಎಂದು ಸಲಹೆ ನೀಡಿದರು.

ಇಲ್ಲಿ ಮಾಲೀಕರ ಜವಾಬ್ದಾರಿ ತುಂಬಾ ಇದೆ, ಅಕ್ಕ ಪಕ್ಕದಲ್ಲಿ ಏನು ನಡೆಯುತ್ತಿದೆ ಎಂಬ ಕನಿಷ್ಠ ಜ್ಞಾನ ತಿಳಿದಿರಬೇಕು, ಏನಾದರೂ ಸಂಶಯ ಬಂದರೆ ಪೊಲೀಸರಿಗೆ ತಕ್ಷಣ ವಿಷಯ ತಿಳಿಸಬೇಕು ಎಂದು ಕಿವಿಮಾತು ಹೇಳಿದರು.

ಅಷ್ಟೆ ಅಲ್ಲದೆ ತಮ್ಮ ಕಾರ್ಖಾನೆಯಲ್ಲಿ ಕೆಲಸ ಮಾಡುವ ಪ್ರತಿಯೊಬ್ಬ ಕಾರ್ಮಿಕರ ಬಗ್ಗೆ ಕೂಡ ಪೊಲೀಸ್ ಠಾಣೆಯಲ್ಲಿ ಮಾಹಿತಿ ನೀಡಬೇಕು. ಅದರಲ್ಲೂ ಹೊರ ಜಿಲ್ಲೆ ಹಾಗೂ ರಾಜ್ಯದಿಂದ ಬಂದವರ ಬಗ್ಗೆ ಸಮಗ್ರ ಮಾಹಿತಿ ನೀಡಬೇಕು ಎಂದು ಸೀಮಾ ಲಾಟ್ಕರ್ ಸೂಚಿಸಿದರು.

ನಿಮ್ಮ ವ್ಯಾಪ್ತಿಯ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಅವರ ಮೊಬೈಲ್ ನಂಬರ್ ಅನ್ನು ಇಟ್ಟುಕೊಂಡಿರಬೇಕು. ಅಕ್ರಮ ಚಟುವಟಿಕೆ ನಡೆಯುವುದು ಸೇರಿದಂತೆ ಇತರೆ ಸಂದರ್ಭದಲ್ಲಿ ಫೋನ್ ಮಾಡಿ ಮಾಹಿತಿ ನೀಡಿದರೆ ಪೊಲೀಸರು ತಕ್ಷಣವೇ ಸ್ಥಳಕ್ಕೆ ಬರುತ್ತಾರೆ ಎಂದು ಭರವಸೆ ನೀಡಿದರು.

ಪ್ರತಿಯೊಂದು ಕಾರ್ಖಾನೆ ಮಾಲೀಕರು ಸಂಬಂಧಿಸಿದ ಇಲಾಖೆಯ ಅನುಮತಿ ಪತ್ರ ಹಾಗೂ ನಿರಪೇಕ್ಷಣಾ ಪತ್ರ (ಎನ್‌ಒಸಿ) ವನ್ನು ಕಡ್ಡಾಯವಾಗಿ ಪಡೆಯಬೇಕು ಎಂದು ಸೀಮಾ ಲಾಟ್ಕರ್ ತಾಕೀತು ಮಾಡಿದರು.

ಬಾಡಿಗೆದಾರ ಅಕ್ರಮ ಎಸಗಿದರೆ ಮಾಲೀಕನಿಗೆ ಸಂಕಷ್ಟ ಸಾಧ್ಯತೆ

ಬಾಡಿಗೆದಾರರು ಅಕ್ರಮ ಎಸಗಿದಾಗ ಮಾಲೀಕರಿಗೆ ಸಂಕಷ್ಟ ಎದುರಾಗುವ ಹಿನ್ನೆಲೆಯಲ್ಲಿ ಅವರು ಸದಾ ಎಚ್ಚರದಿಂದಿರಬೇಕು ಎಂದು ಡಿಸಿಪಿ ಸುಂದರ್ ರಾಜ್ ಸಲಹೆ ನೀಡಿದರು.

ಹೆಚ್ಚು ಬಾಡಿಗೆ ಕೊಡುತ್ತಾರೆಂದು ದುರಾಸೆಯಿಂದ ವಿಚಾರ ಮಾಡದೆ ಬಾಡಿಗೆಗೆ ನೀಡಬಾರದು. ಒಂದು ವೇಳೆ ಹೀಗೆ ಬಾಡಿಗೆಗೆ ಪಡೆದವನು ಅಕ್ರಮ ಚಟುವಟಿಕೆಯಲ್ಲಿ ಭಾಗಿಯಾಗಿ ಪೊಲೀಸರಿಗೆ ಸಿಕ್ಕಿ ಬಿದ್ದಾಗ ಸಂಕಷ್ಟ ಎದುರಾಗುವ ಸಾಧ್ಯತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಬಾಡಿಗೆಗೆ ನೀಡುವಾಗ ಆಧಾರ್ ಕಾರ್ಡ್, ಮೂಲ ವಿಳಾಸ ಸೇರಿದಂತೆ ಇತರೆ ದಾಖಲಾತಿಗಳನ್ನು ಪಡೆಯಬೇಕು ಎಂದು ಕಿವಿಮಾತು ಹೇಳಿದರು.

ಪ್ರಮುಖವಾಗಿ ನಿಮ್ಮ ಕಾರ್ಖಾನೆಯಲ್ಲಿ ಕೆಲಸ ಮಾಡುವ ಉತ್ತರ ಭಾರತದ ಕಾರ್ಮಿಕರ ಬಗ್ಗೆ ಆಯಾ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು ಎಂದು ತಾಕೀತು ಮಾಡಿದರು.

ಇಂತಹ ಕಾರ್ಮಿಕರು ಒಂದು ಕಡೆ ನಿಲ್ಲುವುದಿಲ್ಲ, ಆಗಾಗ ಕೆಲಸದ ಸ್ಥಳ ಬದಲಾಯಿಸುತ್ತಿರುತ್ತಾರೆ. ಮಾಹಿತಿ ನೀಡಿದ್ದರೆ ಅವರೇನಾದರೂ ಅಪರಾಧ ಕೃತ್ಯ ಎಸಗಿದರೆ ಅವರನ್ನು ಬಂಧಿಸಲು ಪೊಲೀಸರಿಗೆ ಅನುಕೂಲವಾಗುತ್ತದೆ ಎಂದು ಸುಂದರ್ ರಾಜ್ ಅಭಿಪ್ರಾಯಪಟ್ಟರು.

ಡಿಸಿಪಿ ಸುಂದರ್ ರಾಜ್, ಎಸಿಪಿ ರವಿ ಪ್ರಸಾದ್, ಹೆಬ್ಬಾಳು ಕೈಗಾರಿಕಾ ಬಡಾವಣೆಯ ಅಧ್ಯಕ್ಷ ಪ್ರಕಾಶ್, ಮೈಸೂರು ಕೈಗಾರಿಕೋದ್ಯಮಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್, ಮೈಸೂರು ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಸತೀಶ್, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ದಿನೇಶ್, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿ ಕುಮಾರ್, ಫ್ಯಾಕ್ಟರೀಸ್ ಅಂಡ್ ಬಾಯ್ಲರ್ ಅಧಿಕಾರಿ ಮಹದೇವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬೇಕಾಗಿದ್ದಾರೆ

ಮೈಸೂರಿನ ಖಾಸಗಿ ಕಂಪನಿಗೆ, Fortuner ಮತ್ತು Automatic ಕಾರು ಓಡಿಸುವ ಡ್ರೈವರ್‌ಗಳು ಬೇಕಾಗಿದ್ದಾರೆ.
ಸಂಬಳ: 25,000-30,000
ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
9187412584 / 9187312582

NOT GETTING YOUR
STAR OF MYSORE
&
ಮೈಸೂರು ಮಿತ್ರ
Call:
98452-96447
99003-82840

ಕರ್ನಾಟಕ ಸಿಲ್ಕ್ & ಸ್ಯಾರೀಸ್
KARNATAKA SILK & SAREES
ISO 9001:2015 · SILK MARK
Sanmathi cloth Center
to
Karnataka Silk & Sarees 1976 to 2026
50 Years Golden Jubilee
Special Discount 10 + 5 %
30th January to 10th February
We accept all major credit cards
142, K.D. Road, jayalakshmipuram, Mysore - 570012
Ph: 0821-4259099, Mob : 9243490999

ಮದುವೆ ಸಮಾರಂಭಗಳ ಪ್ರಯುಕ್ತ!
ಪರಿಶುದ್ಧ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ
ಪ್ರದರ್ಶನ ಮತ್ತು ಮಾರಾಟ

OPENING TODAY
ಸಿಲ್ಕ್ ಇಂಡಿಯಾ® 2026
Exclusive Wedding Collections

ಭಾರತದ ಎಲ್ಲಾ ರಾಜ್ಯಗಳಿಂದ ಪರಿಶುದ್ಧ ರೇಷ್ಮೆ ಸೀರೆಗಳು ಹಾಗೂ ರೇಷ್ಮೆ ಉತ್ಪನ್ನಗಳು
ಬಿಹಾರ್ : ತಸ್ಸರ್ ರೇಷ್ಮೆ ಸೀರೆಗಳು, ಸ್ಟೋಲ್ಸ್, ಶಾಲುಗಳು, ಕರ್ನಾಟಕ : ಕ್ರೇಪ್, ಶಿಫಾನ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ ತಮಿಳುನಾಡು : ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು, ಆಂಧ್ರ ಪ್ರದೇಶ : ಧರ್ಮಾವರಂ ಸೀರೆಗಳು, ಉಪ್ಪಡಾ ಮತ್ತು ಗೊಡ್ವಾಲ್ ಸೀರೆಗಳು, ಮಂಗಲಗಿರಿ ಹಾಗೂ ಪೊಚಂಪಲ್ಲಿ ಸೀರೆಗಳು ಉತ್ತರ ಪ್ರದೇಶ : ಬನಾರಸ್ ಮತ್ತು ಜಮ್‌ದಾನಿ, ಜಮಾವರ್ ರೇಷ್ಮೆ, ಟೆಂಪಲ್ ಬಾರ್ಡರ್‌ಉಳ್ಳ ಮುಲ್‌ಬಾರಿ ಸಿಲ್ಕ್, ಲಕ್ನೋ ಚಿಕಾನ್ ಕಸೂತಿ, ಮಹರಾಷ್ಟ್ರ : ಪೈಥಾಣಿ ಸೀರೆ, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್, ಪಂಜಾಬ್ : ಪಟಿಯಾಲ ಡ್ರೆಸ್ ಮೆಟೀರಿಯಲ್ಸ್ ಒರಿಸ್ಸಾ : ಸಂಬಲ್‌ಪುರಿ, ಇಕ್ಕತ್, ಬೋಂಕೈ ಸೀರೆಗಳು, ಹ್ಯಾಂಡ್‌ಲೂಮ್ ಸಿಲ್ಕ್ ಕಾಟನ್ ಛತ್ತೀಸ್‌ಘಡ್ : ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು, ಮಧ್ಯ ಪ್ರದೇಶ : ಮಹೇಶ್ವರಿ ಮತ್ತು ಚಂದೇರಿ ಸಿಲ್ಕ್ ಪಶ್ಚಿಮ ಬಂಗಾಳ : ಢಾಕ ಸೀರೆಗಳು, ಬಲ್‌ಚೂರಿ ರೇಷ್ಮೆ, ಕಲ್ಕೋತ್ತಾ ರೇಷ್ಮೆ ಸೀರೆಗಳು ಮತ್ತು ಕಾಂತ ಎಂಬ್ರಾಯಿಡರಿ ಸೀರೆಗಳು, ಅಸ್ಸಾಂ : ಮುಗಾ ಮತ್ತು ಎರ್ರಿ ರೇಷ್ಮೆ ಸೀರೆಗಳು, ಜಮ್ಮು ಮತ್ತು ಕಾಶ್ಮೀರ : ಚಿನಾನ್, ಟೆಡ್ಡಿ ರೇಷ್ಮೆ ಸೀರೆಗಳು, ಪಶ್ಮೀನಾ ಸೀರೆಗಳು, ಸ್ಟೋಲ್ಸ್, ಶಾಲುಗಳು ರಾಜಾಸ್ಥಾನ್ : ಕೋಟಾ ಸಿಲ್ಕ್, ಕೈ ಅಚ್ಚಿನ ಸೀರೆಗಳು ...

30 ಜನವರಿ ಯಿಂದ 8 ಫೆಬ್ರವರಿ 2026 ರವರೆಗೆ | ಸಮಯ : ಬೆಳಗ್ಗೆ 10.30 ರಿಂದ ಸಂಜೆ 8.30 ರವರೆಗೆ
ನಂಜರಾಜ ಬಹದ್ದೂರ್ ಛತ್ರ
ವಿನೋಬಾ ರಸ್ತೆ, ಮೈಸೂರು
Abhivrudhi Silk India | silkindia_mysore_since2011 | Entry Free | Contact : 98977 09954
(Registered with O/o D C (H) Ministry of Textiles, Govt. of India)

KARNATAKA STATE BOARD OF AUQAF
"Darul Awkaf" No.6 Cunningham Road, BANGALORE-560052.
No. KSBA/ELE/01/MYS/2025-26 Date: 29.01.2026

NOTIFICATION
OFFICE OF THE ELECTION OFFICER IDGAH SUNNI, ANEGUNDI ROAD, TILAKNAGAR, MYSURU.

Sub: Conduct of election for the Constitution of Managing Committee to Idgah Sunni, Anegundi Road, Tilak Nagar, Mysuru.
Ref: 1. W.P. No.19205/2016 of the Hon'ble High Court of Karnataka, Bengaluru.
2.W.P. No.51367/2019 & WP No. 43473 of 2019 of the Hon'ble High Court Bengaluru.

Sl. No	Details of events	Date & Time	Authorized officer
	Publication of Notification for election to the management of Idgah Sunni, Anegundi Road, Tilak Nagar, Mysuru & commencement of Election process	On 29.01.2026 @ 3:00 PM	By Election Officer/Authorized Officer, at the office of Idgah Suni Farooqia Boys High School, Anegun Road, Tilak Nagar, Mysuru.
	Issue of nomination forms and receiving of filled forms	On 31.01.2026 to 06.02.2026 @10:00 AM to 01:00 P.M	By Election Officer/Authorized Officer, at the office of Idgah Sunni, Farooqia Boys High School, Anegundi Road, Tilak Nagar, Mysuru.
	Last date for receipt of filled in application form	On 06.02.2026 @ 10:00 AM to 01:00 P.M	By Election Officer/Authorized Officer, at the office of Board of Idgah Sunni, Farooqia Boys High School, Anegundi Road, Tilak Nagar, Mysuru.
	Scrutiny of nomination forms & Publication of eligible candidates	On 07.02.2026 at 11:00 A.M	By Election Officer/Authorized Officer, at the office of Idgah Sunni, Farooqia Boys High School, Anegundi Road, Tilak Nagar,Mysuru.
	Withdrawal of nominations by the candidates and Publication of Final List contesting candidates	On. 08.02.2026 at 10:00 A.M to 01:00 P.M	By Election Officer/Authorized Officer, at the office of Idgah Sunni, Farooqia Boys High School, Anegundi Road, Tilak Nagar,Mysuru.
	Allotment of Symbols if necessary	On. 08.02.2026 at 3.00 P.M	By Election Officer, at the office of Idgah Sunni, Farooqia Boys High School, Anegundi Road, Tilak Nagar,Mysuru.
	Election to the members of Managing Committee of Idgah Sunni, Anegundi Road, Tilak Nagar, Mysuru	On 15.02.2026 At 8:00 AM to 4:00 P.M	By Election Officer, at the office of Idgah Sunni, Farooqia Boys High School, Anegundi Road, Tilak Nagar,Mysuru.
	Counting of votes & Declaration of Result	On 15.02.2026 at 5:00 P.M	At the premises of Idgah Sunni, Farooqia Boys High School, Anegundi Road, Tilak Nagar, Mysuru.

NOTE: After the issue if the calendar of event of office of the of Idgah Sunni, Anegundi Road, Tilak Nagar, Mysuru, will work on all working days including Sunday & General Holidays.

Sd/-
(Sri NISSAR AHMED)
Election Officer

THE BEST QUALITY WATER PROOF Plywood
₹69/-* PER SQ.FT.
15 YEARS CERTIFIED WARRANTY
Neem® BOND PLATINUM · Neem™ AKSHAYAGOLD
9148991267 | 9901291267

ಮೈಸೂರು ಮಿತ್ರ
46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಹಸಿರು ನಮ್ಮ ಉಸಿರು

G9 projects — Designing your Dreams · Vee2 Developers
POORVA SHELTERS PHASE - I , II & III
20×30 | 30×40 &20×40 | 30×50
Price Starts from
₹ 2,299/-sq.ft
Near to Marvel PU College
Lalithadripura Ring road Mysuru
8088-707-707

DON'T MISS!
Swadesi Utsav
HANDICRAFTS & HANDLOOM
Entry free · 2026 30th January to 8th February · 10 Days only
— FABULAOUS COLLECTION OF :—
• Handlooms • Handicrafts • Jewellery
• Home Decor • Wooden furniture • Crockery & more
LEELA CHENNIAH KALAYANA MANTAPA, NEXT TO MAHARANI COLLEGE, VALMIKI ROAD, VINAYAKA NAGAR, MYSURU-570006
9590018133
9035160215

WANTED STAFF
FOR A REPUTED HOTEL IN MYSORE
Positions open for:
- FRONT OFFICE MANAGER (Qualified in Hotel Management)
- Front Office Executive or Receptionist (fresher/ experienced)
- House keeping staff male/female (experienced or fresher),
- Restaurant Captian (experienced/Fresher)
- Restaurant cleaner (experienced/fresher)

Contact now for job opportunities @
8431800081
9972096314

ಕರ್ನಾಟಕ ಸರ್ಕಾರ – ಮುಜರಾಯಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು–571301.ಮೈಸೂರು ಜಿಲ್ಲೆ
Telephones 08221-226245, Email : tnanjangud@gmail.com
ಸಂ:ಎಸ್‌ಎಸ್‌ಟಿ/ಎ.ಇ/ಡಿ.ವಿ.ಪಿ/13/2025–26 ದಿನಾಂಕ: 22–01–2026

ಪತ್ರಿಕಾ ಟೆಂಡರ್ ಪ್ರಕಟಣೆ

ವಿಷಯ:–ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ 2025–26 ನೇ ಸಾಲಿನ ದೊಡ್ಡ ಜಾತ್ರೆಯ ಪ್ರಯುಕ್ತ ರಥೋತ್ಸವದಲ್ಲಿ ಶ್ರೀ ಸ್ವಾಮಿಯವರ ರಥ ಎಳೆಯಲು ಹೆಚ್ಚುವರಿಯಾಗಿ ಅಗತ್ಯವಾದ 350 ಅಡಿ (100ಮೀಟರ್) ಉದ್ದದ 18 ಇಂಚು ಸುತ್ತಳತೆಯ ಉತ್ತಮ ಗುಣ ಮಟ್ಟದ ತೆಂಗಿನ ನಾರಿನ ಹಗ್ಗವನ್ನು (ದೇವಸ್ಥಾನದ ಪ್ರಾಂಗಣದವರೆಗೆ ಸಾಗಾಣಿಕೆ ವೆಚ್ಚ ಸೇರಿ ಸರಬರಾಜು ಮಾಡುವ ಬಗ್ಗೆ.

ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ 2025–26 ನೇ ಸಾಲಿನ ದೊಡ್ಡ ಜಾತ್ರೆಯ ಪ್ರಯುಕ್ತ ರಥೋತ್ಸವದಲ್ಲಿ ಶ್ರೀ ಸ್ವಾಮಿಯವರ ರಥ ಎಳೆಯಲು ಹೆಚ್ಚುವರಿಯಾಗಿ ಅಗತ್ಯವಾದ 350 ಅಡಿ (100 ಮೀಟರ್) ಉದ್ದದ 18 ಇಂಚು ಸುತ್ತಳತೆಯ ಉತ್ತಮ ಗುಣ ಮಟ್ಟದ ತೆಂಗಿನ ನಾರಿನ ಹಗ್ಗವನ್ನು ದೇವಸ್ಥಾನದ ಪ್ರಾಂಗಣದವರೆಗೆ ಸಾಗಾಣಿಕೆ ವೆಚ್ಚ ಸೇರಿ ಸರಬರಾಜು ಮಾಡುವ ಬಗ್ಗೆ. ಟೆಂಡರ್ ಪ್ರಕಟಣೆ ಹೊರಡಿಸಿದ್ದು, ಸ್ಪರ್ಧಾತ್ಮಕ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹರು ದರಸೂಚಿಯನ್ನು ಮುಚ್ಚಿದ ಲಕೋಟೆಯಲ್ಲಿರಿಸಿ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಾಲಯ ನಂಜನಗೂಡು ರವರ ವಿಳಾಸ ದೊಂದಿಗೆ ದಿನಾಂಕ:–09–02–2026 ರಂದು ಸಂಜೆ 4–00ಗಂಟೆಯ ಒಳಗೆ

ಕ್ರ ಸಂ	ವಿಷಯ	ಇ.ಎಂ.ಡಿ ಮೊತ್ತ
1	ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ 2025–26 ನೇ ಸಾಲಿನ ದೊಡ್ಡ ಜಾತ್ರೆಯ ಪ್ರಯುಕ್ತ ರಥೋತ್ಸವದಲ್ಲಿ ಶ್ರೀಯವರ, ರಥ ಎಳೆಯಲು ಹೆಚ್ಚುವರಿಯಾಗಿ ಅಗತ್ಯವಾದ 350 ಅಡಿ (100ಮೀಟರ್) ಉದ್ದದ 18 ಇಂಚು ಸುತ್ತಳತೆಯ ಉತ್ತಮ ಗುಣ ಮಟ್ಟದ ತೆಂಗಿನ 'ನಾರಿನ ಹಗ್ಗವನ್ನು, ದೇವಸ್ಥಾನದ ಪ್ರಾಂಗಣ ದವರೆಗೆ ಸಾಗಾಣಿಕೆ ವೆಚ್ಚ ಸೇರಿ ಸರಬರಾಜು ಮಾಡುವ ಬಗ್ಗೆ	10,000=00

1 ನಿಗಧಿತ ಅರ್ಜಿ ಶುಲ್ಕ ಪಾವತಿಸಿ, ನಮೂನೆಯನ್ನು ಪಡೆಯತಕ್ಕದ್ದು.
2 ಟೆಂಡರ್ ದಾರರು ಅರ್ಜಿಯ ಜೊತೆಯಲ್ಲಿ ಇ.ಎಂ.ಡಿ ಯನ್ನು ಡಿ.ಡಿ. ಮೂಲಕ ಪಾವತಿಸತಕ್ಕದ್ದು.
3 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:–09–02–2026 ಸಂಜೆ 4.00 ಗಂಟೆ ವರೆಗೆ ಮಾತ್ರ.
4 ಟೆಂಡರ್ ತೆರೆಯುವ ದಿನಾಂಕ:–09–02–2026 ರಂದು ಸಂಜೆ; 5.00 ಗಂಟೆಗೆ,
5 ದರವನ್ನು, ನಮೂದಿಸುವಾಗ ಜಿ.ಎಸ್.ಟಿ. ಸೇರಿ ನಮೂದಿಸುವುದು.
6 ಹೆಚ್ಚಿನ ವಿವರಗಳಿಗೆ ಆಡಳಿತ ಕಛೇರಿಯಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 08221–226245.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು,
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ದೇವಸ್ಥಾನ, ನಂಜನಗೂಡು.

DESIGNED TO MAKE EVERY SPACE BEAUTIFUL
2 BHK
HOME INTERIORS @ ₹2.9 LAKHS
HOME SPACE MART
Kushalnagar • Mysuru • Bengaluru
For Site Vist :
@ 91089 23123

ಜಿಲ್ಲಾಡಳಿತ ಮಂಡ್ಯ

ಕಾವೇರಿ ಲೋಕಪಾವ್ಯಾ: ಸಂಗಮ ಕ್ಷೇತ್ರ ಸುಸ್ಥಿತ ॥
ಶ್ರೀ ಚಕ್ರರಾಜ ಸಹಿತ ಶ್ರೀ ನಿಮಿಷಾಂಬಾ ನಮೋಸ್ತುತೇ ॥

ಶ್ರೀ ನಿಮಿಷಾಂಬಾ ದೇವಸ್ಥಾನ
ಗಂಜಾಂ, ಶ್ರೀರಂಗಪಟ್ಟಣ ಮಂಡ್ಯ ಜಿಲ್ಲೆ

ಮಾಘ ಶುದ್ಧ ಹುಣ್ಣಿಮೆ ಮಹೋತ್ಸವ–2026

ಧಾರ್ಮಿಕ ಕಾರ್ಯಕ್ರಮಗಳು

ಶ್ರೀ ವಿಶ್ವಾವಸು ಸಂವತ್ಸರದ ಉತ್ತರಾಯಣ ಶಿಶಿರ ಋತು ಮಾಘ ಮಾಸ ಶುಕ್ಲ ಪಕ್ಷ ಪೌರ್ಣಮಿ ಅಂಗವಾಗಿ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು, ಗಂಜಾಂ, ಶ್ರೀ ನಿಮಿಷಾಂಬಾ ದೇವಸ್ಥಾನದಲ್ಲಿ ದಿನಾಂಕ: 01–02–2026 ಭಾನುವಾರ ದಂದು ನಡೆಯುವ ಕಾರ್ಯಕ್ರಮಗಳ ವಿವರ ಬೆಳಗಿನ ಜಾವ 1–00 ಘಂಟೆಗೆ ಪಂಚಾಮೃತ ಅಭಿಷೇಕ ಪೂರ್ವಕ ಮಹಾಭಿಷೇಕ ಸೇವೆ ಬೆಳಗ್ಗೆ 8–30 ರಿಂದ 12–30 ರವರೆಗೆ ಗಣಹೋಮ, ನಕ್ಷತ್ರಹೋಮ, ದುರ್ಗಾಹೋಮ ಹಾಗೂ ಸತ್ಯನಾರಾಯಣಸ್ವಾಮಿ ಪೂಜೆಯನ್ನು ಲೋಕ ಕಲ್ಯಾಣಾರ್ಥವಾಗಿ ಏರ್ಪಡಿಸಲಾಗಿದೆ.

ಪ್ರಸಾದ ವಿನಿಯೋಗದ ಸೇವಾಕರ್ತರು :
ಶ್ರೀ ಸಾಯಿ ಅನ್ನಪೂರ್ಣೇಶ್ವರಿ ಟ್ರಸ್ಟ್,
ಬೆಂಗಳೂರು

ಸರ್ವರಿಗೂ ಆದರದ ಸುಸ್ವಾಗತ

ಶ್ರೀ ಶರತ್. ಬಿ ಭಾ.ಆ.ಸೇ
ಆಯುಕ್ತರು
ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು

ಡಾ. ಕುಮಾರ್, ಭಾ.ಆ.ಸೇ
ಜಿಲ್ಲಾಧಿಕಾರಿಗಳು
ಮಂಡ್ಯ ಜಿಲ್ಲೆ, ಮಂಡ್ಯ

ಶ್ರೀ ಬಿ.ಸಿ.ಶಿವಾನಂದಮೂರ್ತಿ ಕ.ಆ.ಸೇ (ಹಿ.ಶ್ರೇ)
ಅಪರ ಜಿಲ್ಲಾಧಿಕಾರಿಗಳು
ಮಂಡ್ಯ ಜಿಲ್ಲೆ, ಮಂಡ್ಯ

ಶ್ರೀ ಕೆ.ಆರ್. ಶ್ರೀನಿವಾಸ್ ಕ.ಆ.ಸೇ
ಉಪವಿಭಾಗಾಧಿಕಾರಿಗಳು
ಪಾಂಡವಪುರ ಉಪವಿಭಾಗ

ಶ್ರೀಮತಿ ಚೇತನಾ ಯಾದವ್.ಎಸ್.
ತಹಶೀಲ್ದಾರ್
ಶ್ರೀರಂಗಪಟ್ಟಣ ತಾಲ್ಲೂಕು

ಶ್ರೀ ಹೆಚ್.ಎಸ್.ಮಹೇಶ್
ಕಾರ್ಯನಿರ್ವಾಹಕ ಅಧಿಕಾರಿ
ಶ್ರೀ ನಿಮಿಷಾಂಬಾ ದೇವಸ್ಥಾನ ಗಂಜಾಂ, ಶ್ರೀರಂಗಪಟ್ಟಣ

ಶ್ರೀ ಎಸ್.ಎನ್. ದಯಾನಂದ
ಅಧ್ಯಕ್ಷರು, ವ್ಯವಸ್ಥಾಪನಾ ಸಮಿತಿ

ಶ್ರೀ ನಿಮಿಷಾಂಬಾ ದೇವಸ್ಥಾನ, ಗಂಜಾಂ

ವ್ಯವಸ್ಥಾಪನ ಸಮಿತಿ ಸದಸ್ಯರು:
ಶ್ರೀ ಸೂರ್ಯನಾರಾಯಣ ಭಟ್ ಪ್ರಧಾನ ಅರ್ಚಕರು, ಶ್ರೀ ಆರ್. ರಂಗಸ್ವಾಮಿ, ಶ್ರೀಮತಿ ಭಾಗ್ಯಲಕ್ಷ್ಮೀ, ಶ್ರೀಮತಿ ಸುಮಲತ. ಬಿ. ಶ್ರೀ ಜಿ.ಎನ್. ಪೂರ್ಣಪ್ರಜ್ಞಮೂರ್ತಿ, ಶ್ರೀ ಟಿ. ಕೃಷ್ಣ ಶ್ರೀ ಪಿ. ಬಾಲಸುಬ್ರಹ್ಮಣ್ಯ, ಮತ್ತು ಶ್ರೀ ಎಸ್. ಕೃಷ್ಣ, ದೇವಸ್ಥಾನದ ಸಿಬ್ಬಂದಿ ವರ್ಗ ಹಾಗೂ ಗಂಜಾಂ ಮತ್ತು ಸುತ್ತಮುತ್ತಲಿನ ಗ್ರಾಮಗಳ ಗ್ರಾಮಸ್ಥರು ಹಾಗೂ ಭಕ್ತಾಧಿಗಳು

ಶ್ರೀ ಮಲ್ಲಿಕಾರ್ಜುನ ಟ್ರಾವೆಲ್ಸ್
shree mallikarjuna travels
explore the world with comfort
ಬೆಂಗಳೂರು | ದಾವಣಗೆರೆ | ಹುಬ್ಬಳ್ಳಿ

20 ವರ್ಷಗಳ ವಿಶ್ವಾಸ
60+ ಗ್ರೂಪ್ ಟೂರ್‌ಗಳು
3,00,000+ ಸಂತೃಪ್ತ ಗ್ರಾಹಕರು
5 ಶಾಖೆಗಳು ಕರ್ನಾಟಕದಾದ್ಯಂತ

ನಮ್ಮ ಶಾಖೆ ಇದೀಗ ಮೈಸೂರಿನಲ್ಲಿ ತೆರೆದಿದೆ

ಉತ್ತರಭಾರತ ಪ್ರವಾಸಗಳು
- ಕಾಶಿ ಯಾತ್ರೆ — 6 ದಿನಗಳು — ಪ್ರತಿ ಸೋಮವಾರ
- ಪುರಿ, ಕೊಲ್ಕತ್ತಾ — 5 ದಿನಗಳು — ಪ್ರತಿ ಶುಕ್ರವಾರ
- ನೇಪಾಳ,ಮುಕ್ತಿನಾಥ — 9 ದಿನಗಳು — ಫೆಬ್ರವರಿ–ಅಕ್ಟೋಬರ್ ಪ್ರತಿ ತಿಂಗಳು
- ಚಾರ್‌ಧಾಮ್ ಯಾತ್ರೆ — 13 ದಿನಗಳು — ಮೇ,ಜೂನ್,ಸೆಪ್ಟೆಂಬರ್,ಅಕ್ಟೋಬರ್
- ಅಸ್ಸಾಂ, ಮೇಘಾಲಯ — 7/12 ದಿನಗಳು — ಫೆಬ್ರವರಿ, ಮಾರ್ಚ್, ಎಪ್ರಿಲ್
- ಲೇಹ್ ಲಡಾಖ್ — 10 ದಿನಗಳು — ಮೇ,ಜೂನ್,ಸೆಪ್ಟೆಂಬರ್
- ಕಾಶ್ಮೀರ್ — 6 ದಿನಗಳು — ಮಾರ್ಚ್,ಎಪ್ರಿಲ್,ಮೇ
- ಶಿಮ್ಲಾ. ಮನಾಲಿ — 7 ದಿನಗಳು — ಮಾರ್ಚ್,ಎಪ್ರಿಲ್,ಮೇ
- ಡಾರ್ಜಲಿಂಗ್ ಗ್ಯಾಂಗ್ಟಾಕ್ — 6 ದಿನಗಳು — ಮಾರ್ಚ್,ಎಪ್ರಿಲ್,ಮೇ
- ಭೂತಾನ್ — 7 ದಿನಗಳು — ಮಾರ್ಚ್,ಎಪ್ರಿಲ್,ಮೇ
- ರಾಜಸ್ಥಾನ — 7/12 ದಿನಗಳು — ಸೆಪ್ಟೆಂಬರ್,ಅಕ್ಟೋಬರ್,ನವೆಂಬರ್
- ಗುಜರಾತ್ — 9 ದಿನಗಳು — ಸೆಪ್ಟೆಂಬರ್,ಅಕ್ಟೋಬರ್,ನವೆಂಬರ್
- ಮಧ್ಯಪ್ರದೇಶ — 11 ದಿನಗಳು — ಸೆಪ್ಟೆಂಬರ್,ಅಕ್ಟೋಬರ್,ನವೆಂಬರ್
- ಅಂಡಮಾನ್ — 5 ದಿನಗಳು — ಮಾರ್ಚ್,ಎಪ್ರಿಲ್,ಮೇ

ದಕ್ಷಿಣಭಾರತ ಪ್ರವಾಸಗಳು
- ದಕ್ಷಿಣ ಕನ್ನಡ — 6 ದಿನಗಳು — ಪ್ರತಿ ತಿಂಗಳು
- ತಮಿಳುನಾಡು — 7 ದಿನಗಳು — ಪ್ರತಿ ತಿಂಗಳು
- ಕೇರಳ — 7 ದಿನಗಳು — ಪ್ರತಿ ತಿಂಗಳು
- ಮಹಾರಾಷ್ಟ್ರ — 7 ದಿನಗಳು — ಪ್ರತಿ ತಿಂಗಳು
- ಆಂಧ್ರಪ್ರದೇಶ — 7 ದಿನಗಳು — ಪ್ರತಿ ತಿಂಗಳು

ವಿದೇಶ ಪ್ರವಾಸಗಳು
- ದುಬೈ — 5/6 ದಿನಗಳು
- ಸಿಂಗಾಪುರ–ಮಲೇಷಿಯಾ — 7 ದಿನಗಳು
- ಶ್ರೀಲಂಕಾ — 7 ದಿನಗಳು
- ಬಾಲಿ — 7 ದಿನಗಳು
- ಸೌತ್ ಆಫ್ರಿಕಾ — 9 ದಿನಗಳು
- ವಿಯೆಟ್ನಾಂ ಕಾಂಬೋಡಿಯಾ — 7/10 ದಿನಗಳು
- ಚೀನಾ — 7 ದಿನಗಳು
- ಜಪಾನ್ — 7 ದಿನಗಳು
- ಸೌತ್ ಕೊರಿಯಾ — 9 ದಿನಗಳು
- ಯುರೋಪ್ — 10 ದಿನಗಳು

ನಮ್ಮ ಶಾಖೆಗಳು:
ಬೆಂಗಳೂರು । ಹುಬ್ಬಳ್ಳಿ । ದಾವಣಗೆರೆ । ಮೈಸೂರು

ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ:
9403890729

ಕಛೇರಿ ಸಮಯ:–ಸೋಮವಾರದಿಂದ ಶನಿವಾರದವರೆಗೆ, ಬೆಳಿಗ್ಗೆ 11:00 ರಿಂದ ಸಂಜೆ 7:00 ರವರೆಗೆ

ನಮ್ಮ ಪೊಲೀಸರೆ ಪತ್ತೆ ಹಚ್ಚಬಹುದಿತ್ತು

ಮೈಸೂರು, ಜ. 29(ಆರ್‌ಕೆ)–ದೆಹಲಿ ಪೊಲೀಸರು ಇಲ್ಲಿ ಬಂದು ಶೋಧಿಸುವ ಬದಲು ನಮ್ಮವರೇ ಪತ್ತೆ ಮಾಡಬಹುದಿತ್ತು ಎಂದು ಸಂಸದ ಯದುವೀರ್ ಒಡೆಯರ್ ಅಭಿಪ್ರಾಯಪಟ್ಟಿದ್ದಾರೆ.


ಯದುವೀರ್

ಇಂದು ಮಧ್ಯಾಹ್ನ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು ಡ್ರಗ್ಸ್ ಉತ್ಪಾದನೆ, ದಾಸ್ತಾನು, ಮಾರಾಟದಂತಹ ಚಟುವಟಿಕೆಗಳು ಮೈಸೂರಲ್ಲಿ ಇತ್ತೀಚೆಗೆ ವ್ಯಾಪಕ ರೀತಿ ನಡೆಯುತ್ತಿವೆ. ನಮ್ಮ ಪೊಲೀಸರಿಗೆ ಉತ್ತಮವಾದ ಸೌಲಭ್ಯಗಳನ್ನು ಒದಗಿಸಲಾಗಿದೆ. ಗುಪ್ತಚರ ವಿಭಾಗವೂ ಸದೃಢವಾಗಿರುವುದರಿಂದ ನಮ್ಮ ಪೊಲೀಸರು ಕಾರ್ಯಾಚರಣೆ ನಡೆಸಿ ಪತ್ತೆ ಮಾಡಬಹುದಿತ್ತು ಎಂದರು.

ಪೊಲೀಸ್ ಕಮಿಷ್ನರ್ ನನ್ನೊಂದಿಗೆ ಮಾತನಾಡಿದರು. ಮೈಸೂರಿನ ಹೆಬ್ಬಾಳಿನಲ್ಲಿ ಡ್ರಗ್ಸ್ ಸಂಬಂಧ ಯಾವುದೇ ವಸ್ತುಗಳು ಸಿಕ್ಕಿಲ್ಲ. ಕೆಲವು ರಾಸಾಯನಿಕ ವಸ್ತುಗಳಷ್ಟನ್ನೇ ಸೀಜ್ ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ. ಆದರೆ ದೆಹಲಿ ಪೊಲೀಸರು ಬರುವುದಕ್ಕಿಂತ ಮುಂಚೆಯೇ ಮಾಹಿತಿ ಕಲೆ ಹಾಕಿ ನಮ್ಮ ಪೊಲೀಸರೇ ಮಾಡಬಹುದಾಗಿತ್ತು. ಸರ್ಕಾರ ಪೊಲೀಸರಿಗೆ ಸ್ವತಂತ್ರವಾಗಿ ಕೆಲಸ ಮಾಡಲು ಅನುವು ಮಾಡಿಕೊಡಬೇಕು. ದೆಹಲಿ ಪೊಲೀಸರು ಮೈಸೂರಿಗೆ ಬಂದಿದ್ದಾರೆಂದರೆ ಅದು ರಾಜ್ಯದ ಪೊಲೀಸ್ ಇಲಾಖೆ ವೈಫಲ್ಯ ಎಂದೆನಿಸುತ್ತದೆ ಎಂದರು.

ಕರ್ತವ್ಯಕ್ಕಿಂತ ವಸೂಲಿಗೆ ಆದ್ಯತೆ

ಮೈಸೂರು,ಜ.29(ಆರ್‌ಕೆ)–ಪೊಲೀಸರು ಕರ್ತವ್ಯಕ್ಕಿಂತ ತಾವು ಪೋಸ್ಟಿಂಗ್‌ಗಾಗಿ ಜನಪ್ರತಿನಿಧಿಗಳಿಗೆ ನೀಡಿರುವ ಹಣ ವಸೂಲಿಗೆ ಆದ್ಯತೆ ನೀಡಿರುವುದರಿಂದ ಮೈಸೂರಿನಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟು ಅಪರಾಧ ಕೃತ್ಯಗಳು ಹೆಚ್ಚಾಗಲು ಪ್ರಮುಖ ಕಾರಣ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಅಭಿಪ್ರಾಯಪಟ್ಟಿದ್ದಾರೆ.


ಪ್ರತಾಪ್ ಸಿಂಹ

ಮೈಸೂರಲ್ಲಿ ಮಾದಕ ವಸ್ತು ತಯಾರಿಕಾ ಘಟಕಗಳು ಪತ್ತೆಯಾಗುತ್ತಿರುವ ಹಿನ್ನೆಲೆಯಲ್ಲಿ ಪ್ರತಿಕ್ರಿಯೆ ನೀಡಿರುವ ಅವರು, ಈ ಹಿಂದೆ ಗ್ಯಾಂಗ್ ರೇಪ್ ಪ್ರಕರಣ, ವಿದ್ಯಾರಣ್ಯಪುರಂನ ಜ್ಯುವೆಲರಿ ಅಂಗಡಿಯಲ್ಲಿ ಅಮಾಯಕನ ಕೊಂದು ಆಭರಣ ಹೊತ್ತೊಯ್ದುದ್ದೂ ಸೇರಿದಂತೆ ಹಲವು ಕ್ಲಿಷ್ಟಕರ ಪ್ರಕರಣಗಳನ್ನು ಪೊಲೀಸರು ಪತ್ತೆ ಹಚ್ಚಿದ ನಿದರ್ಶನಗಳಿವೆ. ಆದರೆ ಈಗ ಪೊಲೀಸ್ ಅಧಿಕಾರಿಗಳು ಆಯಕಟ್ಟಿನ ಠಾಣೆಗಳಿಗೆ ನಿಯೋಜನೆಗಾಗಿ ಶಾಸಕರಿಗೆ ಲಕ್ಷಾಂತರ ರೂ. ಹಣ ಕೊಡಬೇಕಾಗಿದೆ. ಅದು ಕೇವಲ 1 ವರ್ಷಕ್ಕೆ ಮಾತ್ರ. ಅಲ್ಲಿಯೇ ಮುಂದುವರಿಯಬೇಕೆಂದರೆ ಮತ್ತೆ ಅಷ್ಟು ಹಣ ಕೊಡಬೇಕು. ಪರಿಸ್ಥಿತಿ ಹೀಗಿರಬೇಕಾದರೆ, ಪೊಲೀಸ್ ಅಧಿಕಾರಿ ಹಣ ವಸೂಲಿಗೆ ಆದ್ಯತೆ ನೀಡುತ್ತಾನೆಯೇ ಹೊರತು ಜವಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸಲು ಸಮಯ ಸಿಗುವುದಿಲ್ಲ ಎಂದು ತೀವ್ರ ಆರೋಪ ಮಾಡಿದರು.

ಈ ಹಿಂದೆ ಗೃಹ ಸಚಿವರಾಗಿದ್ದ ಡಾ. ವಿ.ಎಸ್.ಆಚಾರ್ಯ ಅವರು ಸುಪ್ರೀಂಕೋರ್ಟ್ ನಿರ್ದೇಶನದ ಮೇರೆಗೆ ರಾಜ್ಯದ ಪೊಲೀಸ್ ಎಸ್ಟಾಬ್ಲಿಷ್‌ಮೆಂಟ್ ಬೋರ್ಡ್‌ಗೆ ಮರು ಚಾಲನೆ ನೀಡಿದ್ದರು. ಆ ಸಂದರ್ಭ ಪೊಲೀಸ್ ಇಲಾಖೆಯಲ್ಲಿ ಕೌನ್ಸಿಲಿಂಗ್ ಮೂಲಕ ಪಾರದರ್ಶಕವಾಗಿ ವರ್ಗಾವಣೆಗಳು ನಡೆಯುತ್ತಿದ್ದವು. ಯಾವುದೇ ಹಣಕಾಸಿನ ವ್ಯವಹಾರ ಇರದ ಕಾರಣ ಆಗ ಪೊಲೀಸ್ ಅಧಿಕಾರಿಗಳು ಹೆಚ್ಚು ಸಮರ್ಥವಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈಗ ಪೊಲೀಸ್ ಎಸ್ಟಾಬ್ಲಿಷ್‌ಮೆಂಟ್ ಬೋರ್ಡ್ ಅನ್ನು ಮರುಸ್ಥಾಪಿಸಿ ಪಾರದರ್ಶಕವಾಗಿ ವರ್ಗಾವಣೆ ಮಾಡುವ ನೀತಿಯನ್ನು ಜಾರಿಗೆ ತಂದರೆ ಮಾತ್ರ ಪೊಲೀಸ್ ವ್ಯವಸ್ಥೆ ಸುಧಾರಿಸಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಸಮಾಜಘಾತುಕರಿಗೆ ಭಯವೇ ಇಲ್ಲ

ಮೈಸೂರು,ಜ.29(ಆರ್‌ಕೆ)–ರೌಡಿಗಳು, ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿರುವವರು ಹಾಗೂ ಸಮಾಜಘಾತುಕರಿಗೆ ಪೊಲೀಸರೆಂದರೆ ಭಯವೇ ಇಲ್ಲ ಎಂದು ಮೈಸೂರು ನಗರ ಬಿಜೆಪಿ ಅಧ್ಯಕ್ಷ, ಮಾಜಿ ಶಾಸಕ ಎಲ್.ನಾಗೇಂದ್ರ ಆರೋಪಿಸಿದ್ದಾರೆ.


ಎಲ್.ನಾಗೇಂದ್ರ

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಕೊಲೆ, ಸುಲಿಗೆ, ದರೋಡೆಯಂತಹ ಕೃತ್ಯಗಳು ನಡೆಯುತ್ತಿದ್ದು, ಒಂದು ರೀತಿಯಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಡ್ರಗ್ಸ್ ಮಾಫಿಯಾ ಎಗ್ಗಿಲ್ಲದೆ ನಡೆಯುತ್ತಿದ್ದರೂ ಅದನ್ನು ತಡೆಗಟ್ಟದೆ ಪೊಲೀಸರು ಅಪರಾಧಿಕ ಹಿನ್ನೆಲೆ ಹೊಂದಿರುವ ಪುಡಿ ರೌಡಿಗಳ ಬರ್ತಡೆ ಪಾರ್ಟಿಗಳಲ್ಲಿ ಭಾಗವಹಿಸುತ್ತಿದ್ದರೆ ಸಮರ್ಥ ಪೊಲೀಸಿಂಗ್ ಹೇಗಾಗುತ್ತದೆ ಎಂದು ಪ್ರಶ್ನಿಸಿದರು.

ದುಡ್ಡು ಕೊಟ್ಟು ಬಂದ ಅಧಿಕಾರಿಗಳು ದುಡ್ಡು ಮಾಡುತ್ತಾರೆಯೇ ಹೊರತು ಸರಿಯಾಗಿ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಕಾಂಗ್ರೆಸ್ ಸರ್ಕಾರ ಬಂದಾಗಲೆಲ್ಲಾ ಇಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಈಗಲೂ ಅದಕ್ಕೆ ಜನಪ್ರತಿನಿಧಿಗಳೇ ಕಾರಣ. ಇದರ ಪರಿಣಾಮ ಸಾಂಸ್ಕೃತಿಕ ನಗರಿ ಮೈಸೂರಿನ ಘನತೆ, ಗೌರವ ಮಣ್ಣು ಪಾಲಾಗುತ್ತಿದೆ ಎಂದು ಎಲ್.ನಾಗೇಂದ್ರ ತಿಳಿಸಿದರು.

ಕಂಠಪೂರ್ತಿ ಕುಡಿದು ಕಾರು ಓಡಿಸಿ ಸರಣಿ ಅಪಘಾತ

ನಟ ಮಯೂರ್ ಪಟೇಲ್ ವಿರುದ್ಧ ಎಫ್‌ಐಆರ್

ಬೆಂಗಳೂರು, ಜ.29–ಸ್ಯಾಂಡಲ್‌ವುಡ್ ನಟ ಮಯೂರ್ ಪಟೇಲ್, ಪಾನಮತ್ತರಾಗಿ ಕಾರು ಚಲಾಯಿಸಿ ಸರಣಿ ಅಪಘಾತ ಮಾಡಿದ ಘಟನೆ ನಿನ್ನೆ ರಾತ್ರಿ ಬೆಂಗಳೂರಿನಲ್ಲಿ ನಡೆದಿದೆ.



ಅಜಾಗರೂಕ ಚಾಲನೆಯಿಂದ ಬೆಂಗಳೂರಲ್ಲಿ ತಡರಾತ್ರಿ ಸರಣಿ ಅಪಘಾತ ನಡೆದಿದೆ. ಕಂಠಪೂರ್ತಿ ಕುಡಿದು ತಮ್ಮ ಟೊಯೊಟಾ ಫಾರ್ಚೂನರ್ ಕಾರನ್ನು ಅವರು ವೇಗವಾಗಿ ಓಡಿಸಿದ್ದಾರೆ. ಈ ವೇಳೆ ನಿಂತಿದ್ದ ಕಾರುಗಳಿಗೆ ಡಿಕ್ಕಿ ಹೊಡೆದಿದ್ದಾರೆ. ಈ ಸಂಬಂಧ ಮಯೂರ್ ಪಟೇಲ್ ಮೇಲೆ ಪ್ರಕರಣ ದಾಖಲಾಗಿದೆ. ಅವರ ವಿರುದ್ಧ ಆಕ್ರೋಶವೂ ಕೇಳಿ ಬಂದಿದೆ.

ದೊಮ್ಮಲೂರು ಬಳಿ ಅಪಘಾತ: ನಿನ್ನೆ ಬುಧವಾರ ತಡರಾತ್ರಿ ಮಯೂರ್ ಪಟೇಲ್ ದೊಮ್ಮಲೂರು ಬಳಿಯ ರಸ್ತೆಯಲ್ಲಿ ಚಾಲನೆ ಮಾಡುತ್ತಿದ್ದಾಗ ಈ ಸರಣಿ ಅಪಘಾತ ನಡೆದಿದೆ ಎಂದು ಪ್ರತ್ಯಕ್ಷದರ್ಶಿಗಳು ಮತ್ತು ಪೊಲೀಸ್ ಮೂಲಗಳು ತಿಳಿಸಿವೆ. ಅವರ ವೇಗದ ಫಾರ್ಚೂನರ್ ಕಾರು ನಿಯಂತ್ರಣ ತಪ್ಪಿ ಶ್ರೀನಿವಾಸ್ ಮತ್ತು ಅಭಿಷೇಕ್ ಅವರ ವಾಹನಗಳು ಸೇರಿದಂತೆ ನಿಂತಿದ್ದ ಹಲವು ವಾಹನಗಳಿಗೆ ಡಿಕ್ಕಿ ಹೊಡೆದಿದೆ. ಮತ್ತೊಂದು ಸರ್ಕಾರಿ ವಾಹನವೂ ಭಾರೀ ಹಾನಿಗೊಳಗಾಗಿದೆ

ನಾನು ಅದನ್ನು ಸರಿಪಡಿಸುತ್ತೇನೆ

ಮಯೂರ್ ಪಟೇಲ್ ತನ್ನ ವಾಹನದಿಂದ ಇಳಿದು ಜನರೊಂದಿಗೆ ಮಾತನಾಡುತ್ತಿರುವ ವಿಡಿಯೊ ವೈರಲ್ ಆಗಿದೆ ಅಮು ಎಷ್ಟೇ ಬೆಲೆ ಆದರೂ, ನಾನು ಎಲ್ಲವನ್ನೂ ಸರಿಪಡಿಸುತ್ತೇನೆ ಎಂದು ಹೇಳಿದ್ದಾರೆ.

ಹಿರಿಯ ನಟ ಮದನ್ ಪಟೇಲ್ ಅವರ ಪುತ್ರ ಮಯೂರ್ ಪಟೇಲ್ 2000ನೇ ಇಸವಿಯಲ್ಲಿ 'ಆಂಧ್ರ ಹೆಂಡ್ತಿ' ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪದಾರ್ಪಣೆ ಮಾಡಿದರು. ಅವರ 2003ರ ಚಲನಚಿತ್ರ 'ಮಣಿ' ಅವರಿಗೆ ಸ್ವಲ್ಪ ವಿಮರ್ಶಾತ್ಮಕ ಪ್ರಶಂಸೆ ಗಳಿಸಿತು. ಆದರೆ ನಂತರದ ಚಿತ್ರಗಳಾದ 'ಗುನ್ನಾ' ಮತ್ತು 'ಸ್ಲಮ್' ಗಲ್ಲಾಪೆಟ್ಟಿಗೆಯಲ್ಲಿ ಛಾಪು ಮೂಡಿಸಲು ವಿಫಲವಾಯಿತು.

ಗುರು–ಶಿಷ್ಯರ ಸಮ್ಮಿಲನ ಸಮಾರಂಭ...



ಮೈಸೂರಿನ ನ್ಯೂ ಬಂಬೂಬಜಾರ್‌ನ ಮೇದರ್ ಬ್ಲಾಕ್‌ನಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ತಾರಾಸು ರಂಗಮಂದಿರದಲ್ಲಿ ಹೊಂಗಿರಣ ಹಳೆಯ ವಿದ್ಯಾರ್ಥಿಗಳ ಸಂಘದಿಂದ ಗುರು–ಶಿಷ್ಯರ ಸಮ್ಮಿಲನ ಸಮಾರಂಭ ನಡೆಯಿತು. ಮಾಜಿ ಮೇಯರ್ ಪಿ.ವಿಶ್ವನಾಥ್ ಸಮಾರಂಭ ಉದ್ಘಾಟಿಸಿದರು. ಶಾಲಾ ಶಿಕ್ಷಕರು ಹಾಗೂ ಎಲ್ಲ ಹಳೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಜೆ.ಎಸ್.ಪುಟ್ಟಸೋಮಾರಾಧ್ಯ ನಿಧನ



ಮೈಸೂರು, ಜ.29– ಮೈಸೂರು ಅಗ್ರಹಾರದ ರಾಮಾನುಜ ರಸ್ತೆ, 5ನೇ ಕ್ರಾಸ್ ನಿವಾಸಿ, ನಿವೃತ್ತ ಶಿಕ್ಷಕ ಜೆ.ಎಸ್.ಪುಟ್ಟಸೋಮಾರಾಧ್ಯ (85) ಅವರು ಗುರುವಾರ ಮಧ್ಯಾಹ್ನ ನಿಧನರಾದರು.

ಇವರು ಪತ್ನಿ ಸ್ವರ್ಣಲತಾ, ಪುತ್ರಿ ವನಲಕ್ಷ್ಮಿ, ಅಳಿಯ ಪ್ರಸನ್ನ ಆರಾಧ್ಯ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ಶುಕ್ರವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬಕ್ಕೆ ಕ್ಲೀನ್ ಚಿಟ್

ಮೈಸೂರಲ್ಲಿ ಕಾಂಗ್ರೆಸ್‌ನಿಂದ ಸತ್ಯಮೇವ ಜಯತೆ ಸಂದೇಶ

● ಸಿಎಂ ಕುಟುಂಬದ ವಿರುದ್ಧ ಕುತಂತ್ರ ನಡೆಸಿದವರ ವಿರುದ್ಧ ಘೋಷಣೆ ● ಇದೊಂದು ವ್ಯವಸ್ಥಿತ ಪಿತೂರಿ; ಆಕ್ರೋಶ

ಮೈಸೂರು,ಜ.29(ಎಂಕೆ)–ಮುಡಾ ಅಕ್ರಮ ನಿವೇಶನ ಹಂಚಿಕೆ ಆರೋಪದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ, ಬಾಮೈದ ಮಲ್ಲಿಕಾರ್ಜುನಸ್ವಾಮಿ ಹಾಗೂ ಜಮೀನು ಮಾಲೀಕ ದೇವರಾಜು ಅವರಿಗೆ ಕ್ಲೀನ್ ಚಿಟ್ ನೀಡಿ, ಲೋಕಾಯುಕ್ತ ಪೊಲೀಸರು ಸಲ್ಲಿಸಿದ 'ಬಿ–ರಿಪೋರ್ಟ್' ಅನ್ನು ಜನಪ್ರತಿನಿಧಿಗಳ ನ್ಯಾಯಾಲಯ ಪುರಸ್ಕರಿಸಿರುವುದಕ್ಕೆ ಕಾಂಗ್ರೆಸ್ ಮುಖಂಡರಿಂದ ಗುರುವಾರ 'ಸತ್ಯಮೇವ ಜಯತೇ' ಪ್ಲೇ ಕಾರ್ಡ್ ಪ್ರದರ್ಶಿಸಲಾಯಿತು.



ಮೈಸೂರು ಲೋಕಾಯುಕ್ತ ಕಚೇರಿ ಎದುರು ಕಾಂಗ್ರೆಸ್ ಮುಖಂಡರಿಂದ ಗುರುವಾರ 'ಸತ್ಯಮೇವ ಜಯತೆ' ಪ್ಲೇ ಕಾರ್ಡ್ ಪ್ರದರ್ಶಿಸಲಾಯಿತು.

ಮೈಸೂರಿನ ಲೋಕಾಯುಕ್ತ ಪೊಲೀಸರ ಕಚೇರಿ ಎದುರು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಮತ್ತಿತರರು 'ಸತ್ಯಮೇವ ಜಯತೇ' ಪ್ಲೇ ಕಾರ್ಡ್ ಪ್ರದರ್ಶಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಕುತಂತ್ರ ನಡೆಸಿ ರಾಜಕೀಯವಾಗಿ ಮುಗಿಸಲು ಯತ್ನಿಸಿದ ಕಿಡಿಗೇಡಿಗಳಿಗೆ ಧಿಕ್ಕಾರ ಎಂದು ಘೋಷಣೆಗಳನ್ನು ಕೂಗಿದರು.

ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಬಿಜೆಪಿ ಮತ್ತು ಜೆಡಿಎಸ್, ಕೆಲ ಕ್ರಿಮಿನಲ್ ಹಿನ್ನಲೆಯುಳ್ಳ ಸೈಡ್ ಆಕ್ಟರ್‌ಗಳನ್ನು ಸೃಷ್ಟಿ ಮಾಡಿ, ಮುಡಾ ನಿವೇಶನ ಹಂಚಿಕೆ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಕುಟುಂಬವನ್ನು ಸಿಲುಕಿಸಬೇಕು ಎನ್ನುವ ಹುನ್ನಾರ ನಡೆಸಲಾಯಿತು. ಸಿದ್ದರಾಮಯ್ಯ ಅವರ ವಿರುದ್ಧ ಕೆಲವರು ಉದ್ದೇಶಪೂರ್ವಕವಾಗಿ ಕುತಂತ್ರ ರೂಪಿಸಿದರು ಎಂದು ಹರಿಹಾಯ್ದರು.

ಕೆಸರೆಯ ಸರ್ವೆ ನಂ.464ರಲ್ಲಿ ಸಿಎಂ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರ ಹೆಸರಿನಲ್ಲಿದ್ದ 3 ಎಕರೆ 16 ಗುಂಟೆ ಜಮೀನನ್ನು ಮುಡಾದವರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದ್ದಕ್ಕೆ 50:50 ಅನುಪಾತದಲ್ಲಿ ಪರ್ಯಾಯವಾಗಿ 14 ಸೈಟ್‌ಗಳನ್ನು ನೀಡಿದ್ದರು. ಆದರೆ, ಇದೆಲ್ಲದರ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಭಾವ ಬೀರಿದ್ದಾರೆ. ಆ 14 ಸೈಟ್‌ಗಳ ಬೆಲೆ 56 ಕೋಟಿ ರೂ. ಇದ್ದು ಅಕ್ರಮ ನಡೆದಿದೆ. ಸಿಎಂ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ನಡೆಸುವಂತೆ ಸ್ನೇಹಮಯಿ ಕೃಷ್ಣ, ಅಬ್ರಾಹಂ ಮತ್ತು ಜೆಡಿಎಸ್ ಮುಖಂಡ ಪ್ರದೀಪ್ ಕುಮಾರ್ ರಾಜ್ಯಪಾಲರ ಅನುಮತಿ ಪಡೆದು ಪ್ರಕರಣ ದಾಖಲಿಸಿದ್ದರು. ಪ್ರಕರಣ ಸಂಬಂಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಸೂಚನೆ ಮೇರೆಗೆ ಕೂಲಂಕುಶವಾಗಿ ತನಿಖೆ ನಡೆಸಿದ ಮೈಸೂರು ಲೋಕಾಯುಕ್ತ ಪೊಲೀಸರು, ನ್ಯಾಯಾಲಯಕ್ಕೆ ಸಲ್ಲಿಸಿರುವ 'ಬಿ–ರಿಪೋರ್ಟ್' ಸತ್ಯಕ್ಕೆ ದೊರೆತ ಜಯವಾಗಿದೆ ಎಂದರು.

ದಿನ ಬೆಳಗಾದರೆ ಪಿತೂರಿ ನಡೆಸಿ, ಸಮಾಜದಲ್ಲಿ ಅಶಾಂತಿ ಸೃಷ್ಟಿಸುವ ಬಿಜೆಪಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ರಾಜಕೀಯವಾಗಿ ಮುಗಿಸಲು ಸ್ನೇಹಮಯಿ ಕೃಷ್ಣ ಎಂಬ ವ್ಯಕ್ತಿಗೆ ಬೆಂಬಲ ನೀಡಿ ಫೀಲ್ಡ್‌ಗೆ ಬಿಟ್ಟಿದ್ದರು. ಆದರೆ, ಸತ್ಯಕ್ಕೆ ಜಯ ಎಂಬುದು ಸಾಬೀತಾಗಿದೆ. ಸಿಎಂ ಸಿದ್ದರಾಮಯ್ಯ ಮತ್ತು ಅವರ ಕುಟುಂಬಸ್ಥರ ವಿರುದ್ಧ ಎಣೆದಿದ್ದ ಹುನ್ನಾರ ಬಯಲಾಗಿದೆ ಎಂದು ತಿಳಿಸಿದರು.

ನಾಲ್ಕೈದು ತಿಂಗಳಿಂದ ಕಾಣ್ತಾಯಿಲ್ಲ: ಕೊಲೆ ಯತ್ನ ಸೇರಿದಂತೆ 44 ಕೇಸ್‌ಗಳ ಕ್ರಿಮಿನಲ್ ಕೇಸ್‌ಗಳ ಹಿನ್ನಲೆಯುಳ್ಳ ಸ್ನೇಹಮಯಿ ಕೃಷ್ಣ ಕಳೆದ ನಾಲ್ಕೈದು ತಿಂಗಳಿಂದ ಎಲ್ಲೂ ಕಾಣ್ತಾ ಇಲ್ಲ. ಒಂದು ವಿಚಾರಣೆಗೆ ವಕೀಲರಿಗೆ 20 ಲಕ್ಷ ರೂ.ಕೊಡಬೇಕು. ಸಾಮಾಜಿಕ ಕಾರ್ಯಕರ್ತ ಎಂದೇಳಿಕೊಳ್ಳುವ ಸ್ನೇಹಮಯಿ ಕೃಷ್ಣನಿಗೆ ಅಷ್ಟೊಂದು ದುಡ್ಡು ಎಲ್ಲಿಂದ ಬಂತು. ಬಿಜೆಪಿ–ಜೆಡಿಎಸ್‌ನ ಯಾರೆಲ್ಲಾ ಆತನಿಗೆ ಸಹಾಯ ಮಾಡಿದ್ದಾರೆ ಎಂಬ ಪಟ್ಟಿ ಇದ್ದು, ಈಗ ಆತನೆ ಅದನೆಲ್ಲಾ ಬಹಿರಂಗಪಡಿಸಲಿ ಎಂದು ಲೇವಡಿ ಮಾಡಿದರು.

ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುತ್ತೇನೆ...

"ಜನಪ್ರತಿನಿಧಿಗಳ ನ್ಯಾಯಾಲಯವು ಯಾವ ಮಾನದಂಡಗಳ ಆಧಾರದ ಮೇಲೆ ಬಿ–ರಿಪೋರ್ಟ್ ಅಂಗೀಕರಿಸಿದೆ ಎಂಬುದು ತೀರ್ಪಿನ ಸಂಪೂರ್ಣ ಪ್ರತಿ ಸಿಕ್ಕ ಬಳಿಕ ತಿಳಿಯಲಿದೆ. ಆದರೆ, ಈ ತೀರ್ಪನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುವುದಾಗಿ ದೂರುದಾರ ಸ್ನೇಹಮಯಿ ಕೃಷ್ಣ ಸ್ಪಷ್ಟಪಡಿಸಿದ್ದಾರೆ. ನನ್ನ ಹೋರಾಟ ಇಲ್ಲಿಗೆ ನಿಲ್ಲುವುದಿಲ್ಲ. ಸಿದ್ದರಾಮಯ್ಯ(ಎ1), ಶ್ರೀಮತಿ ಪಾರ್ವತಿ(ಎ2), ಮಲ್ಲಿಕಾರ್ಜುನ ಸ್ವಾಮಿ(ಎ3) ಹಾಗೂ ದೇವರಾಜು(ಎ4) ಈ ಪ್ರಕರಣದಲ್ಲಿ ತಪ್ಪಿತಸ್ಥರು ಎಂಬುದನ್ನು ಸಾಬೀತುಪಡಿಸಲು ಹೈಕೋರ್ಟ್ ಮೊರೆ ಹೋಗುತ್ತೇನೆ ಎಂದು ಮಾಧ್ಯಮಗಳಿಗೆ ತಿಳಿಸಿದ್ದಾರೆ.

ನಾಲ್ಕು ಯೋಜನೆಗಳಿಗೆ ಎಳ್ಳುನೀರು ಬಿಟ್ಟ ಯದುವೀರ್...!

"ಮೈಸೂರು–ಕೊಡಗಿನ ಜನರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆಯನ್ನು ಸ್ಮರಿಸಿಕೊಂಡು ಯದುವೀರ್ ಎಂಬುವರಿಗೆ ಮತ ನೀಡಿ ಗೆಲ್ಲಿಸಿದರು. ಆದರೆ, ಅವರು ದಿನ ಬೆಳಗಾದರೆ ಬರೀ ಸುಳ್ಳು ಹೇಳುವುದನ್ನು ಬಿಟ್ಟು ಬೇರೆ ಏನನ್ನೂ ಮಾಡುತ್ತಿಲ್ಲ. ಕಳೆದ 15 ವರ್ಷದಿಂದ ಹೇಳುತ್ತಿದ್ದ ಮೈಸೂರು–ಕುಶಾಲನಗರ ನಡುವಿನ ರೈಲ್ವೆ ಮಾರ್ಗ ಅಭಿವೃದ್ಧಿಯಿಂದ ಯಾವುದೇ ಪ್ರಯೋಜನವಿಲ್ಲ ಎಂದು ನೈರುತ್ಯ ರೈಲ್ವೆ ಡಿಆರ್‌ಎಂ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಆದರೆ, ರಾಜ್ಯ ಸರ್ಕಾರ ಸಹಕಾರ ನೀಡಲಿಲ್ಲ ಎಂದಿರುವ ಯದುವೀರ್ ಅವರು ಎರಡು ವರ್ಷದಲ್ಲಿ 3,100 ಕೋಟಿ ರೂ. ವೆಚ್ಚದ ಮೈಸೂರು–ಕುಶಾಲನಗರ ರೈಲ್ವೆ ಮಾರ್ಗ ಯೋಜನೆ, ಸುಮಾರು 180 ಕೋಟಿ ರೂ.ಗಳ ಯೂನಿಟ್ ಮಾಲ್, ಚಾಮುಂಡಿ ಬೆಟ್ಟದ ಪ್ರಸಾದ ಯೋಜನೆ ಸೇರಿ ನಾಲ್ಕು ಯೋಜನೆಗಳಿಗೆ ಎಳ್ಳುನೀರು ಬಿಟ್ಟಿದ್ದಾರೆ.

–ಎಂ.ಲಕ್ಷ್ಮಣ್, ಕೆಪಿಸಿಸಿ ವಕ್ತಾರ

ನಗರಪಾಲಿಕೆಯ ಎಲ್ಲಾ ವಲಯ ಕಚೇರಿಗಳಲ್ಲಿ ವಾರದ ಒಂದು ದಿನ ಜನಸ್ಪಂದನ ಕಾರ್ಯಕ್ರಮ

ಮೈಸೂರು,ಜ.29(ಜಿಎ)–ಮೈಸೂರು ಮಹಾನಗರಪಾಲಿಕೆ ಎಲ್ಲಾ 9 ವಲಯ ಕಚೇರಿಗಳಲ್ಲಿ ವಾರದ ಪ್ರತಿ ಶುಕ್ರವಾರ ಮಧ್ಯಾಹ್ನ 3ರಿಂದ ಸಂಜೆ 5.30ರವರೆಗೆ ಜನಸ್ಪಂದನ ಕಾರ್ಯಕ್ರಮ ನಡೆಸಲಾಗುವುದು ಎಂದು ಪಾಲಿಕೆ ಆಯುಕ್ತ ತನ್ವೀರ್ ಶೇಕ್ ಆಸೀಫ್ ತಿಳಿಸಿದ್ದಾರೆ.

ಮೈಸೂರು ನಗರ ಜನತೆಗೆ ನಗರ ಪಾಲಿಕೆಯಿಂದ ತತ್ಕಾಲದಲ್ಲಿ ಜಾರಿಯಲ್ಲಿರುವ ಸೇವಾ ಸೌಲಭ್ಯಗಳಾದ, ಸಾರ್ವಜನಿಕ ರಸ್ತೆ, ಒಳಚರಂಡಿ, ಕುಡಿಯುವ ನೀರು, ಮಾರುಕಟ್ಟೆ, ಸಾರ್ವಜನಿಕ ಆರೋಗ್ಯ, ಜನನ ಮತ್ತು ಮರಣಗಳ ನೋಂದಣಿ, ಕಟ್ಟಡ ನಿರ್ಮಾಣ ರಹದಾರಿ ಮತ್ತು ನಿಯಂತ್ರಣ, ಸಾರ್ವಜನಿಕ ಉದ್ಯಾನವನಗಳ ನಿರ್ವಹಣೆ, ಸಾರ್ವಜನಿಕ ಶೌಚಾಲಯಗಳ ನಿರ್ವಹಣೆ,

ನೋಡಲ್ ಅಧಿಕಾರಿಗಳ ನೇಮಕ


ಆಸೀಫ್

ಆಸ್ತಿಗಳ ಖಾತೆ ಮತ್ತು ಕಂದಾಯ ಸೇರಿದಂತೆ ಇತರೆ ಸೌಲಭ್ಯಗಳನ್ನು ಒದಗಿಸಲಾಗಿದೆ. ಅದರಂತೆಯೇ ಒದಗಿಸಲಾಗುತ್ತಿರುವ ಸೌಲಭ್ಯಗಳು ಕುರಿತು ಸಾರ್ವಜನಿಕರ ಕುಂದು ಕೊರತೆಗಳನ್ನು ಆಲಿಸಿ, ನಿಯಮಗಳಿಗೆ ಅನುಸಾರವಾಗಿ ಸಕಾಲದಲ್ಲಿ ಪರಿಹಾರವನ್ನು ನೀಡಬೇಕಾಗಿರುವುದರಿಂದ, ಸಾರ್ವಜನಿಕರ ಕುಂದು ಕೊರತೆಗಳನ್ನು ಆಲಿಸಲು ವಲಯ ಕಛೇರಿವಾರು ನೋಡಲ್ ಅಧಿಕಾರಿಗಳನ್ನು ನೇಮಿಸಿ ಜನಸ್ಪಂದನ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ ಎಂದರು.

ಮೈಸೂರು ನಗರ ವ್ಯಾಪ್ತಿಯ ನಾಗರಿಕರು, ಮೈಸೂರು ಮಹಾನಗರ ಪಾಲಿಕೆಯ ಎಲ್ಲಾ 9 ವಲಯ ಕಚೇರಿಗಳಿಗೆ ವಾರದ ಪ್ರತಿ ಶುಕ್ರವಾರ (ಸಾರ್ವಜನಿಕ ರಜೆ, ತುರ್ತು ಸಂದರ್ಭಗಳನ್ನು ಹೊರತುಪಡಿಸಿ) ಮಧ್ಯಾಹ್ನ 3 ಗಂಟೆಯಿಂದ 5.30ರವರೆಗೆ ಆಯಾ ವಲಯ ಕಚೇರಿಗಳಲ್ಲಿ ಜನಸ್ಪಂದನ ಕಾರ್ಯಕ್ರಮವನ್ನು ನಡೆಸಿ ಸಾರ್ವಜನಿಕರ ಕುಂದು ಕೊರತೆಗಳನ್ನು ಆಲಿಸಿ, ನಿಯಮಗಳ ಅನುಸಾರ ಪರಿಹಾರವನ್ನು ನೀಡಲು ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ. ಅದರಂತೆ ಸಾರ್ವಜನಿಕರು ಜನಸ್ಪಂದನ ಕಾರ್ಯಕ್ರಮದಲ್ಲಿ ತಮ್ಮ ಕುಂದು ಅರ್ಜಿಗಳನ್ನು ಲಿಖಿತವಾಗಿ ಸಲ್ಲಿಸಿ ಪರಿಹಾರವನ್ನು ಪಡೆದುಕೊಳ್ಳವಂತೆ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಸರ್ಕಾರಿ ಶಾಲೆ ಮುಚ್ಚುವುದಕ್ಕೆ ವಿರೋಧ

ಮೈಸೂರು,ಜ.29(ಜಿಎ)–ಪಬ್ಲಿಕ್ ಶಾಲೆಗಳನ್ನು ಉನ್ನತಿಕರಿಸುವ ನೆಪ ಹೇಳಿ ಸುತ್ತಮುತ್ತಲಿನ ಸರ್ಕಾರಿ ಶಾಲೆ ಪದವಿ ಪೂರ್ವ ಕಾಲೇಜುಗಳನ್ನು ಮುಚ್ಚಿಸಲು ಹೊರಟಿದೆ ಭಾರತ ವಿದ್ಯಾರ್ಥಿ ಫೆಡರೇಷನ್ ಆರೋಪಿಸಿದ್ದು, ಸರ್ಕಾರ ನಡೆಗೆ ವಿರೋಧ ವ್ಯಕ್ತಪಡಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಫೆಡರೇಷನ್‌ನ ರಾಜ್ಯ ಕಾರ್ಯದರ್ಶಿ ಟಿ.ಎಸ್.ವಿಜಯ್ ಕುಮಾರ್ ಮಾತನಾಡಿ, ವಿಲೀನದ ಹೆಸರಿನಲ್ಲಿ ಹಳ್ಳಿಗಳ ಸರ್ಕಾರಿ ಶಾಲೆಗಳನ್ನು ಮುಚ್ಚಬಾರದು. ಬದಲಾಗಿ ಇವುಗಳಿಗೆ ಮೂಲ ಸೌಕರ್ಯ ಒದಗಿಸಬೇಕು. ಖಾಲಿ ಇರುವ 62 ಸಾವಿರ ಶಿಕ್ಷಕರ ನೇಮಕಾತಿ ಮಾಡಬೇಕು. ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಕಡಿಮೆಯಾಗುತ್ತಿದೆ ಎಂದು ಸರ್ಕಾರವೇ ಒಪ್ಪಿಕೊಂಡಿದೆ.

ಹೀಗಾಗಿ ದಾಖಲಾತಿ ನೆಪ ಹೇಳುತ್ತ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿದೆ. ಇವುಗಳಿಗೆ ಮೂಲ ಸೌಕರ್ಯ ನೀಡುತ್ತಿಲ್ಲ. ಶಿಕ್ಷಕರ ನೇಮಕಾತಿ ಇಲ್ಲ. ಸರಿಯಾದ ಸಮಯಕ್ಕೆ ಪಠ್ಯ ಪುಸ್ತಕ ನೀಡುತ್ತಿಲ್ಲ. ಸೈಕಲ್ ಯೋಜನೆ ನಿಲ್ಲಿಸಲಾಗಿದೆ. ಇವುಗಳು ಸಹಾ ದಾಖಲಾತಿ ಇಳಿಕೆಗೆ ಕಾರಣವಾಗಿವೆ ಎಂದು ಕಿಡಿಕಾರಿದರು.

ಸರ್ಕಾರಿ ಶಾಲೆಗಳ ವಿಲೀನ ಪ್ರಕ್ರಿಯೆ ನಡೆದರೆ ವಿದ್ಯಾರ್ಥಿಗಳು ಹಲವಾರು ಕಿಮೀ ನಡೆದು ದೂರದ ಶಾಲೆಗಳಿಗೆ ಹೋಗಬೇಕಾಗುತ್ತದೆ. ಇದರಿಂದಲೂ ಸಹಾ ದಾಖಲಾತಿ ಇಳಿಕೆ ಆಗುತ್ತದೆ. ಹೀಗಾಗಿ ಸರ್ಕಾರ ತನ್ನ ನಿರ್ಧಾರ ಕೈಬಿಡಬೇಕೆಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಚಿರಾಜ್ ಕೆ.ಎಸ್. ಮೂರ್ತಿ ಡಿ.ಅಭಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.1.2026 ಶುಕ್ರವಾರ, ಮಳೆ ನಕ್ಷತ್ರ: ಶ್ರವಣ 24.01.2026 ರಿಂದ 05.02.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಆರಿದ್ರಾ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

- **ಕರ್ನಾಟಕ ರಕ್ಷಣಾ ವೇದಿಕೆ (ಕನ್ನಡ ಸೇನೆ) :** ನಗರ ಮತ್ತು ಗ್ರಾಮಾಂತರ ಜಿಲ್ಲಾ ಘಟಕಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಸುಗಮ ಸಂಗೀತ ಜಿಲ್ಲಾಧ್ಯಕ್ಷ ಡಾ.ವಿ.ನಾಗರಾಜ್ ವಿ.ಭೈರಿ, ಅಧ್ಯಕ್ಷತೆ: ವೇದಿಕೆ ರಾಜ್ಯಾಧ್ಯಕ್ಷ ಎನ್.ಅರುಣ್‌ಕುಮಾರ್, ಉಪಸ್ಥಿತರು: ರಘುರಾಂ ವಾಜಪೇಯಿ, ಸುಜಿತ್‌ಕುಮಾರ್, ಗುರುದತ್ತ, ಅಂಶಿ ಪ್ರಸನ್ನಕುಮಾರ್, ಸ್ಥಳ: ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ, ಬೆಳಗ್ಗೆ 9ರಿಂದ.
- **ಬೇವಿನ ಮರದ ಶ್ರೀ ಯಲ್ಲಮ್ಮ ದೇವಸ್ಥಾನ :** 78ನೇ ವರ್ಷದ ಮಹೋತ್ಸವ, ಬೆಳಗ್ಗೆ 9ರಿಂದ ಮೀನ ಲಗ್ನದಲ್ಲಿ ದೇವಿಗೆ ಅರಿಶಿನ, ಕುಂಕುಮ ಲೇಪನ, ಸ್ಥಳ: ದೇವಸ್ಥಾನ, ನಾಲಾ ಬೀದಿ, ಕೆ.ಆರ್.ಮೊಹಲ್ಲಾ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ರಕ್ತ ಪದರ, ದೃಷ್ಟಿ ಮತ್ತು ನೇತ್ರ ಪರೀಕ್ಷಾ ಶಿಬಿರ. ಮೋತಿಯಾ ಬಿಂದು (cataract) ತಪಾಸಣೆ ಹಾಗೂ ಆರಂಭಿಕ ಹಂತದ ನಿರ್ವಹಣೆ, ದೃಷ್ಟಿ ದೋಷಗಳ (Refra ctrive errors) ತಿದ್ದುಪಡಿ, ಅಂಬ್ಲಾಯೋಪಿಯಾ ನಿರ್ವಹಣೆ, ಮಧು ಮೇಹ ರೆಟಿನೋಪತಿ ಬಗ್ಗೆ ಜಾಗೃತಿ ಹಾಗೂ ತಪಾಸಣೆ, ರೆಟಿನಿಟಿಸ್ ಫಿಗ್ಮೆಂಟೋಸಾ ನಿರ್ವಹಣೆ, ಕಂಪ್ಯೂಟರ್ ವಿಷನ್ ಸಿಂಡ್ರೋಮ್ ನಿರ್ವಹಣೆ, ಭಂಗು, ಚರ್ಮರೋಗ ಕುರಿತು ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ :** ಮಹಾಯೋಗಿ ವೇಮನ ಜಯಂತಿ, ಘನ ಉಪಸ್ಥಿತರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಉಪಸ್ಥಿತರು : ಸಚಿವ ಕೆ.ವೆಂಕಟೇಶ್, ಶಾಸಕರಾದ ಸಿ.ಅನಿಲ್‌ಕುಮಾರ್, ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಅಧ್ಯಕ್ಷತೆ : ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಡಾ.ಮಾನಸ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ ಡಾ.ಪುಷ್ಪ ಅಮರನಾಥ್, ಸ್ಥಳ: ಕಿರುರಂಗಮಂದಿರ, ಕಲಾಮಂದಿರ ಆವರಣ, ಬೆಳಗ್ಗೆ 10.30ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ, ಗಾಂಧಿ ಅಧ್ಯಯನ ಕೇಂದ್ರ, ಗಾಂಧಿ ಭವನ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** 78ನೇ ಸರ್ವೋದಯ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸ, ಗಾಂಧೀಜಿ ಪ್ರತಿಪಾದಿಸಿದ ಮಾನವೀಯತೆ, ಉದ್ಘಾಟನೆ : ಪ್ರಗತಿಪರ ಚಿಂತಕ ಡಾ. ಅಮರಕುಮಾರ್, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಪ್ರೊ. ಎನ್. ನಾಗರಾಜ, ಸ್ಥಳ: ಗಾಂಧಿ ಸಭಾಂಗಣ, ಗಾಂಧಿ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.
- **ಮೈಸೂರು ವಿವಿ ಭೂಗೋಳಶಾಸ್ತ್ರ ಮತ್ತು ಪರಿಸರ ವಿಜ್ಞಾನ ವಿಭಾಗ :** ವಿಚಾರ ಸಂಕಿರಣ, ಉದ್ಘಾಟನೆ: ಗಣಿ ಮತ್ತು ಭೂವಿಜ್ಞಾನ ವಿಭಾಗದ ಜಂಟಿ ನಿರ್ದೇಶಕಿ ಡಾ.ಲಕ್ಷ್ಮಮ್ಮ, ಅಧ್ಯಕ್ಷತೆ: ಯುವರಾಜ ಕಾಲೇಜು ಪ್ರಿನ್ಸಿಪಾಲ್ ಪ್ರೊ.ಎಸ್.ಮಹದೇವಮೂರ್ತಿ, ಮುಖ್ಯ ಅತಿಥಿಗಳು: ಮುಖ್ಯ ವಿಜ್ಞಾನಿ ಡಾ.ಆರ್.ಧರ್ಮರಾಜು, ಪ್ರೊ.ಹೆಚ್.ಎಸ್.ಜಯಂತ್, ಸಿ.ನಾಗೇಶ್‌ಬಾಬು, ಪ್ರೊ.ಆರ್.ಶೇಖರ್ ನಾಯಕ್, ಪ್ರೊ.ಪಿ.ಕೆ.ಮಹೇಶ್ವರ್, ಸ್ಥಳ: ಪ್ಲಾಟಿನಂ ಜ್ಯೂಬಿಲಿ ಸಭಾಂಗಣ, ಬೆಳಗ್ಗೆ 10ಕ್ಕೆ.
- **ಜೆಎಸ್‌ಎಸ್ ಮಹಿಳಾ ಕಾಲೇಜು :** ಕನ್ನಡ ಕುವೆಂಪು–2026, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಅಧ್ಯಕ್ಷತೆ: ಜೆಎಸ್‌ಎಸ್ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ.ನಿರಂಜನಮೂರ್ತಿ, ಮುಖ್ಯ ಅತಿಥಿಗಳು: ರಂಗಕರ್ಮಿ ಪ್ರಭುಸ್ವಾಮಿ ಸಿ. ಮಳಿಮಠ, ಗಾಯಕಿ ವಿದುಷಿ ಹಿರಣ್ಮಯೀ ಶ್ರೀನಿಧಿ, ಪ್ರಿನ್ಸಿಪಾಲ್ ಡಾ. ರೇಚಣ್ಣ, ಸ್ಥಳ: ನವಜ್ಯೋತಿ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.
- **ಸಿಲ್ಕ್ ಇಂಡಿಯಾ–2026 :** ಸಿಲ್ಕ್ ಇಂಡಿಯಾ ಸೀರೆ ಪ್ರದರ್ಶನ, ಉದ್ಘಾಟನೆ : ಬಿಗ್‌ಬಾಸ್ ಸೀಸನ್ 12ರ ಸ್ಪರ್ಧಿ ಶ್ರೀಮತಿ ರಿಷಾಗೌಡ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ವಿನೋಬಾ ರಸ್ತೆ, ಮಧ್ಯಾಹ್ನ 3ಕ್ಕೆ.
- **ಭಾವೀ ಸಮೀರ ಶ್ರೀ ವಾದಿರಾಜ ಸೇವಾ ಸಮಿತಿ, ಶ್ರೀ ಕೃಷ್ಣ ಟ್ರಸ್ಟ್, ಶ್ರೀ ಕೃಷ್ಣ ಮಿತ್ರ ಮಂಡಳಿ :** ಭಾವೀ ಸಮೀರ ಶ್ರೀ ವಾದಿರಾಜರ ಜಯಂತಿ, ಸಂಜೆ 4.30ಕ್ಕೆ ಸಾಮೂಹಿಕ ಶ್ರೀ ಲಕ್ಷ್ಮೀ ಶೋಭಾನೆ ಪಠಣ, ಸಂಜೆ 5ಕ್ಕೆ ಸಭಾ ಕಾರ್ಯಕ್ರಮ, ಸಂಜೆ 5.30ಕ್ಕೆ ವಿದ್ವಾನ್ ಡಾ. ಸಿ.ಎಚ್. ಗುರುರಾಜರಾವ್ ಅವರಿಂದ ಪ್ರವಚನ, ಸಂಜೆ 7ಕ್ಕೆ ರಂಗಪೂಜೆ, ಸಂಜೆ 7.30ಕ್ಕೆ ಮಹಾಮಂಗಳಾರತಿ, ಸ್ಥಳ: ಶ್ರೀಕೃಷ್ಣಧಾಮ, ಸರಸ್ವತಿಪುರಂ.
- **ಶಿಕ್ಷಾ ಸಿಬಿಎಸ್‌ಇ ಸ್ಕೂಲ್ ಅಂಡ್ ಪಿಯು ಕಾಲೇಜು:** ಶಿಕ್ಷೋತ್ಸವ–2026, ಉದ್ಘಾಟನೆ: ಚಿತ್ರ ನಟಿ ಶ್ರೀಮತಿ ಅನು ಪ್ರಭಾಕರ್, ಮುಖ್ಯ ಅತಿಥಿಗಳು: ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಎಸ್.ಎಂ.ಶಿವಪ್ರಕಾಶ್, ಅಧ್ಯಕ್ಷತೆ: ಶರಬೇಶ್ವರ ವಿದ್ಯಾಪೀಠ ಅಧ್ಯಕ್ಷ ಎಸ್.ಎಂ.ದಕ್ಷಿಣಮೂರ್ತಿ, ಸ್ಥಳ: ಕಾಲೇಜು ಆವರಣ, ವರಕೋಡು ಗೇಟ್, ಸಂಜೆ 5ಕ್ಕೆ.
- **ಪ್ರಿಯದರ್ಶನ ಸಾಂಸ್ಕೃತಿಕ ವೇದಿಕೆ, ಶ್ರೀರಂಗಪಟ್ಟಣ :** ರಾಮಾಯಣ ಪ್ರವಚನ ಮಾಲಿಕೆ, ವಿಮರ್ಶಕ, ಚಿಂತಕ ವಿದ್ವಾನ್ ಗ.ನಾ. ಭಟ್ಟ ಅವರಿಂದ ಕಿಷ್ಕಿಂದಕಾಂಡ–ಪ್ರವಚನ ಎಂಟನೆಯ ಸರಣಿ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.
- **ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಶ್ರೀ ಸುಬ್ರಹ್ಮಣ್ಯ ಸ್ವಾಮಿ ಟೆಂಪಲ್ ಟ್ರಸ್ಟ್:** 60ನೇ ವರ್ಷದ ತೈಪೂಸಂ ಮಹೋತ್ಸವ–2026, ಸಂಜೆ 6.30 ರಿಂದ ಶ್ರೀವಲ್ಲಿ ದೇವಸೇನಾ ಸಮೇತ ಶ್ರೀ ಸುಬ್ರಹ್ಮಣ್ಯ ಸ್ವಾಮಿಯವರಿಗೆ ಕಲ್ಯಾಣೋತ್ಸವ, ಸ್ಥಳ: ದೇವಸ್ಥಾನದ ಪ್ರಾಂಗಣ, ವಿಶ್ವೇಶ್ವರನಗರ. ಸಂಜೆ 6.30ಕ್ಕೆ.
- **ಸಾಧನಾ ಮಂದಿರ(ಮೈಸೂರು):** ಸರಳವಾಗಿ ಕಲಿತು ಅರ್ಥ, ಸಂಕೇತ, ಮಹತ್ವ, ಪ್ರಾಮುಖ್ಯತೆ, ಪ್ರಯೋಜನ ಹಾಗೂ ವಿಧಾನಗಳ ಸಹಿತ ಸರಸ್ವತಿ ಪೂಜೆ ವಿಶೇಷ ತರಬೇತಿ ಸ್ವಾಮಿ ಹಂಸಾನಂದ ಅವರಿಂದ. ಸ್ಥಳ: ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಗಣಪತಿ ಟೆಂಪಲ್ ರಸ್ತೆ, ಎನ್.ಆರ್.ಮೊಹಲ್ಲಾ, ಸಂಜೆ 6.30ರಿಂದ.
- **ವ್ಯವಸ್ಥಾಪಕರು :** ಉದ್ಯೋಗ ಮೇಳ, ಸ್ಥಳ: ಸರ್ಕಾರಿ ಐಟಿಐ ಕಾಲೇಜು, ನಂಜನಗೂಡು, ಬೆಳಗ್ಗೆ 8.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಜ್ಞಾನ ಜ್ಯೋತಿ ಜೀವನ ಪಾಠ ಕಲಿಸಿದ ಸಾಧಕಿಯರ ಪರಿಚಯ ಮಾಲಿಕೆ, ಪ್ರಸ್ತುತಿ: ಬಿ.ಕೆ.ಮೀನಾಕ್ಷಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ – ಪಿ. ಸುರಭಿ, ವ್ಯಾಖ್ಯಾನ –ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ–ರೇಡಿಯಾಲಜಿ ಬಗ್ಗೆ ಇರುವ ತಪ್ಪು ಕಲ್ಪನೆಗಳು ಕುರಿತು ಮೈಸೂರಿನ ರೇಡಿಯಾಲಜಿಸ್ಟ್ ಡಾ. ರೂಪ .ಕೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ ಡಾ. ಕುಲದೀಪ್ .ಎನ್., 9.30 ಗಾಂಧೀ ಸ್ಮೃತಿ, 9.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಕೆ. ಎಂ. ಸುರೇಂದ್ರ – ನಾದಸ್ವರ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಮನ ಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ : ಜಿ.ಎನ್. ಮಂಜುನಾಥ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಪಿ. ಸುರಭಿ – ಹಾಡುಗಾರಿಕೆ, 4.00 ಮಹಿಳಾರಂಗ, ಮಹಿಳಾ ಸಾಹಿತ್ಯರಂಗ ಮಹಿಳೆಯರ ಪತ್ರಗಳನ್ನಾಧರಿಸಿದ ಸಾಹಿತ್ಯ ಕಾರ್ಯಕ್ರಮ, ಪ್ರಸ್ತುತಿ–ಸಹನ, ನೇತ್ರಾ ಹಾಗೂ ಕೀರ್ತನಾ, 4.30 ವೃತ್ತಿ ಮಾರ್ಗದರ್ಶನ ಸಂಶೋಧನೆ ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳು ಅಂದರೆ ರಿಸರ್ಚ್ ಅಂಡ್ ಇಂಟಲೆಕ್ಚುಅಲ್ ಪ್ರಾಪರ್ಟಿ ರೈಟ್ಸ್ ಕುರಿತು ಮೈಸೂರಿನ ಜೆಎಸ್‌ಎಸ್. ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಅಂಡ್ ರಿಸರ್ಚ್ ಸಂಸ್ಥೆಯ ಐ.ಪಿ.ಆರ್. ಸೆಲ್‌ನ ಡೆಪ್ಯುಟಿ ಡೀನ್ ಡಾ. ಬಾಲಮುರಳೀಧರ ಮತ್ತು ಸಂಶೋಧನಾ ವಿಭಾಗದ ಡೆಪ್ಯುಟಿ ಡೀನ್ ಡಾ. ಚಂದನ್ ಎಸ್. ಅವರೊಂದಿಗಿನ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ, 6.50 ಕೃಷಿರಂಗ ಹಲೋ ಕೃಷಿರಂಗ – ಪ್ರಾಯೋಜಿತ ನೇರ ಫೋನ್–ಇನ್ ಕಾರ್ಯಕ್ರಮ, ಪ್ರಾಯೋಜಕರು–ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ಸಂಶೋಧನಾ ಸಾರ–ಕೃಷಿ ಕ್ಷೇತ್ರದ ಹೊಸ ಅವಿಷ್ಕಾರ. ಪ್ರಸ್ತುತಿ–ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಚರ್ಚೆ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಚಾರುಲತಾ ಮಣಿ – ಹಾಡುಗಾರಿಕೆ, 10.00 ಜನಪದ ಸಂಗೀತ, 10.30 ಸವಿನೆನಪು

ವಿಬಿ ಜಿ ರಾಮ್ ಜಿ ವಿರೋಧಿಸುವ ಸರ್ಕಾರದ ಜಾಹೀರಾತು ವಿರುದ್ಧ ವಿಪಕ್ಷಗಳ ವಾಗ್ದಾಳಿ

ಸಚಿವರ ಸಮರ್ಥನೆ; ವಿಪಕ್ಷ ಸದಸ್ಯರು ಸಭಾತ್ಯಾಗ

ಬೆಂಗಳೂರು, ಜ.29(ಕೆಎಂಶಿ)– ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿಬಿ–ಜಿ–ರಾಮ್–ಜಿ ಕಾಯಿದೆ ಗ್ರಾಮ ಪಂಚಾಯತ್‌ಗಳ ಅಧಿಕಾರ ಹಾಗೂ ಉದ್ಯೋಗ ಖಾತ್ರಿಗೆ ಮರಣ ಶಾಸನ ಎಂದು ರಾಜ್ಯ ಸರ್ಕಾರ ಇಂದು ಪತ್ರಿಕೆಗಳಲ್ಲಿ ನೀಡಿರುವ ಜಾಹೀರಾತು ವಿಧಾನಸಭೆಯಲ್ಲಿ ಭಾರೀ ಚರ್ಚೆಗೆ ಎಡೆ ಮಾಡಿದ್ದಲ್ಲದೆ, ಪ್ರತಿಪಕ್ಷ ಸದಸ್ಯರು ಇದನ್ನು ಖಂಡಿಸಿ ಸಭಾತ್ಯಾಗ ಮಾಡಿದರು.

ಕಲಾಪ ಆರಂಭವಾಗುತ್ತಿದ್ದಂತೆ ವಿಷಯ ಪ್ರಸ್ತಾಪಿಸಿದ ಪ್ರತಿಪಕ್ಷದ ನಾಯಕರು ಸರ್ಕಾರದ ಧೋರಣೆ ಖಂಡಿಸಿದ್ದಲ್ಲದೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬಾಂಧವ್ಯಕ್ಕೆ ಚ್ಯುತಿ ತರುವ ಜಾಹೀರಾತು ಇದಾಗಿದೆ ಎಂದು ಕಿಡಿಕಾರಿದರು.

ಪ್ರತಿಪಕ್ಷದ ನಾಯಕ ಆರ್.ಅಶೋಕ್, ಸುನೀಲ್‌ಕುಮಾರ್, ಅರವಿಂದ್ ಬೆಲ್ಲದ್ ಸೇರಿದಂತೆ ಇತರರು ಸರ್ಕಾರದ ಧೋರಣೆ ಟೀಕಿಸಿದ್ದಲ್ಲದೆ, ಕೇಂದ್ರದ ವಿರುದ್ಧ ಜಗಳ ತೆಗೆದು ಅಭಿವೃದ್ಧಿ ಕ್ಷೀಣಿಸಲು ಕಾಂಗ್ರೆಸ್ ಸರ್ಕಾರ ತೊಡೆ ತಟ್ಟಿ ನಿಂತಿದೆ ಎಂದು ಕಿಡಿಕಾರಿದರು. ಪ್ರತಿಪಕ್ಷಗಳ ಆರೋಪವನ್ನು ಸಾರಾಸಗಟಾಗಿ ತಳ್ಳಿಹಾಕಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ಜಾಹೀರಾತು ನೀಡಿರುವುದನ್ನು ಸಮರ್ಥಿಸಿಕೊಂಡರು.

ಕರ್ನಾಟಕ ರಾಜ್ಯದ ಜನರ ತೆರಿಗೆಯಿಂದ ಕೇಂದ್ರ ಸರ್ಕಾರ ನಡೆಯುತ್ತಿದೆ. ನಮ್ಮ ಹಣ ತೆಗೆದುಕೊಂಡು ಉತ್ತರ ಪ್ರದೇಶ, ಮಧ್ಯ ಪ್ರದೇಶ, ಬಿಹಾರ ಹಾಗೂ ರಾಜಸ್ತಾನಗಳ ಅಭಿವೃದ್ಧಿಗೆ ಪ್ರಧಾನಿ ನರೇಂದ್ರ ಮೋದಿ ವಿನಿಯೋಗ ಮಾಡುತ್ತಿದ್ದಾರೆ. ನಮ್ಮ ಇಲಾಖೆಯಲ್ಲಿ ಕೈಗೊಂಡಿರುವ ಕೆಲಸ ಮತ್ತು ಅಭಿವೃದ್ಧಿಯನ್ನು ನರೇಂದ್ರ ಮೋದಿ ಸರ್ಕಾರವೇ ಮೊದಲ ಸ್ಥಾನದಲ್ಲಿರಿಸಿ ಶ್ಲಾಘನೆ ಮಾಡಿದೆ. ಬಡವರ ಉದ್ಯೋಗ ಕಸಿದು, ಆರ್ಥಿಕ ಅಭಿವೃದ್ಧಿಗೆ ಕುಂದು ತಂದಿರುವ ಹಾಗೂ ಗ್ರಾಮೀಣ ಅಭಿವೃದ್ಧಿಗೆ ಧಕ್ಕೆ ಉಂಟು ಮಾಡಿರುವ ಈ ಯೋಜನೆಯನ್ನು ವಿರೋಧಿಸದೆ ಏನು ಮಾಡಬೇಕು ಎಂದು ಪ್ರಶ್ನಿಸಿದರು.

ಎಲೆಕ್ಟ್ರಿಕ್ ವಾಹನ ಉದ್ಯಮ; ಉತ್ಪಾದನೆ, ಪೂರೈಕೆ ಸರಪಳಿ ಸೃಷ್ಟಿಗೆ

ಭಾರತ, ಕೆನಡಾ ಮಹತ್ವದ ದ್ವಿಪಕ್ಷೀಯ ಮಾತುಕತೆ

ನವದೆಹಲಿ, ಜ.29– ನಿರ್ಣಾಯಕ ಅಪರೂಪದ ಖನಿಜಗಳು, ಇವಿ ಚಲನಶೀಲತೆ, ಉತ್ಪಾದನೆ ಮತ್ತು ಸುಸ್ಥಿರ ಕೈಗಾರಿಕಾ ಅಭಿವೃದ್ಧಿ ಕ್ಷೇತ್ರಗಳಲ್ಲಿನ ಸಹಕಾರವನ್ನು ಬಲಪಡಿಸಲು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು, ಕೆನಡಾದ ನೈಸರ್ಗಿಕ ಸಂಪನ್ಮೂಲಗಳ ಖಾತೆ ಸಚಿವ ಟಿಮ್ ಹಾಡ್ಗಸನ್ ನೇತೃತ್ವದ ಉನ್ನತ ಮಟ್ಟದ ನಿಯೋಗದೊಂದಿಗೆ ಮಹತ್ವದ ದ್ವಿಪಕ್ಷೀಯ ಮಾತುಕತೆ ನಡೆಸಿದರು.


ನವದೆಹಲಿಯಲ್ಲಿ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಕೆನಡಾದ ನೈಸರ್ಗಿಕ ಸಂಪನ್ಮೂಲಗಳ ಖಾತೆ ಸಚಿವ ಟಿಮ್ ಹಾಡ್ಗಸನ್ ನೇತೃತ್ವದ ಉನ್ನತ ಮಟ್ಟದ ನಿಯೋಗದೊಂದಿಗೆ ಮಹತ್ವದ ದ್ವಿಪಕ್ಷೀಯ ಮಾತುಕತೆ ನಡೆಯಿತು.

ನವದೆಹಲಿಯ ಉದ್ಯೋಗ ಭವನದಲ್ಲಿ ನಡೆದ ದ್ವಿಪಕ್ಷೀಯ ಸಭೆಯಲ್ಲಿ ಉಭಯ ಸಚಿವರು, ಎರಡೂ ದೇಶಗಳ ನಡುವಿನ ಕೈಗಾರಿಕೆ ಕ್ಷೇತ್ರದಲ್ಲಿ ಹೊಂದಬಹುದಾದ ಸಹಕಾರ, ಹಲವಾರು ಕ್ಷೇತ್ರಗಳಲ್ಲಿ ಸುಸ್ಥಿರ ಬೆಳವಣಿಗೆ, ತಾಂತ್ರಿಕ ನಾಯಕತ್ವ ಮತ್ತು ಸ್ವಾವಲಂಬನೆಗೆ ಒತ್ತು ನೀಡುವ ಬಗ್ಗೆ ಚರ್ಚಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು 2047ರ ವೇಳೆಗೆ ವಿಕಸಿತ ಭಾರತ ಕನಸು ಸಾಕಾರಗೊಳಿಸುವ ನಿಟ್ಟಿನಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. 2070ರ ವೇಳೆಗೆ ಆಟೋಮೊಬೈಲ್ ಕ್ಷೇತ್ರದಲ್ಲಿ ಇಂಗಾಲದ ನಿವ್ವಳ ಹೊರಸೂಸುವಿಕೆಯ ಗುರಿ ಸಾಧಿಸುವ ನಿಟ್ಟಿನಲ್ಲಿ ಭಾರತ ದಾಪುಗಾಲಿಡುತ್ತಿದೆ. ಆಟೋಮೋಟಿವ್, ಭಾರೀ ಎಲೆಕ್ಟ್ರಿಕಲ್ ಮತ್ತು ಬಂಡವಾಳ ಸರಕುಗಳ ವಲಯಗಳು ಈ ಸುಸ್ಥಿರ ಬೆಳವಣಿಗೆಯ ಪಥವನ್ನು ಬೆಂಬಲಿಸುವ ಪ್ರಮುಖ ಸ್ತಂಭಗಳಾಗಿವೆ ಎಂದು ತಿಳಿಸಿದರು.

16 ಲಕ್ಷ ಇವಿ ವಾಹನ ರಸ್ತೆಗೆ: ಜಗತ್ತಿನ ಪ್ರಮುಖ ಆಟೋಮೊಬೈಲ್ ತಯಾರಿಕಾ ದೇಶಗಳಲ್ಲಿ ಮುಂಚೂಣಿಯಲ್ಲಿರುವ ಭಾರತವು ಫೇಮ್–2 ಯೋಜನೆಯ ಮೂಲಕ ಇವಿ ವಾಹನಗಳನ್ನು ತ್ವರಿತವಾಗಿ ಅಳವಡಿಸಿಕೊಂಡಿದೆ. ಈ ಯೋಜನೆ ಮೂಲಕ 16 ಲಕ್ಷಕ್ಕೂ ಹೆಚ್ಚು ಇವಿ ವಾಹನಗಳು ರಸ್ತೆಗೆ ಇಳಿಯುವಂತಾಗಿದೆ. ದೇಶಾದ್ಯಂತ 10,900ಕ್ಕೂ ಹೆಚ್ಚು ಸಾರ್ವಜನಿಕ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಸಹಕಾರಿ ಆಗಿದೆ ಎಂದು ಕುಮಾರಸ್ವಾಮಿ ಅವರು ಕೆನಡಾ ಸಚಿವರಿಗೆ ಮಾಹಿತಿ ನೀಡಿದರು.

ಆ ನಂತರ ಪಿಎಂ ಇ–ಡ್ರೈವ್ ಯೋಜನೆ ಮತ್ತು ಪಿಎಂ ಇ–ಬಸ್ ಸೇವಾ ಉಪಕ್ರಮಗಳ ಮೂಲಕ ಇವಿ ದ್ವಿಚಕ್ರ ವಾಹನಗಳು, ತ್ರಿಚಕ್ರ ವಾಹನಗಳು, ಬಸ್‌ಗಳು, ಟ್ರಕ್ಕುಗಳು, ಚಾರ್ಜಿಂಗ್ ಮೂಲಸೌಕರ್ಯ ಮತ್ತು ಪರೀಕ್ಷಾ ಸೌಲಭ್ಯಗಳನ್ನು ಬೆಂಬಲಿಸುವ ಪರಿವರ್ತನಾತ್ಮಕ ಯೋಜನೆಯಾಗಿ ಅನುಷ್ಠಾನಕ್ಕೆ ಬಂದಿತು. ಈ ಉಪಕ್ರಮಗಳ ಮೂಲಕ ಜಾಗತಿಕ ಸುರಕ್ಷತೆ ಮತ್ತು ಕಾರ್ಯಕ್ಷಮತೆಯ ಮಾನದಂಡಗಳಡಿ ದೇಶೀಯ ಉತ್ಪಾದನಾ ಸಾಮರ್ಥ್ಯಗಳನ್ನು ಬಲಪಡಿಸಲಾಗುತ್ತಿದೆ ಎಂದು ತಿಳಿಸಿದರು.

ಈ ದ್ವಿಪಕ್ಷೀಯ ಚರ್ಚೆ, ದೃಢವಾದ ಮತ್ತು ಸುರಕ್ಷಿತ ಬ್ಯಾಟರಿ ಉತ್ಪಾದನಾ ಪರಿಸರ ವ್ಯವಸ್ಥೆಯ ಅಭಿವೃದ್ಧಿ ಮತ್ತು ಶುದ್ಧ ಇಂಧನ ತಂತ್ರಜ್ಞಾನಗಳಿಗೆ ಅಗತ್ಯವಾದ ನಿರ್ಣಾಯಕ ಖನಿಜಗಳ ಉತ್ಪಾದನೆ, ಬಳಕೆ ಬಗ್ಗೆ ಕೇಂದ್ರೀಕೃತವಾಗಿತ್ತು. ಭಾರತದ ಉಕ್ಕು ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಮತ್ತು ದೀರ್ಘಕಾಲೀನ ಇಂಧನ ಭದ್ರತೆಯನ್ನು ಬಲಪಡಿಸಲು ರಾಷ್ಟ್ರೀಯ ಖನಿಜಾಭಿವೃದ್ಧಿ ನಿಗಮ (ಎನ್‌ಎಂಡಿಸಿ) ಕಲ್ಲಿದ್ದಲು ನಿಕ್ಷೇಪಗಳನ್ನು ಸಕ್ರಿಯವಾಗಿ ಅನ್ವೇಷಿಸುತ್ತಿದೆ ಎಂದು ಇದೇ ವೇಳೆ ತಿಳಿಸಲಾಯಿತು.

ತಂತ್ರಜ್ಞಾನ ವಿನಿಮಯದ ವಿಶ್ವಾಸ: ಸಚಿವ ಟಿಮ್ ಹಾಡ್ಗಸನ್ ನೇತೃತ್ವದ ಕೆನಡಾದ ನಿಯೋಗವು, ಬ್ಯಾಟರಿ ತಂತ್ರಜ್ಞಾನಗಳು ಮತ್ತು ಇವಿ ಸಾರಿಗೆ ಪರಿಹಾರಗಳಲ್ಲಿ ಭಾರತ ಜಾಗತಿಕ ನಾಯಕ ಎಂದು ಬಣ್ಣಿಸಿ, ಭಾರತೀಯ ಪಾಲುದಾರರೊಂದಿಗೆ ಸುಧಾರಿತ ಬ್ಯಾಟರಿ ತಂತ್ರಜ್ಞಾನಗಳನ್ನು ಹಂಚಿಕೊಳ್ಳುವ ಇಚ್ಛೆ ವ್ಯಕ್ತಪಡಿಸಿತು. ಇವಿ ಚಲನಶೀಲತೆ ಮತ್ತು ಉತ್ಪಾದನಾ ವಲಯಗಳಲ್ಲಿ ಭಾರತೀಯ ಖಾಸಗಿ ವಲಯದ ಉದ್ಯಮಿಗಳು ನಡೆಸುತ್ತಿರುವ ಗಮನಾರ್ಹ ಕೆಲಸವನ್ನು ಅವರು ಶ್ಲಾಘಿಸಿದರು. ಇಂಗಾಲ ಹೊರಸೂಸುವಿಕೆಯನ್ನು ಕೊನೆಗಾಣಿಸುವ ನಿಟ್ಟಿನಲ್ಲಿ ನಿರ್ಣಾಯಕವಾಗಿರುವ ಕ್ರಮಗಳ ವಿಚಾರದಲ್ಲಿ ಭಾರತವನ್ನು ಬೆಂಬಲಿಸುವ ಭರವಸೆ ನೀಡಿತು ಎಂದು ಸಚಿವಾಲಯದ ಮೂಲಗಳು ತಿಳಿಸಿವೆ.

ದ್ವಿಪಕ್ಷೀಯ ಚರ್ಚೆಯಲ್ಲಿ ಬೃಹತ್ ಕೈಗಾರಿಕೆ ಸಚಿವಾಲಯದ ಕಾರ್ಯದರ್ಶಿ ಕಮ್ರನ್ ರಿಜ್ವಿ, ಹೆಚ್ಚುವರಿ ಕಾರ್ಯದರ್ಶಿ ಹನೀಫ್ ಖುರೇಷಿ, ಜಂಟಿ ಕಾರ್ಯದರ್ಶಿ ವಿಜಯ್ ಮಿತ್ತಲ್, ಉಕ್ಕು ಸಚಿವಾಲಯದ ಜಂಟಿ ಕಾರ್ಯದರ್ಶಿ ವಿನೋದ್‌ಕುಮಾರ್ ತ್ರಿಪಾಠಿ, ಎನ್‌ಎಂಡಿಸಿ ಸಿಎಂಡಿ ಅಮಿತವ್ ಮುಖರ್ಜಿ, ಬಿಎಚ್‌ಇಎಲ್ ಸಿಎಂಡಿ ಕೆ.ಎಸ್.ಮೂರ್ತಿ ಸೇರಿದಂತೆ ಅನೇಕ ಹಿರಿಯ ಅಧಿಕಾರಿಗಳು ಹಾಜರಿದ್ದರು.

ಗಣರಾಜ್ಯೋತ್ಸವ...


ಮೈಸೂರಿನ ಗಾರ್ಡನ್ ಟೆನ್ನಿಸ್ ಕ್ಲಬ್‌ನಲ್ಲಿ 77ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ನವಕ್ ಕೃತಿ ಗಾರ್ಡನ್ ಟೆನ್ನಿಸ್ ಕ್ಲಬ್ 20ರ ಉದ್ಘಾಟನೆಯನ್ನು ಶಾಸಕ ಕೆ.ಹರೀಶ್‌ಗೌಡರು ನೆರವೇರಿಸಿದರು. ಈ ವೇಳೆ ಮುಡಾ ಮಾಜಿ ಅಧ್ಯಕ್ಷ ಧ್ರುವಕುಮಾರ್ ಧ್ವಜಾರೋಹಣ ಮಾಡಿದರು. ಕ್ಲಬ್ ಅಧ್ಯಕ್ಷ ಎನ್.ಧ್ರುವರಾಜ್, ಪಿ.ಮಧುಕರ್, ನಂದೀಶ್, ಬಾಲಾಜಿ, ಭವರಲಾಲ್, ಆದಿಶೇಷ, ದಾಸಪ್ಪ, ಪ್ರೇಮ್ ಪ್ರಕಾಶ್, ರವಿಕಾಂತ್, ಸುಬ್ಬು, ವೆಂಕಟೇಶ್, ದಿನೇಶ್, ಗೋಪಾಲಕೃಷ್ಣ ಇನ್ನಿತರರಿದ್ದರು.

ದೇವಾಲಯ ನಿರ್ಮಾಣಕ್ಕೆ ಶಾಸಕ ಜಿಟಿಡಿ ಭೂಮಿಪೂಜೆ


ಮೈಸೂರು ತಾಲೂಕು ಜಯಪುರ ಹೋಬಳಿಯ ದೇವಗಹಳ್ಳಿ ಗ್ರಾಮದಲ್ಲಿ 45 ಲಕ್ಷ ರೂ. ವೆಚ್ಚದಲ್ಲಿ ವೀರಭದ್ರೇಶ್ವರಸ್ವಾಮಿ ದೇವಾಲಯ ನಿರ್ಮಾಣಕ್ಕೆ ಶಾಸಕ ಜಿ.ಟಿ.ದೇವೇಗೌಡರು ಬುಧವಾರ ಭೂಮಿಪೂಜೆ ಮಾಡಿದರು. ಈ ಸಂದರ್ಭದಲ್ಲಿ ಗೋಪಾಲಪುರ ಗ್ರಾಪಂ ಅಧ್ಯಕ್ಷ ರಾಮಲಿಂಗಚಾರಿ, ಮಾಜಿ ಅಧ್ಯಕ್ಷ ಜಿ.ಕೆ. ಬಸವೇಗೌಡ, ಗ್ರಾಪಂ ಸದಸ್ಯರಾದ ಸಿದ್ದಯ್ಯ, ಶಿಲ್ಪಾ, ಮುಖಂಡರಾದ ವೀರಾಜಪ್ಪ, ನಿಂಗರಾಜಪ್ಪ, ಬಸವಣ್ಣ, ರಾಜಣ್ಣ, ಲಿಂಗರಾಜು, ಮಹದೇವಸ್ವಾಮಿ, ವೀರಾಜು, ಸುರೇಶ, ಯೋಗಿ, ವಿನಯ್, ಸುನಿ, ಮಂಜು, ವಿಜಯ್, ಬಸವಣ್ಣ, ರವಿ, ಶಿವಣ್ಣ, ಸಂತೋಷ, ದೊರೆರಾಜು, ಕೆಂಡಗಣ್ಣರಾದ್ಯ ಇನ್ನಿತರರಿದ್ದರು.

ಫೆ.1ರಂದು ಮಹಾ ಮೃತ್ಯುಂಜಯ ಹೋಮ

ಮೈಸೂರು: ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಫೆ.1ರಂದು ಮಾಘಮಾಸದ ಭಾನುವಾರದಂದು ಹುಣ್ಣಿಮೆ ಪ್ರಯುಕ್ತ ಮಹಾ ಮೃತ್ಯುಂಜಯ ಹೋಮ ಮತ್ತು ಮೇಷ, ಸಿಂಹ, ವೃಶ್ಚಿಕ, ಕುಂಭ, ಮೀನ ರಾಶಿಯವರಿಗೆ ಶನಿಮಹಾಶಾಂತಿ ಮತ್ತು ಭಾದಾನಿವಾರಕ ಮಹಾ ಸುದರ್ಶನ ಹೋಮ ಇತರೆ ಪೂಜೆಗಳನ್ನು ಏರ್ಪಡಿಸಲಾಗಿದೆ. ಬೆಳಿಗ್ಗೆ 9.30ಕ್ಕೆ ಪ್ರಾರಂಭವಾಗಿ 12.30ಕ್ಕೆ ಮಹಾ ಪೂರ್ಣಾಹುತಿ ನಂತರ ಮಹಾಮಂಗಳಾರತಿ ನೆರವೇರಲ್ಪಡುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಕ್ಯಾಲೆಂಡರ್ ಬಿಡುಗಡೆ...


ಡಾ.ರಾಜ್ ಶಿವಸೈನ್ಯ ಶಿವರಾಜ್‌ಕುಮಾರ್ ಅಭಿಮಾನಿಗಳ ಸಂಘದ 2026ರ ಕ್ಯಾಲೆಂಡರ್ ಅನ್ನು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಬಿಡುಗಡೆಗೊಳಿಸಿದರು. ಈ ವೇಳೆ ಮಾಜಿ ಸಚಿವ ಸಾ.ರಾ.ಮಹೇಶ್, ಚಿತ್ರನಟ ಸೋಮಣ್ಣ, ಅಧ್ಯಕ್ಷ ಬಿ.ಎಸ್.ರವಿ, ಕಾರ್ಯದರ್ಶಿ ಬಿ.ಎಸ್.ಮಹೇಶ್, ಉಪಾಧ್ಯಕ್ಷರಾದ ದೊರೆ, ಮಂಜಣ್ಣ, ಹರೀಶ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ 'ಗ್ಲೋ ಬೈ ಕೀರ್ತಿಲಾಲ್ಸ್' ವಜ್ರಾಭರಣ ಬ್ರ್ಯಾಂಡ್‌ನ 9ನೇ ಮಳಿಗೆ ಆರಂಭ

ಮೈಸೂರು, ಜ.29– ಹೆಸರಾಂತ 'ಗ್ಲೋ ಬೈ ಕೀರ್ತಿಲಾಲ್ಸ್' ವಜ್ರಾಭರಣ ಬ್ರ್ಯಾಂಡ್‌ನ ಒಂಬತ್ತನೇ ಮಳಿಗೆಯು ಮೈಸೂರಿನ ಡಿ.ದೇವರಾಜ ಅರಸು ರಸ್ತೆಯಲ್ಲಿ ಆರಂಭಗೊಂಡಿದೆ.

ವಿಸ್ತಾರಗೊಳ್ಳುತ್ತಿರುವ ತನ್ನ ಗ್ರಾಹಕರಿಗೆ ಉತ್ತಮ ಗುಣಮಟ್ಟದ ನೈಸರ್ಗಿಕ ವಜ್ರದ ಆಭರಣಗಳನ್ನು ಒದಗಿಸುವ ನಿಟ್ಟಿನಲ್ಲಿ ಮೈಲಿಗಲ್ಲು ಸ್ಥಾಪಿಸಿರುವ ಕೀರ್ತಿಲಾಲ್ ಅವರ ಗ್ಲೋ ಬ್ರ್ಯಾಂಡ್, ಜನರೇಷನ್ ಝುಡ್‌ಗೆ ಹೊಸ ಕೊಡುಗೆ ನೀಡಿದೆ. ಈ ಹೊಸ ಮಳಿಗೆಯಲ್ಲಿ 7 ಸಾವಿರ ರೂ.ಗಳಿಂದ ಪ್ರಾರಂಭಿಕ ಬೆಲೆಯಿಂದ ಹಗುರವಾದ ನೈಸರ್ಗಿಕ ವಜ್ರದ ಆಭರಣಗಳ ಸೊಗಸಾದ ಸಂಗ್ರಹವಿದೆ.

ಯುವ ಗ್ರಾಹಕರನ್ನು ಗಮನದಲ್ಲಿಟ್ಟುಕೊಂಡು ನವೀನ ವಿನ್ಯಾಸ ಹಾಗೂ ಸಮಯಾತೀತ ಸೊಬಗುಗಳ ಮಿಶ್ರಣ ಮಾದರಿಯಲ್ಲಿ ಆಭರಣಗಳನ್ನು ತಯಾರಿಸಲಾಗಿದೆ. ಕರಕುಶಲತೆಯಲ್ಲಿ ಬದ್ಧತೆ ಹೊಂದಿರುವ ಕೀರ್ತಿಲಾಲ್ ಬ್ರ್ಯಾಂಡ್, ಅತ್ಯಾಧುನಿಕ ತಂತ್ರಜ್ಞಾನ ಹಾಗೂ ನುರಿತ ಕುಶಲಕರ್ಮಿಗಳ ನೈಪುಣ್ಯತೆಯಿಂದ ಅಸಾಧಾರಣ ತೇಜಸ್ಸು ಹೊರಹೊಮ್ಮಿಸುತ್ತಿದೆ. ನೂತನ ಮಳಿಗೆಯಲ್ಲಿ ಗ್ರಾಹಕರಿಗೆ ವಿಶೇಷ ಪ್ರಾರಂಭಿಕ ರಿಯಾಯ್ತಿ ನೀಡಲಾಗಿದೆ. ತಯಾರಿಕೆ ಶುಲ್ಕದ ಮೇಲೆ ಶೇ.20 ಹಾಗೂ ವಜ್ರದ ಮೇಲೆ ಶೇ.26ರಷ್ಟು ರಿಯಾಯ್ತಿ ಪಡೆಯಬಹುದಾಗಿದೆ. ಅದೃಷ್ಟಶಾಲಿ ದಂಪತಿಗೆ ಥೈಲ್ಯಾಂಡ್‌ನ ಫುಕೆಟ್ ಪ್ರವಾಸದ ಟಿಕೆಟ್ ಗೆಲ್ಲುವ ಅವಕಾಶವೂ ಇದೆ.


ಮೈಸೂರಿನ ಡಿ.ದೇವರಾಜ ಅರಸು ರಸ್ತೆಯಲ್ಲಿ 'ಗ್ಲೋ ಬೈ ಕೀರ್ತಿಲಾಲ್ಸ್' ಮಳಿಗೆ ಶುಭಾರಂಭಗೊಂಡಿತು.

ಕೀರ್ತಿಲಾಲ್ಸ್ ಸಂಸ್ಥೆಯ ವ್ಯಾಪಾರ ವಿಭಾಗದ ನಿರ್ದೇಶಕ ಸೂರಜ್ ಶಾಂತಕುಮಾರ್, ಸಾಂಪ್ರದಾಯಿಕ ಶ್ರೀಮಂತ ನಗರ ಮೈಸೂರಿನಲ್ಲಿ ಗ್ಲೋ ಬೈ ಕೀರ್ತಿಲಾಲ್ಸ್ ಆರಂಭಿಸುವ ಮೂಲಕ ರೋಮಾಂಚನಗೊಂಡಿದ್ದೇವೆ. ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳದೆ ಯುವ ಗ್ರಾಹಕರಿಗೆ ಅವರ ಆಕಾಂಕ್ಷೆಗಳನ್ನು ಬಿಂಬಿಸುವಂತಹ ಆಭರಣಗಳನ್ನು ನೀಡುವುದು ನಮ್ಮ ಗುರಿಯಾಗಿದೆ. ಅತ್ಯಾಕರ್ಷಕ ವಜ್ರದ ಆಭರಣಗಳನ್ನು ಖರೀದಿಸಲು ಡಿ.ದೇವರಾಜ ಅರಸು ರಸ್ತೆ ಶೋರೂಂ ಅಥವಾ www.gllowjewels.comಗೆ ಭೇಟಿ ನೀಡಬಹುದು ಎಂದು ತಿಳಿಸಿದರು.

ಸಮ್ಮೇಳನಕ್ಕೆ ಆಹ್ವಾನ


ಧಾರವಾಡದಲ್ಲಿ ಮಾದಿಗ ವಕೀಲರ ಸಮ್ಮೇಳನವನ್ನು ಆಯೋಜಿಸಿರುವ ಹಿನ್ನೆಲೆಯಲ್ಲಿ ಸೋಮವಾರ ಬೀದರ್‌ನಲ್ಲಿ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆಯಿಂದ ಪೂರ್ವಭಾವಿ ಸಭೆ ನಡೆಸಲಾಯಿತು. ಇದೇ ವೇಳೆ ಸಮ್ಮೇಳನದ ಯಶಸ್ವಿಗೆ ಸಹಕರಿಸುವಂತೆ ಕರೆ ನೀಡಿದ ವೇದಿಕೆ ಅಧ್ಯಕ್ಷರೂ ಆದ ಮೈಸೂರಿನ ಹಿರಿಯ ವಕೀಲ ಎಸ್.ಅರುಣ್‌ಕುಮಾರ್, ಪ್ರಧಾನ ಕಾರ್ಯದರ್ಶಿ ಬೂದಿತಿಟ್ಟು ರಾಜೇಂದ್ರ, ಹಿರಿಯ ವಕೀಲರಾದ ಮಾಳಪ್ಪ ಕುರ್ಕಿ, ಸುರೇಂದ್ರ ಕುಮಾರ್ ಮತ್ತಿತರ ಪ್ರಮುಖರನ್ನು ಅಭಿನಂದಿಸಲಾಯಿತು.

ಸಂಚಾರಿ ಗ್ರಂಥಾಲಯದ ಸೇವೆ ಫೆ.5 ರವರೆಗೆ ಸ್ಥಗಿತ

ಮೈಸೂರು,ಜ.29– ಮೈಸೂರು ನಗರ ಕೇಂದ್ರ ಗ್ರಂಥಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕುವೆಂಪು ಸಂಚಾರಿ ಜ.25 ರಿಂದ ಜನವರಿ 29 ರವರೆಗೆ ಸಂಚಾರಿ ಗ್ರಂಥಾಲಯದ ಸೇವೆಯನ್ನು ಸ್ಥಗಿತಗೊಳಿಸಲಾಗಿತ್ತು. ಆದರೆ ಸದರಿ ವಾಹನದ ದುರಸ್ತಿ ಕಾರ್ಯ ಪೂರ್ಣಗೊಳ್ಳದಿರುವುದರಿಂದ ಫೆ.5 ರವರೆಗೆ ಸೇವೆ ಸ್ಥಗಿತಗೊಳಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಜ.29– ಹೂಟಗಳ್ಳಿ–ವಾಜಮಂಗಲ–ಟಿ.ಕೆ ಹಳ್ಳಿ ಏಕಮುಖ ವಿದ್ಯುತ್ ಪ್ರಸರಣ ಮಾರ್ಗದ ಬದಲಾಗಿ ದ್ವಿ–ಮುಖ ಗೋಪುರ ಹಾಗೂ ದ್ವಿ–ಮುಖ ವಿದ್ಯುತ್ ಮಾರ್ಗವನ್ನಾಗಿ ನಿರ್ಮಿಸುವ ಕಾಮಗಾರಿ ನಿಮಿತ್ತ ಜ.31 ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಆರ್‌ಬಿಐ ರಸ್ತೆ, ಜಿಆರ್‌ಎಸ್ ಪ್ಯಾಂಟಿಸಿ ಪಾರ್ಕ್ ಸುತ್ತಮುತ್ತ ವಿಪ್ರೋ ರಸ್ತೆ, ಆರ್‌ಬಿಐ ಮೇನ್ ಗೇಟ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜುವಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಎರಡನೇ ವರ್ಷದ ಪುಣ್ಯಸ್ಮರಣೆ


ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷ ಕಳೆದರೂ ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಸದಾ ನೆಲೆಸಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಬಯಸುವವರು

ದುಃಖತಪ್ತರು: ಮಕ್ಕಳು, ಅಳಿಯಂದಿರು ಹಾಗೂ ಮೊಮ್ಮಕ್ಕಳು.

ಶ್ರೀಮತಿ ಸುಶೀಲಮ್ಮ

ಮಹಾರಾಷ್ಟ್ರ ಡಿಸಿಎಂ ಅಜಿತ್ ಪವಾರ್ ಪಂಚಭೂತಗಳಲ್ಲಿ ಲೀನ

ಅಂತ್ಯಕ್ರಿಯೆಯಲ್ಲಿ ಅಮಿತ್ ಶಾ, ಫಡ್ನವೀಸ್ ಉಪಸ್ಥಿತಿ; ಸಕಲ ಸರ್ಕಾರಿ ಗೌರವದೊಂದಿಗೆ ಭಾವಪೂರ್ಣ ವಿದಾಯ



ಬಾರಾಮತಿ, ಜ.29– ವಿಮಾನ ಅಪಘಾತದಲ್ಲಿ ಮೃತಪಟ್ಟ ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರ ಅಂತ್ಯಕ್ರಿಯೆ ಪುಣೆ ಜಿಲ್ಲೆಯ ಬಾರಾಮತಿಯಲ್ಲಿ ಪೂರ್ಣ ಸರ್ಕಾರಿ ಗೌರವಗಳೊಂದಿಗೆ ಗುರುವಾರ ನಡೆಯಿತು.

ಅಂತ್ಯಕ್ರಿಯೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಎನ್‌ಸಿಪಿ ಹಿರಿಯ ನಾಯಕ ಶರದ್‌ಪವಾರ್ ಸೇರಿದಂತೆ ಹಲವು ನಾಯಕರು ಭಾಗವಹಿಸಿದ್ದರು. ಬೆಳಿಗ್ಗೆ 11 ಗಂಟೆ ಸುಮಾರಿಗೆ ಬಾರಾಮತಿಯ ವಿದ್ಯಾ ಪ್ರತಿಷ್ಠಾನದ ಕ್ರೀಡಾ ಮೈದಾನದಲ್ಲಿ ಅಂತ್ಯಸಂಸ್ಕಾರ ನಡೆಸಲಾಯಿತು. ಶಾಸಕರು, ಸಚಿವರು ಅಗಲಿದ ನಾಯಕನಿಗೆ ಅಂತಿಮ ನಮನ ಸಲ್ಲಿಸಿದರು. ಇಂದು ಬೆಳಿಗ್ಗೆ, ಅಜಿತ್ ಪವಾರ್ ಅವರ ಪಾರ್ಥಿವ ಶರೀರವನ್ನು ಬಾರಾಮತಿಯ ಪುಣ್ಯಶ್ಲೋಕ್ ಅಹಲ್ಯಾದೇವಿ ಆಸ್ಪತ್ರೆಯಿಂದ ಬಾರಾಮತಿಯ ಬಳಿಯ ಅವರ ಕಟೇವಾಡಿ ಗ್ರಾಮಕ್ಕೆ ಕೊಂಡೊಯ್ಯಲಾಯಿತು. ಅಂತ್ಯಕ್ರಿಯೆಗೂ ಮುನ್ನ ಬಾರಾಮತಿಯಲ್ಲಿ ಮೆರವಣಿಗೆ ನಡೆಯಿತು. ಲಕ್ಷಾಂತರ ಮಂದಿ ಕಣ್ಣೀರ ವಿದಾಯ ಸಲ್ಲಿಸಿದರು. ಅಜಿತ್ ಪವಾರ್ ಅಮರ್ ರಹೇ ಎಂಬ ಘೋಷಣೆಗಳು ಜೋರಾಗಿ ಮೊಳಗಿದ್ದು, ಅನೇಕರು ಕಣ್ಣೀರು ಸುರಿಸುತ್ತಾ ಪ್ರೀತಿಯ ನಾಯಕನನ್ನು ಸ್ಮರಿಸಿದರು.


ಅಂತ್ಯಕ್ರಿಯೆಯಲ್ಲಿ ಮಹಾರಾಷ್ಟ್ರ ಸರ್ಕಾರದ ಪೂರ್ಣ ಸರ್ಕಾರಿ ಗೌರವ ನೀಡಲಾಯಿತು. ರಾಜ್ಯ ಸರ್ಕಾರದ ಉನ್ನತ ಅಧಿಕಾರಿಗಳು, ಪೊಲೀಸ್ ಮತ್ತು ಸೇನಾ ಸಿಬ್ಬಂದಿ ಉಪಸ್ಥಿತರಿದ್ದರು. ಮೃತದೇಹವನ್ನು ರಾಷ್ಟ್ರೀಯ ಧ್ವಜದಿಂದ ಸುತ್ತಿ, ಸೇನಾ ಸಿಬ್ಬಂದಿ ಗೌರವ ಸಲ್ಲಿಸಿದರು. 15,000 ಗಂಟೆಗಳ ಹಾರಾಟದ ಅನುಭವ ಹೊಂದಿರುವ ಕ್ಯಾಪ್ಟನ್ ಸುಮಿತ್ ಕಪೂರ್ 1,500 ಗಂಟೆಗಳ ಹಾರಾಟದ ಸಹ–ಪೈಲಟ್ ಕ್ಯಾಪ್ಟನ್ ಶಾಂಭವಿ ಪಾಠಕ್, ವೈಯಕ್ತಿಕ ಭದ್ರತಾ ಅಧಿಕಾರಿ ವಿದೀಪ್ ಜಾಧವ್ ಮತ್ತು ವಿಮಾನ ಸಹಾಯಕಿ ಪಿಂಕಿ ಮಾಲಿ ಈ ದುರಂತದಲ್ಲಿ ಸಾವನ್ನಪ್ಪಿದ ಇತರರು. ಅವರ ಮೃತದೇಹಗಳನ್ನು ಅವರ ಕುಟುಂಬಗಳಿಗೆ ಹಸ್ತಾಂತರಿಸಲಾಗಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

2ನೇ ವರ್ಷದ ಸವಿನೆನಪು


ನೀವು ನಮ್ಮನ್ನು ಅಗಲಿ ಎರಡು ವರ್ಷ ಕಳೆದರು, ನಮ್ಮ ಹೃದಯದಲ್ಲಿ ಸದಾ ನೆಲೆಸಿದ್ದೀರಿ, ಸದಾ ನಿಮ್ಮ ನೆನಪಿನಲ್ಲಿರುವ ಶ್ರೀಮತಿ ಯಶೋಧ – ಪತ್ನಿ ಮತ್ತು ಕುಟುಂಬ ವರ್ಗದವರು, ಕೂರ್ಗಳ್ಳಿ, ವಿಜಯಶ್ರೀಪುರ, ಮೈಸೂರು.

ಶ್ರೀ ಬಸವರಾಜು

23ನೇ ವರ್ಷದ ಸವಿನೆನಪು


ನೀವು ನಮ್ಮನ್ನಗಲಿ 23 ವರ್ಷವಾದರೂ ಸದಾ ನಿಮ್ಮ ನೆನಪಿನಲ್ಲಿರುವ ದುಃಖತಪ್ತರು: ಮಗ ರವಿ.ಎಸ್ ಹಾಗೂ ಶ್ರೀಮತಿ ಜಯಲಕ್ಷ್ಮಮ್ಮ, ಮಕ್ಕಳು ಮತ್ತು ಕುಟುಂಬವರ್ಗದವರು

ಬೀಟೆ ಸಿದ್ದೇಗೌಡರು

ಕೂರ್ಗಳ್ಳಿ, ನಿಧನ: 30-1-2003 ಕೂರ್ಗಳ್ಳಿ, ಮೈಸೂರು.

ಸಾರ್ವಜನಿಕರ ಗಮನಕ್ಕೆ

ನನ್ನ ಕಕ್ಷಿದಾರರಾದ ಶ್ರೀ. ಮೊಹಮ್ಮದ್ ಗಯಾಸುದ್ದೀನ್, ಬಿನ್. ಶ್ರೀ. ಮೊಹಮ್ಮದ್ ಖಮ್ರುದ್ದೀನ್ ರವರು ಷೆಡ್ಯೂಲ್ ಸ್ವತ್ತನ್ನು ಶ್ರೀ. ಮಲ್ಲೇಶ್ ಬಿನ್. ಲೇಟ್. ಸಣ್ಣ ಹುಚ್ಚಯ್ಯ ರವರಿಂದ ಖರೀದಿ ಮಾಡಲು ಇಚ್ಛಿಸಿರುತ್ತಾರೆ, ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಇವರಿಗಲ್ಲದೇ ಮತ್ಯಾರಿಗೂ, ಯಾವ ಬ್ಯಾಂಕಿಗಳಿಗೂ, ಹಣಕಾಸು ಸಂಸ್ಥೆಗಳಿಗೂ ಮತ್ತು ಸಹಕಾರ ಸಂಸ್ಥೆಗಳಿಗೂ ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿ ಅಥವಾ ಅಭ್ಯಂತರ ಇದ್ದರೇ ಅವರು ಈ ನೋಟಿಸ್ ಪಡೆದ 7 ದಿನಗಳೊಳಗೆ ಸಂಬಂಧಿತ ದಾಖಲಾತಿಗಳ ಸಮೇತ ಈ ಕೆಳಗೆ ಸಹಿ ಮಾಡಿರುವ ನನಗೆ ಬಂದು ಭೇಟಿ ಮಾಡತಕ್ಕದ್ದು. ಇಲ್ಲದಿದ್ದಲ್ಲಿ ಈ ಸ್ವತ್ತಿನ ಮೇಲೆ ಯಾವುದೇ ರೀತಿಯ ತಂಟೆ–ತಕರಾರುವಿಲ್ಲ ಎಂದು ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಮೇಲ್ಕಂಡ ರವರಿಂದ ಖರೀದಿಸಲು ಮುಂದಾಗುತ್ತಾರೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಎನ್.ಆರ್.ಮೊಹಲ್ಲಾ, 1 ನೇ ಹಂತ, ದೇವನೂರು, ನಿವೇಶನ ನಂಬರ್ 2905/ಎ ಗೆ ಚೆಕ್ಕು ಬಂದಿ:– ಪೂರ್ವಕ್ಕೆ : ನಿ.ನಂ. 2906, ಪಶ್ಚಿಮಕ್ಕೆ : ನಿ.ನಂ. 2905, ಉತ್ತರಕ್ಕೆ : ನಿ.ನಂ. 2950 ಮತ್ತು 2951 ಮತ್ತು ದಕ್ಷಿಣಕ್ಕೆ : ರಸ್ತೆ. ಇದರ ಅಳತೆ : 6x9 ಮೀಟರ್ಸ್

ಲಾ ಅಸೋಸಿಯೇಟ್
ಸಹಿ/– ಅಯ್ಯುಬ್ ಅಹ್ಮದ್ ಖಾನ್, ವಕೀಲರು.
ಮೊ: 9342113452/9880660318.
ನಂ. 3159, ಕೆ.ಟಿ.ಸ್ಟ್ರೀಟ್, ಸುನ್ನಿಚೌಕ್ ಸರ್ಕಲ್, ಮಂಡಿ ಮೊಹಲ್ಲಾ, ಮೈಸೂರು
ಸ್ಥಳ: ಮೈಸೂರು, ದಿನಾಂಕ: 29/01/2026.

IN THE COURT OF THE VII ASCJ, AT MYSURU
O.S. NO. 829/2024

PLAINTIFF : Smt. Late Chandrakala, Dead by her Lrs, Sri Bharath B.K and Another S/o B.K. Basavaraju Aged about 27 years,

v/s

DEFENDANTS: (1) K.V. Sunitha D/o Smt. Late Sarvamangala Aged about 41 years, (2) Theekshan K.V, D/o Smt. Late Sarvamangala Aged about 38 years, P.T. Pampapathi Dead by his Lrs. (3) Sri. Nikhil S/o late P.T. Pampapathi, Aged about 31 years, (4) Smt. Monika, D/o P.T. Pampapathi Aged about 28 years, Defendants No. 1 & 4 are residing at, No. 473, 18th Cross, 4th Main Vishveshwara Nagara, Vidyaranyapuram Mysuru-570 008. (5) Smt.M.S. Jayashree W/o K. Dinesh Aged about 41 years Proprietrix of New Lakshmi narayana Traders #379. 'B' APMC Yard, Bandipalya, Mysuru-570 025

PAPER PUBLICATION

It is hereby notified to you, the Defendants in the above case, that the Plaintiff has filed a suit against the Defendants 1 to 5 for partition and Separate possession, before the Court of the VII ASCJ, Mysuru. The said case now stands posted to 11/03/2026 for your personal appearance at 11 am. If you do not appear on the said date at that time, you will be placed expert and further proceedings will be proceeded with, in your absence.

Given under my hand and seal of the court dated this 24 day of Jan. 2026

By the Order of the Court
Sd/- Chief Ministerial Officer, Court of Senior Civil Judge and CJM, Mysuru.

Advocate for Plaintiff
Sd/- H.K. Ravi, B.Com., LL.B., Advocate, KAR 2011/2001, No. 1230/A, CH 36/A, Behind Krishnamurthypuram, Chamaraja Mohalla, Mysuru
Date: 24/01/26
Place: Mysuru

ಕಾಡಾನೆ ದಾಳಿಗೆ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕ ಬಲಿ

ಅರಣ್ಯ ಇಲಾಖೆ ವಿರುದ್ಧ ಗ್ರಾಮಸ್ಥರ ಆಕ್ರೋಶ



ಸಿದ್ದಾಪುರ, ಜ.29– ಕಾಡಾನೆಯೊಂದು ದಾಳಿ ಮಾಡಿ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕನನ್ನು ಸಾಯಿಸಿದ ಘಟನೆ ಸಿದ್ದಾಪುರ ಸಮೀಪದ ಗೌರಿ ಬೆಟ್ಟ ಕಾಫಿ ತೋಟದಲ್ಲಿ ಸಂಭವಿಸಿದೆ.

ವಿರಾಜಪೇಟೆ ತಾಲೂಕಿನ ಹುಂಡಿ ಗ್ರಾಮದ ಅಬ್ದುಲ್ ಲತೀಫ್(72) ಮೃತ ದುರ್ದೈವಿ. ಇದರಿಂದ ಅರಣ್ಯ ಇಲಾಖೆ ವಿರುದ್ಧ ಕಾರ್ಮಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಜೆಗೊಳ್ಳಿ ಬಳಿಯ ಗೌರಿಬೆಟ್ಟ ಎಸ್ಟೇಟ್‌ನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಕಾಡಾನೆ ದಾಳಿ ಮಾಡಿದ ಘಟನೆಯ ಸುದ್ದಿ ಹರಡುತ್ತಿದ್ದಂತೆ ಸ್ಥಳಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು, ಗ್ರಾಮಸ್ಥರು ಜಮಾಯಿಸಿ ಅರಣ್ಯ ಇಲಾಖೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡರು.

ಅರಣ್ಯ ಇಲಾಖೆಯ ನಿರ್ಲಕ್ಷ್ಯವೇ ಈ ದುರ್ಘಟನೆಗೆ ಕಾರಣವೆಂದು ಆರೋಪಿಸಿರುವ ಗ್ರಾಮಸ್ಥರು ಕಾಡು ಪ್ರಾಣಿಗಳ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟಬೇಕೆಂದು ಒತ್ತಾಯಿಸಿದ್ದಾರೆ. ಸ್ಥಳಕ್ಕೆ ಅರಣ್ಯ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸಿದ್ದಾಪುರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಮೃತ ಲತೀಫ್, ಪತ್ನಿ ಹಾಗೂ ಮೂವರು ಮಕ್ಕಳನ್ನು ಅಗಲಿದ್ದಾರೆ.

ಕಾಡಾನೆ ಸೆರೆಗೆ ಸೂಚನೆ: ಕಾರ್ಮಿಕನ ಬಲಿ ಪಡೆದ ಕಾಡಾನೆಯನ್ನು ಸೆರೆ ಹಿಡಿದು ಸ್ಥಳಾಂತರ ಮಾಡಲು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ಕ್ಷೇತ್ರದ ಶಾಸಕ ಎ.ಎಸ್. ಪೊನ್ನಣ್ಣ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ಸೂಚನೆ ನೀಡಿದ್ದಾರೆ.

ಸರ್ಕಾರದಿಂದ ಪರಿಹಾರವನ್ನು ಕುಟುಂಬಕ್ಕೆ ನೀಡಲಾಗುವುದು ಎಂದು ದೂರವಾಣಿ ಮೂಲಕ ಅವರು ತಿಳಿಸಿದ್ದಾರೆ. ವಿರಾಜಪೇಟೆ ಎಸಿಎಫ್ ತಾಸಿಂ ಭಾನು ಸ್ಥಳಕ್ಕೆ ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ಹೇಳಿ ಮೊದಲ ಹಂತವಾಗಿ 5 ಲಕ್ಷ ರೂ. ಪರಿಹಾರವನ್ನು ಸ್ಥಳದಲ್ಲೇ ವಿತರಿಸಿದರು. ಮರಣೋತ್ತರ ವರದಿ ಬಂದ ನಂತರ ಉಳಿಕೆ 15 ಲಕ್ಷ ರೂ. ಪರಿಹಾರ ನೀಡಲಾಗುವುದು ಎಂದು ಭರವಸೆ ನೀಡಿದರು.

ಕಾರ್ಮಿಕನ ಮೇಲೆ ದಾಳಿ ಮಾಡಿದ ಕಾಡಾನೆ ಬಗ್ಗೆ ಸಿಬ್ಬಂದಿಗಳು ನಿಗಾ ವಹಿಸಿದ್ದು ಸೆರೆಗೆ ಅನುಮತಿ ದೊರೆತ ನಂತರ ಮೇಲಾಧಿಕಾರಿಗಳ ಆದೇಶದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದರು. ಸ್ಥಳಕ್ಕೆ ಸಿದ್ದಾಪುರ ವಲಯ ಕಾಂಗ್ರೆಸ್ ಅಧ್ಯಕ್ಷ ಪ್ರತೀಶ, ಮಾಲ್ದಾರೆ ಗ್ರಾಮ ಪಂಚಾಯಿತಿ ಸದಸ್ಯರುಗಳಾದ ಮಹಮದ್ ಅಲಿ, ಅನಿಫಾ, ವಲಯ ಅರಣ್ಯ ಅಧಿಕಾರಿಗಳಾದ ಶಿವರಾಮ್, ಗಂಗಾಧರ್, ಸರ್ಕಲ್ ಇನ್ಸ್‌ಪೆಕ್ಟರ್ ರಾಜು, ಠಾಣಾಧಿಕಾರಿ ಮಂಜುನಾಥ್ ಆಗಮಿಸಿದ್ದರು.

ಕಾರು ಡಿಕ್ಕಿ: ಆಟೋ ಚಾಲಕ ಸಾವು



ಮಡಿಕೇರಿ, ಜ.29– ಕಾರೊಂದು ಆಟೋ ರಿಕ್ಷಾಕ್ಕೆ ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ಆಟೋ ಚಾಲಕ ಸ್ಥಳದಲ್ಲೇ ಮೃತಪಟ್ಟ ಘಟನೆ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಸಂಪಾಜೆ ಚೆಕ್ ಪೋಸ್ಟ್ ಬಳಿ ನಡೆದಿದೆ.

ಅಪಘಾತ ಎಸಗಿ ಕಾರು ಚಾಲಕ ವಾಹನ ನಿಲ್ಲಿಸದೇ ಪರಾರಿಯಾಗಿದ್ದು, ಆತನ ಬಂಧನಕ್ಕೆ ಕ್ರಮ ಕೈಗೊಳ್ಳಲಾಗಿದೆ. ಆಟೋ ರಿಕ್ಷಾ ಚಾಲಕ ಸಂಪಾಜೆ ನಿವಾಸಿ ಸುಂದರ ಚಿನ್ನಕ್ಕಾನ ಎಂಬವರು ಸ್ಥಳದಲ್ಲೇ ಮೃತಪಟ್ಟಿದ್ದು, ಇನ್ನೋರ್ವ ಪ್ರಯಾಣಿಕನಿಗೂ ಸಣ್ಣ ಪುಟ್ಟ ಗಾಯಗಳಾಗಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಗ್ರಾಮಾಂತರ ಪೊಲೀಸರು ಹೈವೇ ರಸ್ತೆಗಳಲ್ಲಿರುವ ಸಿ.ಸಿ ಕ್ಯಾಮರಾಗಳನ್ನು ಪರಿಶೀಲನೆ ನಡೆಸುತ್ತಿದ್ದು, ಕಾರು ಮತ್ತು ಅದನ್ನು ಚಲಾಯಿಸುತ್ತಿದ್ದ ಚಾಲಕನ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ. ಘಟನೆ ಕುರಿತು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಿ ರಾಮ್ ಜಿ ಬಗ್ಗೆ ಕಾಂಗ್ರೆಸ್ ಅಪಪ್ರಚಾರ



ಮಡಿಕೇರಿ, ಜ.29– ವಿಕಸಿತ ಭಾರತ ಪರಿಕಲ್ಪನೆಯಡಿ ನಡೆಸುವ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಮೂರು ಬಾರಿ ಪ್ರಧಾನ ಮಂತ್ರಿಗಳಾಗಿರುವ ಮೋದಿ ಅವರನ್ನು ವಿರೋಧಿಸುವ ಉದ್ದೇಶಗಳ ಹಿನ್ನೆಲೆಯಲ್ಲಿ ಮಹಾತ್ಮ ಗಾಂಧಿ ಪರಿಕಲ್ಪನೆಯ ಗ್ರಾಮ ಸ್ವರಾಜ್ಯದ ಚಿಂತನೆಗಳಿಂದ ರೂಪಿಸಿರುವ ವಿಬಿ ರಾಮ್ ಜಿ ಯೋಜನೆಯನ್ನು ಕಾಂಗ್ರೆಸ್ ಉದ್ದೇಶ ಪೂರ್ವಕವಾಗಿ ವಿರೋಧಿಸುತ್ತಿದೆ ಮತ್ತು ಅಪಪ್ರಚಾರದಲ್ಲಿ ತೊಡಗಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೋದಿ ಅವರ ಚಿಂತನೆಗಳಡಿ ಭಾರತ ಇಂದು ವಿಶ್ವದಲ್ಲೇ 4ನೇ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ. ಹಿಂದಿನಿಂದಲೂ ಮೋದಿಯವರನ್ನು ವಿರೋಧಿಸಿಕೊಂಡು ಬರುತ್ತಿರುವ ಕಾಂಗ್ರೆಸ್ ಇದೀಗ ವಿಬಿ ರಾಮ್ ಜಿ ಯೋಜನೆಯನ್ನು ವಿರೋಧಿಸುತ್ತಿದೆ. ಇಂತಹ ಮನಸ್ಥಿತಿಯಿಂದ ಕೇಂದ್ರದ ಮಹತ್ವಾಕಾಂಕ್ಷಿ ಯೋಜನೆಗಳು ಕೆಲವೊಂದು ವಿಧದ ಯೋಜನೆಗಳಿಗೆ ರಾಜ್ಯದಲ್ಲಿ ಹಿನ್ನಡೆ ಆಗುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಭಾರತ ಹಿಂದಿನಂತಿಲ್ಲ: ಹಿಂದಿನ ಮನ್‌ರೇಗಾ ಯೋಜನೆ 2005ರಲ್ಲಿ ಆರಂಭಗೊಂಡಿದ್ದು, ಇದೀಗ ನಾವು 2026ನೇ ಸಾಲಿನಲ್ಲಿದ್ದೇವೆ. ಈ ನಡುವಿನ ಅವಧಿಯಲ್ಲಿ ಭಾರತ ಹಿಂದಿನಂತಿಲ್ಲ. ಅಧುನೀಕತೆಯೊಂದಿಗೆ ಸಾಕಷ್ಟು ಬದಲಾವಣೆಗಳನ್ನು ಕಾಣುತ್ತಿದೆ. ಅದಲ್ಲದೆ ಇಂದಿನ ಕಾಲಘಟ್ಟಕ್ಕೆ ಅನ್ವಯಸುವಂತೆ ಯೋಜನೆಯನ್ನು ನವೀಕರಿಸುವ ಮೂಲಕ, ಗಾಂಧೀಜಿ ಅವರ ಪರಿಕಲ್ಪನೆಯ ಗ್ರಾಮಗಳ ಅಭ್ಯುದಯಕ್ಕೆ ಹೆಚ್ಚಿನ ಒತ್ತು ಯೋಜನೆಯ ಮೂಲಕ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದರು.

ಮಹೇಶ್ ಜೈನಿ, ಬಿ.ಕೆ.ಅರುಣ್‌ಕುಮಾರ್, ಉಮೇಶ್ ಸುಬ್ರಮಣಿ ಉಪಸ್ಥಿತರಿದ್ದರು.

ಮೈಸೂರು-ಕುಶಾಲನಗರ ರೈಲು ಯೋಜನೆ ನನೆಗುದಿಗೆ ಬಿದ್ದಿಲ್ಲ

ಮೈಸೂರಿನಿಂದ ಕೊಡಗು ಜಿಲ್ಲೆಯ ಕುಶಾಲನಗರದವರೆಗಿನ ಉದ್ದೇಶಿತ ರೈಲು ಸಂಪರ್ಕ ಯೋಜನೆ ನನೆಗುದಿಗೆ ಬಿದ್ದಿಲ್ಲ. ಈ ಯೋಜನೆಗೆ ಹಿನ್ನಡೆಯಾಗಲು ರಾಜ್ಯದ ವಿಳಂಬ ನೀತಿಯೇ ಕಾರಣವಾಗಿದೆ ಎಂದು ಮೈಸೂರು- ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದ್ದಾರೆ.

ಮಡಿಕೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೈಲು ಮಾರ್ಗದ ಈ ಯೋಜನೆ ಸಾಗುವ ಪ್ರದೇಶಗಳಲ್ಲಿ ರಾಜ್ಯ ಸರ್ಕಾರ ಭೂ ಸ್ವಾಧೀನ ಪ್ರಕ್ರಿಯೆ ಕೈಗೊಳ್ಳಬೇಕಾಗಿತ್ತು. ಆದರೆ ಸಾಕಷ್ಟು ಮನವಿ ಬಳಿಕವೂ ಭೂಸ್ವಾಧೀನ ಕೈಗೊಳ್ಳದೆ ವಿಳಂಬ ನೀತಿ ಅನುಸರಿಸಿದೆ. ಹೀಗಾಗಿ ರೈಲು ಸಂಪರ್ಕ ಯೋಜನೆ ವಿಳಂಬವಾಗಿದೆ ಎಂದು ನುಡಿದರು. ಮತ್ತೊಮ್ಮೆ ರಾಜ್ಯ ಸರ್ಕಾರಕ್ಕೆ ಯೋಜನೆ ಬಗ್ಗೆ ಮನವರಿಕೆ ಮಾಡಿ ಭೂಸ್ವಾಧೀನ ಪ್ರಕ್ರಿಯೆಗೆ ಚಾಲನೆ ನೀಡುವಂತೆ ಕೋರಲಾಗುತ್ತದೆ ಎಂದು ಹೇಳಿದ ಸಂಸದರು, ರೈಲು ಸಂಪರ್ಕಕ್ಕೆ ಆರ್ಥಿಕವಾಗಿ ಯೋಜನೆ ಫಲಕಾರಿಯಾಗಿಲ್ಲ ಎಂಬ ಕಾರಣಕ್ಕೆ ಯೋಜನೆ ವಿಳಂಬಕ್ಕೆ ಕಾರಣವಲ್ಲ. ಕೆಲವೊಮ್ಮೆ ಆರ್ಥಿಕ ಲಾಭ ಹೊರತುಪಡಿಸಿಯೂ ಉದ್ದೇಶಿತ ಸ್ಥಳಗಳಿಗೆ ರೈಲು ಸಂಪರ್ಕ ಕಲ್ಪಿಸುವ ಸಾಧ್ಯತೆ ಬಗ್ಗೆ ಗಮನ ನೀಡುವುದು ಮುಖ್ಯ ಎಂದು ಅಭಿಪ್ರಾಯಪಟ್ಟರು.

ಸಿದ್ದಾಪುರದ ಬಳಿ ಶಾಲಾ ವಾಹನವನ್ನು ಅಟ್ಟಾಡಿಸಿದ ಸಲಗ

ಕೆಲಕಾಲ ಆತಂಕ, ಮಕ್ಕಳು ಪಾರು

ಸಿದ್ದಾಪುರ, ಜ.29– ಶಾಲಾ ಮಕ್ಕಳನ್ನು ಕರೆದೊಯ್ಯುತ್ತಿದ್ದ ಸ್ಕೂಲ್ ಬಸ್ ಅನ್ನು ಒಂಟಿ ಸಲಗವೊಂದು ಅಟ್ಟಾಡಿಸಿದ ಘಟನೆ ವಿರಾಜಪೇಟೆ ತಾಲೂಕಿನ ಸಿದ್ದಾಪುರ ಸಮೀಪದ ಮಾಲ್ದಾರೆ ವ್ಯಾಪ್ತಿಯಲ್ಲಿ ನಡೆದಿದ್ದು ಬಸ್ಸಿನಲ್ಲಿದ್ದ ವಿದ್ಯಾರ್ಥಿಗಳು ಅಪಾಯದಿಂದ ಪಾರಾಗಿದ್ದಾರೆ.

ಮಾಲ್ದಾರೆ ಗ್ರಾಮ ಪಂಚಾಯಿತಿಗೆ ಒಳಪಡುವ ಬಾಡಗ ಬಾಣಂಗಾಲ ಹಾಗೂ ಮಠ ಭಾಗದಲ್ಲಿನ ಬಿಜಿಎಸ್ ವಿದ್ಯಾ ಸಂಸ್ಥೆಯ ವಿದ್ಯಾರ್ಥಿಗಳನ್ನು ಶಾಲಾ ಬಸ್ಸಿನಲ್ಲಿ ಕರೆದುಕೊಂಡು ಹೋಗುತ್ತಿದ್ದ ಸಂದರ್ಭದಲ್ಲಿ ಈ ಘಟನೆ ನಡೆದಿದ್ದು, ಒಂಟಿ ಸಲಗ ಶಾಲಾ ವಾಹನವನ್ನು ಹಿಂಬಾಲಿಸಿ ಅಟ್ಟಿಸಿಕೊಂಡು ಬಂದ ದೃಶ್ಯವನ್ನು ಶಾಲಾ ಬಸ್‌ನಲ್ಲಿದ್ದ ಚಾಲಕ ಸುನಿಲ್ ಅವರ ಪುತ್ರಿ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ.



ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ, ಪರಿಶೀಲಿಸುತ್ತಿರುವುದು.

ಬಾಣಂಗಾಲ ಮಠ ನಡುವೆ ಇರುವ ಕಾಫಿ ತೋಟದಿಂದ ಏಕಾಏಕಿ ರಸ್ತೆಗಿಳಿದ ಕಾಡಾನೆ ಶಾಲಾ ವಾಹನವನ್ನು ಅಟ್ಟಿಸಿಬಂದಿದೆ. ಘಟನೆ ನಡೆದ ಅಲ್ಪ ದೂರದಲ್ಲೇ ಸುಮಾರು 10 ಮಂದಿ ವಿದ್ಯಾರ್ಥಿಗಳು ಶಾಲಾ ವಾಹನಕ್ಕಾಗಿ ಕಾದು ಕುಳಿತ್ತಿದ್ದರು ಎನ್ನಲಾಗಿದ್ದು ಅಪಾಯದಿಂದ ಪಾರಾಗಿದ್ದಾರೆ. ಸಲಗ ಕೆಲದೂರ ಸ್ಕೂಲ್ ಬಸ್ ಬೆನ್ನಟ್ಟಿ ಬಂದು ಶಾಲಾ ಮಕ್ಕಳ ಕೂಗಾಟ, ವಾಹನದ ಹಾರನ್ ಶಬ್ದದಿಂದ ವಾಪಾಸ್ ತೆರಳಿದೆ ಎನ್ನಲಾಗಿದೆ. ಮತ್ತೆ ತೀವ್ರ ಆತಂಕಗೊಂಡಿರುವ ವಿದ್ಯಾರ್ಥಿಗಳ ಪೋಷಕರು ಹಾಗೂ ಸ್ಥಳೀಯ ನಿವಾಸಿಗಳು ಕೂಡಲೇ ಘಟನೆ ಕುರಿತು ಗ್ರಾಮ ಪಂಚಾಯಿತಿ ಸದಸ್ಯ ಮಹಮ್ಮದ್ ಅಲಿ ಅವರಿಗೆ ಮಾಹಿತಿ ನೀಡಿದ್ದಾರೆ. ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ಮಕ್ಕಳ ಪೋಷಕರು ದಾಳಿ ನಡೆಸಲು ಯತ್ನಿಸಿದ ಕಾಡಾನೆಯನ್ನು ಕಾಡಿಗೆ ಅಟ್ಟುವಂತೆ ಆಗ್ರಹಿಸಿದ್ದಾರೆ. ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಮತ್ತು ಪೊಲೀಸ್ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಮಾಘ ಶುದ್ಧ ಹುಣ್ಣಿಮೆ: ಶ್ರೀನಿಮಿಷಾಂಬ ಸನ್ನಿಧಿಯಲ್ಲಿ ಸಕಲ ಸಿದ್ಧತೆ

ದೇವಾಲಯದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಎಸ್.ಎನ್.ದಯಾನಂದ

ಶ್ರೀರಂಗಪಟ್ಟಣ, ಜ.29– ಮಾಘ ಶುದ್ಧ ಹುಣ್ಣಿಮೆ ಪ್ರಯುಕ್ತ ಫೆ.1ರಂದು ಗಂಜಾಂ ಶ್ರೀನಿಮಿಷಾಂಬ ದೇವಾಲಯಕ್ಕೆ ರಾಜ್ಯದ ವಿವಿದೆಡೆಗಳಿಂದ ಲಕ್ಷಾಂತರ ಭಕ್ತರು ಆಗಮಿಸುವ ಹಿನ್ನೆಲೆಯಲ್ಲಿ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ದೇವಾಲಯದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಎಸ್.ಎನ್.ದಯಾನಂದ ತಿಳಿಸಿದರು.



ಮಾಘ ಶುದ್ಧ ಹುಣ್ಣಿಮೆ ಹಿನ್ನೆಲೆಯಲ್ಲಿ ಕೈಗೊಂಡಿರುವ ಪೂರ್ವ ಸಿದ್ಧತೆ.

ದೇವಾಲಯದ ಬಳಿ ಮಾಘ ಶುದ್ಧ ಹುಣ್ಣಿಮೆ ಹಿನ್ನೆಲೆಯಲ್ಲಿ ಕೈಗೊಂಡಿರುವ ಪೂರ್ವ ಸಿದ್ಧತೆ ಕುರಿತು ಮಾತನಾಡಿದ ಅವರು, ಮಾಘ ಶುದ್ಧ ಹುಣ್ಣಿಮೆಯಂದು ಇಲ್ಲಿನ ಕಾವೇರಿ ನದಿಯಲ್ಲಿ ಸ್ನಾನ ಮಾಡಿ ಶ್ರೀನಿಮಿಷಾಂಬ ದೇವಿ ದರ್ಶನ ಪಡೆದರೆ ಇಷ್ಟಾರ್ಥ ಸಿದ್ದಿಸುವ ನಂಬಿಕೆ ಇದೆ. ಹೀಗಾಗಿ ಆಗಮಿಸುವ ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಅಗತ್ಯ ಮೂಲ ಸೌಕರ್ಯ ಕಲ್ಪಿಸಲಾಗುವುದು. ಅಂದು ಮಧ್ಯರಾತ್ರಿ 2 ಗಂಟೆಯಿಂದ ದೇವಿ ದರ್ಶನಕ್ಕೆ ಭಕ್ತರಿಗೆ ಅವಕಾಶ ಮಾಡಿ ಕೊಡಲಾಗುತ್ತಿದ್ದು, ಇದಕ್ಕೂ ಮುನ್ನಾ ವಿಶೇಷ ಪೂಜಾ ಕೈಂಕರ್ಯಗಳು ಜರುಗಲಿವೆ ಎಂದರು.

ಪ್ರತಿ ವರ್ಷದಂತೆ ಈ ವರ್ಷವೂ ಫೆ1ರ ಮುಂಜಾನೆಯಿಂದ ಇಲ್ಲಿನ ಕಾವೇರಿ ನದಿಯಲ್ಲಿ ಭಕ್ತರಿಗೆ ಮಾಘ ಶುದ್ಧ ಸ್ನಾನಕ್ಕೆ ವ್ಯವಸ್ಥೆ ಮಾಡಲಾಗಿದ್ದು, ಫೆ.2ರ ರಾತ್ರಿ 10 ಗಂಟೆವರೆಗೂ ಅವಕಾಶ ಕಲ್ಪಿಸಲಾಗಿದೆ ಎಂದರು.

ಅಗತ್ಯ ಮುನ್ನೆಚ್ಚರಿಕೆ ಕ್ರಮ: ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಕಾವೇರಿ ನದಿಯಲ್ಲಿ ಸ್ನಾನ ಮಾಡಲು ಹಾಗೂ ಬಟ್ಟೆ ಬದಲಿಸಲು ನದಿ ತೀರದಲ್ಲಿ ಬ್ಯಾರಿಕೇಡ್ ನಿರ್ಮಿಸಿ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ನದಿ ಪಾತ್ರದಲ್ಲಿ ಮುಂಜಾಗ್ರತ ಕ್ರಮವಾಗಿ ಅಗ್ನಿಶಾಮಕ ದಳ ನಿಯೋಜಿಸಲಾಗಿದೆ. ವಿದ್ಯುತ್ ದೀಪಗಳ ವ್ಯವಸ್ಥೆ ಹಾಗೂ ವಾಹನಗಳ ನಿಲುಗಡೆಗಾಗಿ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆ, ಕಾನೂನು ಬಾಹಿರ ಚಟುವಟಿಕೆಗೆ ಅವಕಾಶ ನೀಡದಂತೆ ಸೂಕ್ಷ್ಮ ಸ್ಥಳಗಳಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗುತ್ತಿದೆ. ಅನಗತ್ಯ ನೂಕು ನುಗ್ಗಲು ತಡೆಯಲು ಬ್ಯಾರಿಗೇಡ್ ವ್ಯವಸ್ಥೆ, ಸೂಕ್ತ ಸ್ಥಳಗಳಲ್ಲಿ ಆರಕ್ಷಕ ಸಿಬ್ಬಂದಿಗಳನ್ನು ನೇಮಿಸಿ ಬಿಗಿ ಪೊಲೀಸ್ ಬಂದೋಬಸ್ತ್ ಜೊತೆಗೆ ಭಕ್ತರಿಗೆ ಪ್ರಸಾದ, ಕುಡಿಯುವ ನೀರು, ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಭಕ್ತರಿಗೆ ವಿತರಿಸಲು 1 ಲಕ್ಷ ಲಾಡು ತಯಾರಿಸಲಾಗಿದ್ದು, ಅಂದು ಬೆಂಗಳೂರಿನ ದಾನಿಯೊಬ್ಬರು ಬೆಳಗ್ಗೆ ತಿಂಡಿ, ಮಧ್ಯಾಹ್ನದ ಊಟ ಹಾಗೂ ಸಂಜೆ ತಿಂಡಿ ವ್ಯವಸ್ಥೆ ಕೈಗೊಂಡಿದ್ದಾರೆ. ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ದೇವಾಲಯದವರೆಗೆ ಬಸ್ ಸೌಲಭ್ಯ ಕಲ್ಪಸಲಾಗಿದೆ ಎಂದರು.

ಸಾಂಸ್ಕೃತಿಕ ಕಾರ್ಯಕ್ರಮ: ದೇವಾಲಯದ ಮುಂಭಾಗ ಫೆ.1ರ ಸಂಜೆ ಸ್ಥಳೀಯ ಹಾಗೂ ನುರಿತ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಭಕ್ತಿ ಗೀತೆ, ಸುಗಮ ಸಂಗೀತ, ಭಜನೆ, ಹರಿಕಥೆ, ಭರತನಾಟ್ಯ ಸೇರಿದಂತೆ ವಿವಿಧ ಸಂಗೀತ ಕಾರ್ಯಕ್ರಮ ನಡೆಯಲಿದೆ.

ಜಿಲ್ಲಾಡಳಿತ ಹಾಗೂ ಶಾಸಕರ ಸಹಕಾರದೊಂದಿಗೆ ಈಗಾಗಲೇ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ದೇವಿ ಕೃಪೆಗೆ ಪಾತ್ರರಾಗುವಂತೆ ಮನವಿ ಮಾಡಿದರು.

ವಿಶೇಷ ಪೂಜೆ: ಶ್ರೀನಿಮಿಷಾಂಬ ದೇವಾಲಯದ ಕಾರ್ಯ ನಿರ್ವಾಹಕ ಅಧಿಕಾರಿ ಹೆಚ್.ಎಸ್.ಮಹೇಶ್ ಮಾತನಾಡಿ, ರಾತ್ರಿಯಿಂದಲೇ ದೇವಿಗೆ ವಿಶೇಷ ಅಲಂಕಾರದೊಂದಿಗೆ ಕುಂಕುಮಾರ್ಚನೆ, ಪಂಚಾಮೃತ ಅಭಿಷೇಕ, ಮಹಾಭಿಷೇಕ, ಗಣಕ ಹೋಮ, ನಕ್ಷತ್ರ ಹೋಮ, ದುರ್ಗಾ ಹೋಮ, ಸತ್ಯನಾರಾಯಣ ಪೂಜೆ ಸೇರಿದಂತೆ ವಿಶೇಷ ಪೂಜೆಗಳನ್ನು ಲೋಕ ಕಲ್ಯಾಣಾರ್ಥ ನಡೆಯಲಿದೆ. ಪೂಜೆ ಬಳಿಕ ಮಹಾ ಮಂಗಳಾರತಿ ಮಾಡಿ ಭಕ್ತರಿಗೆ ಪ್ರಸಾದ ವಿತರಣೆ ಮಾಡಲಾಗುತ್ತದೆ.

ಅರ್ಜಿ ಆಹ್ವಾನ

ಮಂಡ್ಯ: 2024ರಲ್ಲಿ ಅಂತರ ರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಪ.ಜಾತಿ ಹಾಗೂ ಪ.ಪಂಗಡದ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು : https://sevasindhu.karnataka.gov.in ಮೂಲಕ ಸಲ್ಲಿಸಲು ಸೂಚಿಸಲಾಗಿದೆ. ಅರ್ಜಿ ಸಲ್ಲಿಸಲು ಜನವರಿ 31 ರಂದು ಕಡೆ ದಿನ.

ಅಗ್ರಹಾರಬಾಚಹಳ್ಳಿ ಗ್ರಾಪಂನಲ್ಲಿ ಗಣರಾಜ್ಯೋತ್ಸವ

ಕೆ.ಆರ್.ಪೇಟೆ, ಜ.29– ತಾಲೂಕಿನ ಅಗ್ರಹಾರಬಾಚಹಳ್ಳಿಯಲ್ಲಿ ಗ್ರಾಪಂ ಅಧ್ಯಕ್ಷ ಎ.ಸಿ.ದಿವಿಕುಮಾರ್ ಅಧ್ಯಕ್ಷತೆಯಲ್ಲಿ 77ನೇ ಗಣರಾಜ್ಯೋತ್ಸವ ನಡೆಯಿತು.

ಗ್ರಾಪಂ ಅಧ್ಯಕ್ಷ ಎ.ಸಿ.ದಿವಿಕುಮಾರ್ ಮಾತನಾಡಿ, ದೇಶದ ಏಕತೆ ಹಾಗೂ ಪ್ರತಿಯೊಬ್ಬ ನಾಗರೀಕರ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಕಾಪಾಡಲು ಸಂವಿಧಾನದ ರಕ್ಷಣೆ ಅಗತ್ಯ. ಪ್ರತಿಯೊಬ್ಬರೂ ದೇಶಕ್ಕಾಗಿ ಯಾವುದೇ ತ್ಯಾಗಕ್ಕೂ ಸಿದ್ಧರಾಗಬೇಕು. ಲಕ್ಷಾಂತರ ಮಹನೀಯರ ತ್ಯಾಗ ಬಲಿದಾನ, ನಿಸ್ವಾರ್ಥ ಹೋರಾಟದ ಫಲವಾಗಿ ನಮಗೆ ಸ್ವಾತಂತ್ರ್ಯ ದೊರಕಿದೆ. ಹಾಗಾಗಿ ನಮಗೆ ಸಿಕ್ಕಿರುವ ಸ್ವಾತಂತ್ರ್ಯವನ್ನು ಡಾ.ಬಿ.ಆರ್.ಅಂಬೇಡ್ಕರ್ ಅವರು ಬರೆದಿರುವ ಪವಿತ್ರ ಸಂವಿಧಾನದ ಮೂಲಕ ಉಳಿಸಿ ಸಂರಕ್ಷಣೆ ಮಾಡಿಕೊಂಡು ಹೋಗಬೇಕಾದ ಜವಾಬ್ದಾರಿ ದೇಶದ ಪ್ರತಿಯೊಬ್ಬ ನಾಗರೀಕರ ಮೇಲಿದೆ ಎಂದು ಹೇಳಿದರು.

ನಿವೃತ್ತ ಬಿಇಓ ಎ.ಬಿ.ಪುಟ್ಟಸ್ವಾಮೀಗೌಡ ಮಾತನಾಡಿ, ದೇಶದ ಸಂವಿಧಾನ ರಕ್ಷಣೆಗೆ ವಿದ್ಯಾರ್ಥಿಗಳು ಕಡ್ಡಾಯವಾಗಿ ಶಿಕ್ಷಣ ಪಡೆದುಕೊಳ್ಳಬೇಕು. ಕಠಿಣ ಪರಿಶ್ರಮದಿಂದ ಓದಿ ವಿದ್ಯಾವಂತರಾಗಬೇಕು. ಆ ಮೂಲಕ ಭವ್ಯ ಭಾರತದ ಸತ್ಪ್ರಜೆಗಳಾಗಬೇಕು ಎಂದು ಸಲಹೆ ನೀಡಿದರು.



ಗಣರಾಜ್ಯೋತ್ಸವದಲ್ಲಿ ಗ್ರಾಪಂ ಅಧ್ಯಕ್ಷ ಎ.ಸಿ.ದಿವಿಕುಮಾರ್ ಮಾತನಾಡಿದರು.

ನಿವೃತ್ತ ಉಪಪ್ರಾಂಶುಪಾಲ ಡಿ.ರಾಜೇಗೌಡ, ಪಿಡಿಓ ಶಿಲ್ಪ, ಗ್ರಾಪಂ ಸದಸ್ಯರಾದ ಆರ್.ರಮೇಶ್, ರೇಣುಕಾ ಈಶ್ವರ್, ಆರ್. ಶ್ರೀನಿವಾಸ್, ಮುಖ್ಯ ಶಿಕ್ಷಕ ಎ.ಹೆಚ್.ಯೋಗೇಶ್, ಎಸ್‌ಡಿಎಂಸಿ ಅಧ್ಯಕ್ಷ ಎ.ಸಿ.ಸಂತೋಷ್, ಸರ್ಕಾರಿ ಪ್ರೌಢಶಾಲೆ ಎಸ್‌ಡಿಎಂಸಿ ಅಧ್ಯಕ್ಷ ಎ.ವಿ.ಕೃಷ್ಣ, ನಿವೃತ್ತ ಮುಖ್ಯ ಶಿಕ್ಷಕ ಬಿ.ಹೆಚ್. ಮಂಜೇಗೌಡ, ಗ್ರಾಪಂ ಕಾರ್ಯದರ್ಶಿ ಚಂದ್ರಕುಮಾರ್, ಎಸ್‌ಡಿಸಿ ಗೀತಾ, ಶಿಕ್ಷಕರಾದ ಶಾಂತ ಕುಮಾರಿ, ನಂಜಪ್ಪ ಸೇರಿದಂತೆ ಶಾಲಾ ಮಕ್ಕಳು, ಪೋಷಕರು ಇದ್ದರು. ಇದೇ ವೇಳೆ ವಿಶೇಷ ಗ್ರಾಮ ಸಭೆ ನಡೆಯಿತು.

ಇಂದು ಮದ್ದೂರಲ್ಲಿ ಬೃಹತ್ ಹಿಂದೂ ಸಮಾಜೋತ್ಸವ



ಸಭೆಯಲ್ಲಿ ಮನ್‌ಮುಲ್ ನಿರ್ದೇಶಕ ಎಸ್.ಪಿ.ಸ್ವಾಮಿ ಮಾತನಾಡಿದರು.

ಮದ್ದೂರು, ಜ.29– ರಾಷ್ಟ್ರೀಯ ಸ್ವಯಂ ಸೇವಾ ಸಂಘಕ್ಕೆ 100 ವರ್ಷ ತುಂಬಿದ ಹಿನ್ನೆಲೆಯಲ್ಲಿ ಹಾಗೂ ಹಿಂದೂ ಸಮಾಜದ ಮೇಲೆ ನಡೆಯುತ್ತಿರುವ ದಬ್ಬಾಳಿಕೆ ಖಂಡಿಸಿ ಜ.30 ರಂದು ನಗರದಲ್ಲಿ ಬೃಹತ್ ಹಿಂದೂ ಸಮಾಜೋತ್ಸವ ಮತ್ತು ಶೋಭಾ ಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಮನ್ ಮುಲ್ ನಿರ್ದೇಶಕ ಎಸ್.ಪಿ.ಸ್ವಾಮಿ ತಿಳಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ನಡೆದ ವಿವಿಧ ಹಿಂದೂಪರ ಸಂಘಟನೆ ಮುಖಂಡರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹಿಂದೂ ಸಮಾಜೋತ್ಸವ ಹಾಗೂ ಶೋಭಾಯಾತ್ರೆಯಲ್ಲಿ ಪ್ರತಿ ಕುಟುಂಬ, ಸಂಘ, ಸಂಸ್ಥೆಗಳು ಒಂದೇ ವೇದಿಕೆಯಲ್ಲಿ ಹಿಂದೂ ಸಮಾಜದ ಭವ್ಯರೂಪ ಅಭಿವ್ಯಕ್ತಗೊಳಿಸಲು ಸಮಸ್ತ ಹಿಂದೂ ಜನತೆ ಪಾಲ್ಗೊಳ್ಳಬೇಕೆಂದು ಮನವಿ ಮಾಡಿದರು.

ಹಿಂದೂ ಸಮಾಜೋತ್ಸವ ಮತ್ತು ಶೋಭಾಯಾತ್ರೆ ಯಲ್ಲಿ 5 ಸಾವಿರಕ್ಕೂ ಹೆಚ್ಚು ಜನರು ಸೇರಲಿದ್ದು, ಸಂಜೆ 3.30ಕ್ಕೆ ಪ್ರವಾಸಿ ಮಂದಿರದಿಂದ ಶೋಭಾಯಾತ್ರೆ ಹೊರಟು ನಗರದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಮೂಲಕ ಹಳೆ ಬಸ್ ನಿಲ್ದಾಣಕ್ಕೆ ಬರಲಾಗುವುದು. ಸಂಜೆ 4.30ರ ನಂತರ ಸಭಾ ಕಾರ್ಯಕ್ರಮ ಹಳೇ ಬಸ್ ನಿಲ್ದಾಣದಲ್ಲಿ ನಡೆಯಲಿದೆ ಎಂದರು.

ಹಿಂದೂ ಸಮಾಜೋತ್ಸವ ಮತ್ತು ಶೋಭಾ ಯಾತ್ರೆ ಸಾನಿಧ್ಯವನ್ನು ಎಸ್.ಐ.ಹೊನ್ನಗೆರೆ ಶ್ರೀ ಶಿವಕ್ಷೇತ್ರ ಮಠದ ಶ್ರೀಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದಾರೆ ಹಾಗೂ ಸಾಮಾಜಿಕ ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದರು.

ಸಭೆಯಲ್ಲಿ ವಿವಿಧ ಹಿಂದೂಪರ ಸಂಘಟನೆಗಳ ಮುಖಂಡರಾದ ಗುರುಸ್ವಾಮಿ, ಚಂದ್ರು, ಅವಿನಾಶ್, ಅರವಿಂದ್, ಜಗನ್ನಾಥ್, ಎಂ.ಸಿ. ಸಿದ್ದು, ವೀರಭದ್ರಸ್ವಾಮಿ, ಕೆ.ಜಿ.ಗುರುಮಲ್ಲೇಶ್, ಮಧು, ಸುಧಾಕರ್, ಮನು, ಶಿವು, ಅಭಿ ಇತರರಿದ್ದರು.

ಜಿಲ್ಲೆಯಲ್ಲಿ ಬಿಜೆಪಿ ಗೆಲುವಿಗೆ ಪ್ರಾಮಾಣಿಕವಾಗಿ ಕೆಲಸ ಮಾಡಿ

ಎಸ್‌ಸಿ ಮೋರ್ಚಾ ಕಾರ್ಯಕರ್ತರಿಗೆ ಮಾಜಿ ಸಚಿವ ಎನ್.ಮಹೇಶ್ ಸಲಹೆ

ಚಾಮರಾಜನಗರ, ಜ.29– ಜಿಲ್ಲೆಯಲ್ಲಿ ಬಿಜೆಪಿ ಗೆಲುವಿಗಾಗಿ ಎಸ್‌ಸಿ ಮೋರ್ಚಾ ಕಾರ್ಯಕರ್ತರು ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಎಂದು ಮಾಜಿ ಸಚಿವ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಹೇಳಿದರು.



ವಿಶೇಷ ಸಭೆಯಲ್ಲಿ ಮಾಜಿ ಸಚಿವ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಮಾತನಾಡಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಎಸ್‌ಸಿ ಮೋರ್ಚಾ ನೂತನ ಪದಾಧಿಕಾರಿಗಳ ವಿಶೇಷ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯ 4 ವಿಧಾನಸಭಾ ಕ್ಷೇತ್ರಗಳಲ್ಲೂ ಮೊದಲು ಅಥವಾ 2ನೇ ಸ್ಥಾನದಲ್ಲಿ ಎಸ್‌ಸಿ ಸಮುದಾಯದವರಿದ್ದಾರೆ. ಕೊಳ್ಳೇಗಾಲ ಕ್ಷೇತ್ರದಲ್ಲಿ ಎಸ್‌ಸಿ ಸಮುದಾಯ ನಂಬರ್ ಒನ್ ಸ್ಥಾನದಲ್ಲಿದ್ದು, 60 ಸಾವಿರ ಮತದಾರರು ಇದ್ದಾರೆ. ಗುಂಡ್ಲುಪೇಟೆ ಕ್ಷೇತ್ರದಲ್ಲಿ 45 ರಿಂದ 50 ಸಾವಿರ ಇದ್ದಾರೆ. ಚಾಮರಾಜನಗರ, ಹನೂರು ವಿಧಾನಸಭಾ ಕ್ಷೇತ್ರದಲ್ಲೂ ಅಷ್ಟೆ ಇದ್ದಾರೆ ಎಂದರು.

ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಗಮನಿಸಿದಂತೆ ಜಿಲ್ಲೆಯಲ್ಲಿ ಬಿಜೆಪಿಗೆ ಸೋಲಿಗೆ ಕಾರಣ ಎಸ್‌ಸಿ ಸಮುದಾಯವಾಗಿದೆ. ಹೀಗಾಗಿ ನಾವು ವಾಸ್ತುಸ್ಥಿತಿ ಅರ್ಥ ಮಾಡಿಕೊಳ್ಳಬೇಕು. ಸಮುದಾಯವನ್ನು ಜಾಗೃತಿಗೊಳಿಸಿ ಬಿಜೆಪಿ ಮೇಲಿರುವ ಅನುಮಾನ, ಅಪನಂಬಿಕೆಗಳನ್ನು ಹೋಗಲಾಡಿಸಿದರೆ ಯಾವುದೇ ಕಾರಣಕ್ಕೂ ಜಿಲ್ಲೆಯಲ್ಲಿ ಕಾಂಗ್ರೆಸ್ ಗೆಲ್ಲಲು ಸಾಧ್ಯವಿಲ್ಲ. ನಮ್ಮ ಸಮುದಾಯದ ನಡುವೆ ಕಾಂಗ್ರೆಸ್‌ನವರು ಬಿತ್ತಿರುವ ಅಪನಂಬಿಕೆಯನ್ನು ಜಿಲ್ಲೆಯಲ್ಲಿ ಎಸ್‌ಸಿ ಮೋರ್ಚಾ ಕಾರ್ಯಕರ್ತರು ಪ್ರವಾಸ ಕೈಗೊಂಡು ಹೋಗಲಾಡಿಸುವ ಕೆಲಸ ಮಾಡಬೇಕು. ನಮ್ಮ ಕಾಲೋನಿಯಲ್ಲಿರುವ ಅಪನಂಬಿಕೆಗಳನ್ನು ನಾವೇ ಕುಳಿತು ಸರಿಪಡಿಸುವ ಮೂಲಕ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ 4 ವಿಧಾನಸಭಾ ಕ್ಷೇತ್ರಗಳನ್ನು ಗೆಲ್ಲಿಸುವ ಜವಾಬ್ದಾರಿ ಎಸ್‌ಸಿ ಮೋರ್ಚಾ ಮೇಲಿದೆ ಎಂದರು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ನವೀನ್ ಮೌರ್ಯ, ಎಸ್‌ಸಿ ಮೋರ್ಚಾ ಮೊದಲ ವಿಶೇಷ ಸಭೆ ಯಶಸ್ವಿಯಾಗಿ ನಡೆದಿದೆ. ನನ್ನನ್ನು ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷರನ್ನಾಗಿ ನೇಮಕ ಮಾಡಿದ ಜಿಲ್ಲಾಧ್ಯಕ್ಷ ಸಿ.ಎಸ್. ನಿರಂಜನ್‌ಕುಮಾರ್, ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಹಾಗೂ ಎಲ್ಲಾ ಮುಖಂಡರಿಗೆ ಈ ಅಭಿನಂದನೆ ಸಲ್ಲಿಸುತ್ತೇನೆ. ಪಕ್ಷಕ್ಕೆ ಚ್ಯುತಿಯಾಗದ ರೀತಿ ಎಲ್ಲರ ಸಹಕಾರ, ಮಾರ್ಗದರ್ಶನದಲ್ಲಿ ಪಕ್ಷ ಸಂಘಟನೆ ಮಾಡುತ್ತೇನೆ ಎಂದರು.

ಎಸ್‌ಸಿ ಮೋರ್ಚಾ ಉಸ್ತುವಾರಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್ ಮಾತನಾಡಿ, ಕಾಂಗ್ರೆಸ್ ಹಂತ ಹಂತದಲ್ಲೂ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಅವಮಾನ ಮಾಡಿಕೊಂಡು ಬಂದಿದೆ ಎಂದು ಆರೋಪಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊನ್ನೂರು ಮಹದೇವಸ್ವಾಮಿ, ಎಸ್‌ಸಿ ಮೋರ್ಚಾ ನಿಕಟಪೂರ್ವ ಅಧ್ಯಕ್ಷ ಮೂಡಹಳ್ಳಿಮೂರ್ತಿ, ಮುಖಂಡ ಕೋಡಿಉಗನೆ ಮಂಜು ಮಾತನಾಡಿದರು.

ಸಭೆಯಲ್ಲಿ ಉಪಾಧ್ಯಕ್ಷೆ ಪದ್ಮ, ಪ್ರದಾನ ಕಾರ್ಯದರ್ಶಿ ಶಿವಣ್ಣ, ನಲ್ಲೂರು ಪರಮೇಶ್ವರ್, ನಗರಸಭಾ ಮಾಜಿ ಸದಸ್ಯೆ ಕುಮುದಾ, ಮಹದೇವಯ್ಯ, ಸಿದ್ದರಾಜು, ಭಾನುಪ್ರಕಾಶ್, ರೇವಣ್ಣ, ನಾಗಸ್ವಾಮಿ, ನಾಗೇಂದ್ರ, ರಾಜಶೇಖರ್, ಶ್ರೀನಾಥ್, ಶೇಷಪ್ಪ ಪಾಸ್ವಾನ್, ಶಿವಮ್ಮ, ಹೇಮಂತ್, ರಾಚಪ್ಪ ಇತರರಿದ್ದರು.

> **ಹಳೇ ಮೈಸೂರು ಭಾಗ ಕಷ್ಟ ಇದೆ. ಆ ಭಾಗದಲ್ಲಿ 12 ರಿಂದ 15 ಸೀಟು ಗೆಲ್ಲುವವರೆಗೆ 113 ದಾಟಲ್ಲ ಎಂದು ಕೇಂದ್ರ ಸಚಿವ ಅಮಿತ್ ಶಾ ಅವರು ಬಹಿರಂಗವಾಗಿ ತಿಳಿಸಿದ್ದಾರೆ. ಈ ಭಾಗದಲ್ಲಿ ಕಾಂಗ್ರೆಸ್ ಪ್ರಾಬಲ್ಯವಾಗಿರು ವುದಕ್ಕೆ ಮುಖ್ಯ ಕಾರಣ ದಲಿತರು. ಜಿಲ್ಲೆಯಲ್ಲಿ ಎಸ್‌ಸಿ ಮೋರ್ಚಾ ಸದೃಢವಾಗಬೇಕು. ಜಿಲ್ಲೆಯ 8 ಮಂಡಲಗಳಲ್ಲೂ ಪದಾಧಿಕಾರಿಗಳನ್ನು ನೇಮಕ ಮಾಡಬೇಕು. ಜಿಲ್ಲೆಯಲ್ಲಿ ಸಂಘಟನೆಯ ಜಾಲ ಗಟ್ಟಿಗೊಳ್ಳಬೇಕು. ಆ ನಿಟ್ಟಿನಲ್ಲಿ ಎಸ್‌ಸಿ ಮೋರ್ಚಾ ಬೆಳೆಯಬೇಕು. ಅದಕ್ಕಾಗಿ ಬೇಕಾದ ಎಲ್ಲಾ ಸಹಕಾರ ನೀಡಲು ನಾನು ಬದ್ಧ.**
> – ಎನ್.ಮಹೇಶ್, ಮಾಜಿ ಸಚಿವ.

ಇಂದು ಮತದಾರರ ದಿನಾಚರಣೆ

ಚಾಮರಾಜನಗರ: ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮ ಜ.30ರಂದು ಬೆಳಗ್ಗೆ 11 ಗಂಟೆಗೆ ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಆವರಣದಲ್ಲಿ ನಡೆಯಲಿದೆ.

ಹಿರಿಯ ಸಿವಿಲ್ ನ್ಯಾಯಾಧೀಶ ಈಶ್ವರ್ ಕಾರ್ಯಕ್ರಮ ಉದ್ಘಾಟಿಸುವರು. ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಚಾರ್ಯ ಡಾ.ಬಿ.ಎಸ್. ಮಹದೇವಸ್ವಾಮಿ ಅಧ್ಯಕ್ಷತೆ ವಹಿಸುವರು. ಎಸ್ಪಿ ಎಂ. ಮುತ್ತುರಾಜ್ ಮತದಾರರ ಪ್ರತಿಜ್ಞಾ ವಿಧಿ ಬೋಧಿಸುವರು. ಎಡಿಸಿ ಟಿ.ಜವರೇಗೌಡ ಬಹುಮಾನ ವಿತರಿಸುವರು.

ಅಕ್ರಮ ಖಾಸಗಿ ಶಾಲೆಗಳ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಪ್ರತಿಭಟನೆ

ಚಾಮರಾಜನಗರ, ಜ.29– ಜಿಲ್ಲೆಯಲ್ಲಿ ಅಕ್ರಮವಾಗಿ ನಡೆಯುತ್ತಿರುವ ಖಾಸಗಿ ಶಾಲೆಗಳ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ನಮ್ಮ ಕನ್ನಡಿಗರ ವಿಜಯಸೇನೆ ವತಿಯಿಂದ ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಲಾಯಿತು.



ಅಕ್ರಮ ಖಾಸಗಿ ಶಾಲೆಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನ ಮುಂಭಾಗದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು, ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ ಅಕ್ರಮ ಖಾಸಗಿ ಶಾಲೆಗಳ ಭೂತ, ಬಡವರ ರಕ್ತ ಹೀರುವ ಧೂತ ಎಂದು ಬರೆದಿದ್ದ ಬ್ಯಾನರ್ ಸುಟ್ಟು ಹಾಕಿ ಆಕ್ರೋಶ ವ್ಯಕ್ತ ಪಡಿಸಿದರು. ಬಳಿಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇ ಗೌಡರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಸೇನೆ ಜಿಲ್ಲಾಧ್ಯಕ್ಷ ಮಂಜು ಎಂ. ನಾಯಕ ಮಾತನಾಡಿ, ಖಾಸಗಿ ಶಾಲೆಗಳನ್ನು ನಡೆಸಲು ಸಂಬಂಧಪಟ್ಟ ಇಲಾಖೆಗಳಿಂದ ಅನ್ಯಕ್ರಾಂತ, ಭೂ ಪರಿವರ್ತನೆ ಹಾಗೂ ಅಗ್ನಿಶಾಮಕ ದಳದಿಂದ ಯಾವುದೇ ಅನುಮತಿ ಪಡೆಯದೇ ಕಾನೂನು ಬಾಹಿರವಾಗಿ ಶಾಲೆಗಳನ್ನು ನಡೆಸುತ್ತಿರುವವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಈ ಅಕ್ರಮ ಶಾಲೆಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಮನವಿ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದಿಂದ ಪ್ರತಿಭಟನೆ ನಡೆಸಿದ್ದರು. ಅಲ್ಲದೇ ಜಿಲ್ಲೆಯಲ್ಲಿ ಶೇ.70ರಷ್ಟು ಖಾಸಗಿ ಶಾಲೆಗಳು ಅಕ್ರಮವಾಗಿ ನಡೆಯುತ್ತಿದ್ದು, ಇವುಗಳಿಗೆ ಅನುಮತಿ ನೀಡಿದ ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ವಿಧಾನ ಸೌಧ ಮುಂಭಾಗ ನಮ್ಮ ಸಂಘಟನೆ ಉಗ್ರ ಹೋರಾಟ ಮಾಡಲಿದೆ ಎಂದು ಎಚ್ಚರಿಸಿದರು.

ಇದೇ ವೇಳೆ ನಮ್ಮ ಕನ್ನಡಿಗರ ವಿಜಯಸೇನೆ ಸಂಸ್ಥಾಪಕ ರಾಜ್ಯಾಧ್ಯಕ್ಷ ವಿಜಯಕುಮಾರ್ ಮಾತನಾಡಿದರು. ಪ್ರತಿಭಟನೆಯಲ್ಲಿ ಸೇನೆಯ ಜಿಲ್ಲಾ ಸಂಘಟನಾ ಕಾರ್ಯದರ್ಶಿ ನವೀನ್ ಕುಮಾರ್, ಕಾರ್ಯದರ್ಶಿ ಶಿವು ಕೆಲ್ಲಂಬಳ್ಳಿ, ರಾಜ್ಯ ಪ್ರಧಾನ ಕಾರ್ಯದರ್ಶಿ ವಿನೋದ್ ಕುಮಾರ್, ರಾಜ್ಯ ಸಂಘಟನಾ ಕಾರ್ಯದರ್ಶಿ ರಾಜಶೇಖರ, ನಗರಸಭಾ ಮಾಜಿ ಸದಸ್ಯ ಶಿವರಾಜ್, ಗಿರೀಶ್, ರಂಗಸ್ವಾಮಿ, ಎಸ್.ಪಿ.ಮಹೇಶ್, ವಾಸು ಇತರರಿದ್ದರು.

ಆರತಕ್ಷತೆಗೆ ತೆರಳುತ್ತಿದ್ದ ವರನಿಗೆ ಚಾಕುವಿನಿಂದ ಇರಿತ: ಆಸ್ಪತ್ರೆಗೆ ದಾಖಲು



ಎಲ್.ರವೀಶ್

ಕೊಳ್ಳೇಗಾಲ, ಜ.29– ಮದುವೆಯ ಆರತಕ್ಷತೆಗೆ ತೆರಳುತ್ತಿದ್ದ ವರ ಚಾಕುವಿನಿಂದ ಇರಿತಕ್ಕೊಳಗಾಗಿ ಆಸ್ಪತ್ರೆಗೆ ದಾಖಲಾಗಿರುವ ಘಟನೆ ಪಟ್ಟಣದಲ್ಲಿ ಗುರುವಾರ ರಾತ್ರಿ ನಡೆದಿದೆ.

ತಾಲೂಕಿನ ಕುಣಗಳ್ಳಿ ಗ್ರಾಮದ ನಿವಾಸಿ ಎಲ್.ರವೀಶ್ (34) ಚಾಕುವಿನಿಂದ ಇರಿತಕ್ಕೊಳಗಾದವರು.

ವಿವರ: ಎಲ್.ರವೀಶ್‌ಗೆ ಕೊಳ್ಳೇಗಾಲ ತಾಲೂಕಿನ ಹೊಸ ಅಣಗಳ್ಳಿ ಗ್ರಾಮದ ಯುವತಿಯೊಂದಿಗೆ ವಿವಾಹ ನಿಶ್ಚಯವಾಗಿ, ಪಟ್ಟಣದ ವೆಂಕಟೇಶ್ವರ ಮಹಲ್‌ನಲ್ಲಿ ಆರತಕ್ಷತೆ ಏರ್ಪಡಿಸಲಾಗಿತ್ತು. ಆರತಕ್ಷತೆಗೆ ಸ್ವಗ್ರಾಮದಿಂದ ಕಾರಿನಲ್ಲಿ ಕುಟುಂಬ ಸದಸ್ಯರೊಂದಿಗೆ ತೆರಳುವಾಗ ಕೊಳ್ಳೇಗಾಲದ ಎಂಜಿಎಸ್‌ವಿ ಕಾಲೇಜು ರಸ್ತೆಯ ಬಳಿ ವರ ತೆರಳುತ್ತಿದ್ದ ಕಾರನ್ನು ಹಿಂಬಾಲಿಸಿಕೊಂಡು ಬಂದ ದುಷ್ಕರ್ಮಿಗಳು ಕಾರನ್ನು ಅಡ್ಡಗಟ್ಟಿ ನೀನು ಮದ್ವೆ ಮನೆಗಲ್ಲ ಸ್ಮಶಾನಕ್ಕೆ ತೆರಳಬೇಕೆಂದು ಏಕಾಏಕಿ ಎಲ್.ರವೀಶ್ ಮೇಲೆ ಚಾಕುವಿನಿಂದ ಇರಿದು ಪರಾರಿಯಾಗಿದ್ದಾರೆ. ಈ ವೇಳೆ ರವೀಶ್‌ನ ಎಡಗೈ ತೋಳಿಗೆ ಗಂಭೀರ ಗಾಯವಾಗಿ ರಕ್ತ ಸ್ರಾವವಾಗಿದೆ.

ಸದ್ಯ ರವೀಶ್ ಕೊಳ್ಳೇಗಾಲ ಸರ್ಕಾರಿ ಆಸ್ಪತ್ರೆಯಲ್ಲಿ ಪಡೆಯುತ್ತಿದ್ದು, ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಇನ್ನು ವಧುವಿನ ಮಾಜಿ ಬಾಯ್ ಫ್ರೆಂಡ್ ಈ ಕೃತ್ಯ ಎಸಗಿರಬಹುದು ಎಂದು ಶಂಕಿಸಲಾಗಿದ್ದು, ಕೊಳ್ಳೇಗಾಲ ಪಟ್ಟಣ ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡು ದುಷ್ಕರ್ಮಿಗಳ ಬಂಧನಕ್ಕೆ ಶೋಧ ಕೈಗೊಂಡಿದ್ದಾರೆ.

ಈ ಬಗ್ಗೆ ರವೀಶ್ ಸುದ್ದಿಗಾರರೊಂದಿಗೆ ಮಾತನಾಡಿ, 6 ತಿಂಗಳ ಹಿಂದೆ ನನಗೆ ಹೊಸ ಅಣಗಳ್ಳಿ ಗ್ರಾಮದ ಯುವತಿಯೊಂದಿಗೆ ಎಂಗೇಜ್ಮೆಂಟ್ ಆಗಿತ್ತು. ಜ.30 ರಂದು ಮದುವೆ ನಿಶ್ಚಯವಾಗಿದ್ದರಿಂದ ಕಾರಿನಲ್ಲಿ ಕಲ್ಯಾಣ ಮಂಟಪಕ್ಕೆ ತೆರಳುವಾಗ ಹಿಂಬದಿಯಿಂದ ಮತ್ತೊಂದು ಕಾರಿನಲ್ಲಿ ಬಂದವರು ನನಗೆ ಏಕಾಏಕಿ ಚಾಕುವಿನಿಂದ ಹಲ್ಲೆ ಮಾಡಿದ್ದಾರೆ. ಹಲ್ಲೆ ನಡೆಸಿದವರು ಯಾರು ಎನ್ನುವುದು ಗೊತ್ತಿಲ್ಲ ಎಂದು ತಿಳಿಸಿದರು.

ಕೊಳ್ಳೇಗಾಲ ಪಟ್ಟಣ ಠಾಣೆ ಪೊಲೀಸರು ರವೀಶ್ ಬಳಿ ಘಟನೆ ವಿವರ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

■ ಸತ್ಯಮೂರ್ತಿ ತೋಳಹುಣಸೆ

ಹಾರರ್, ಕಾಮಿಡಿ 'ಕಟ್ಲೆ' ಟ್ರೈಲರ್ ಬಿಡುಗಡೆ




ಹಾಸ್ಯ ನಟನಾಗಿ ಚಿತ್ರರಂಗದಲ್ಲಿ ತನ್ನದೇ ಛಾಪು ಮೂಡಿಸಿರುವ ನಟ ಕೆಂಪೇಗೌಡ ನಾಯಕನಾಗಿ ನಟಿಸಿರುವ ಚಿತ್ರ ಕಟ್ಲೆ. ಭರತ್‌ಗೌಡ ಅವರ ನಿರ್ಮಾಣದ ಈ ಚಿತ್ರಕ್ಕೆ ಶ್ರೀವಿಧಾ ಅಭಿನಂದನ್ ಆಕ್ಷನ್ ಕಟ್ ಹೇಳಿದ್ದಾರೆ. ಶ್ರೀಧರ್ ವಿ. ಸಂಭ್ರಮ್ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ. ಇತ್ತೀಚೆಗೆ ಈ ಚಿತ್ರದ ಟ್ರೈಲರ್ ಅನ್ನು ಮಾಜಿ ಉಪ ಮುಖ್ಯಮಂತ್ರಿ ಹಾಗೂ ಶಾಸಕ ಡಾ.ಸಿ.ಎನ್.ಅಶ್ವಥ್‌ನಾರಾಯಣ ಬಿಡುಗಡೆ ಮಾಡಿದರು. ಮಂಡ್ಯ ಶಾಸಕ ರವಿಕುಮಾರ್‌ಗೌಡ(ಗಾಣಿಗ), ಬಿಗ್ಬಾಸ್ ಪ್ರಥಮ್, ಕಾಕ್ರೋಚ್ ಸುಧಿ ಅತಿಥಿಗಳಾಗಿ ಭಾಗವಹಿಸಿದ್ದರು.

ನಿರ್ದೇಶಕ ಶ್ರೀವಿಧಾ ಮಾತನಾಡಿ 'ಕಟ್ಲೆ' ಪದಕ್ಕೆ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಅದರದೇ ಆದ ಅರ್ಥಗಳಿವೆ. ಈ ಚಿತ್ರದಲ್ಲಿ ಅವಧಿ ಎಂದು ತೋರಿಸಿದ್ದೇವೆ. ಪ್ರತಿ ಜೀವರಾಶಿಗೂ ಕಾಲ ಅನ್ನೋದು ಇರುತ್ತೆ. ನಮ್ಮ ಜೀವನದಲ್ಲಿ ಕಾಲದ ಪ್ರಾಮುಖ್ಯತೆ ಏನು, ಅದರ ಬೆಲೆ ಏನೆಂದು ಚಿತ್ರದಲ್ಲಿ ತೋರಿಸಿದ್ದೇವೆ. ಕಟ್ಲೆ ಅಳಿಸುತ್ತೆ ನಗಿಸುತ್ತೆ, ಕಾಡುತ್ತೆ ಕಾಡಿಸುತ್ತೆ ಕ್ಲೈಮಾಕ್ಸ್‌ನಲ್ಲಿ ಉತ್ತಮ ಸಂದೇಶದೊಂದಿಗೆ ಚಿತ್ರ ಕೊನೆಗೊಳ್ಳುತ್ತದೆ ಎಂದು ಹೇಳಿದರು.

ನಾಯಕ ಕೆಂಪೇಗೌಡ ಮಾತನಾಡಿ, ನನ್ನ 18 ವರ್ಷಗಳ ಸಿನಿಪಯಣದಲ್ಲಿ 75ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದು, ಮೊದಲ ಬಾರಿಗೆ ನಾಯಕನಾಗಿದ್ದೇನೆ. ನಿರ್ಮಾಪಕರು ಹಾಸ್ಯಕಲಾವಿದನಿಗೆ ಹೀರೋ ಮಾಡಿ ದೊಡ್ಡ ಸಿನಿಮಾ ಮಾಡಿದ್ದಾರೆ. ಹಾರರ್, ಸೈಕಲಾಜಿಕಲ್ ಥ್ರಿಲ್ಲರ್‌ನಂಥ ಎಲ್ಲ ಅಂಶಗಳು ಚಿತ್ರದಲ್ಲಿದ್ದರೂ ಚಿತ್ರ ಅದಾಗಿರುವುದಿಲ್ಲ. ತೆರೆಮೇಲೆ ಬೇರೆಯದೇ ಕಾಣಿಸುತ್ತದೆ. ನಾನೊಬ್ಬ ಇಂಜಿನಿಯರ್ ಪಾತ್ರ ಮಾಡಿದ್ದೇನೆ. ಕೊನೆಯ ದೃಶ್ಯಗಳು ನೋಡುಗರ ಕಣ್ಣನ್ನು ಒದ್ದೆ ಮಾಡುತ್ತದೆ ಸಾಹಿತ್ಯ, ಸಂಗೀತ ತುಂಬಾ ಚೆನ್ನಾಗಿ ಮೂಡಿಬಂದಿದೆ ಎಂದರು.

ಸನ್ಮಿತ ಮತ್ತು ಅಮೃತ ಚಿತ್ರದ ನಾಯಕಿಯರಾಗಿದ್ದು, ಹರ್ಷಿಕಾ ಪೂಣಚ್ಚ ಅತಿಥಿ ಪಾತ್ರ ನಿರ್ವಹಿಸಿದ್ದಾರೆ. ಟೆನ್ನಿಸ್ ಕೃಷ್ಣ, ತಬಲ ನಾಣಿ, ಹರೀಶ್‌ರಾಜ್, ಗಣೇಶರಾವ್ ಕೇಸರ್‌ಕರ್, ಪವನಕುಮಾರ್, ವೈಜನಾಥ ಬಿರಾದಾರ್, ಡಿ.ಎಂ.ಎಸ್. ಉಮೇಶ್, ಯತಿರಾಜ್, ಕುಸುಬ್ಬು ಉಳಿದ ಪಾತ್ರಗಳಲ್ಲಿದ್ದಾರೆ. ಬೆಂಗಳೂರು, ಸಿರ್ಸಿ, ಮಲೆನಾಡು ಸುತ್ತಮುತ್ತ 'ಕಟ್ಲೆ' ಚಿತ್ರವನ್ನು ಚಿತ್ರೀಕರಿಸಲಾಗಿದೆ. ಸಚಿತ್ ಫಿಲಂಸ್‌ನ ವೆಂಕಟ್‌ಗೌಡ ಅವರು 75ಕ್ಕೂ ಹೆಚ್ಚು ಥಿಯೇಟರ್‌ಗಳಲ್ಲಿ ರಿಲೀಸ್ ಮಾಡುತ್ತಿದ್ದಾರೆ.





ಈ ವಾರ

'ಸೀಟ್ ಎಡ್ಜ್'ನಲ್ಲಿ ಸಸ್ಪೆನ್ಸ್–ಥ್ರಿಲ್ಲರ್!

ಲವ್ ಯು ಮುದ್ದು' ಖ್ಯಾತಿಯ ಸಿದ್ದು ಮೂಲಿಮನಿ, ರವೀಕ್ಷಾ ಶೆಟ್ಟಿ ನಟಿಸಿರುವ, ಡಾರ್ಕ್ ಕಾಮಿಡಿ ಜೊತೆಗೆ ಹಾರರ್–ಥ್ರಿಲ್ಲರ್ ಕಥಾಹಂದರ ಒಳಗೊಂಡ ಚಿತ್ರ ಸೀಟ್ ಎಡ್ಜ್. ಚೇತನ್ ಶೆಟ್ಟಿ ಅವರ ನಿರ್ದೇಶನವಿರುವ ಈ ಚಿತ್ರ ಇಂದಿನಿಂದ ರಾಜ್ಯಾದ್ಯಂತ ತೆರೆಕಾಣುತ್ತಿದೆ ಗಿರಿಧರ ಟಿ.ವಸಂತಪುರ ಈ ಚಿತ್ರವನ್ನು ನಿರ್ಮಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಯು–ಟ್ಯೂಬ್ ಮತ್ತು ಸೋಶಿಯಲ್ ಮೀಡಿಯಾಗಳಲ್ಲಿ ಅತಿಹೆಚ್ಚು ವೀವ್ಸ್ ಪಡೆದು ಜನಪ್ರಿಯರಾಗಲು ಯು–ಟ್ಯೂಬರ್ಸ್ ಮತ್ತು ವ್ಲಾಗರ್ಸ್ ಏನೇನು ಸಾಹಸಗಳನ್ನು ಮಾಡುತ್ತಾರೆ ಎಂಬುದನ್ನು ಈ ಚಿತ್ರದಲ್ಲಿ ಹೇಳಲಾಗಿದೆ. ನಮಗೆ ಗೊತ್ತಿಲ್ಲದ ವಿಷಯದಲ್ಲಿ ದುಸ್ಸಾಹಸಕ್ಕೆ ಕೈಹಾಕಿದರೆ, ಏನೇನು ಆಗಬಹುದು ಎಂಬುದನ್ನು ಈ ಚಿತ್ರ ಹೇಳುತ್ತದೆ.

ಸಿದ್ಧು ಮೂಲಿಮನಿ ಮಾತನಾಡಿ ಇದೇ ಮೊದಲಬಾರಿಗೆ ನಾನೊಬ್ಬ ಯುಟ್ಯೂಬ್ ವ್ಲಾಗರ್ ಆಗಿ ನಟಿಸಿದ್ದೇನೆ. ಯಾರೂ ಹೋಗದಂಥ ಭಯಾನಕ ಜಾಗವನ್ನು ಪ್ರೇಕ್ಷಕರಿಗೆ ಪರಿಚಯಿಸಬೇಕೆಂದು ಘೋಸ್ಟ್ ಟೌನ್‌ಗೆ ಹೋಗಿ ಘೋಸ್ಟ್ ಹಂಟಿಂಗ್ ವೀಡಿಯೊ ಮಾಡಲು ಮುಂದಾಗುತ್ತೇನೆ. ಕೊನೆಗೆ ನಾನು ಅಂದುಕೊಂಡಂತೆ ಆ ವೀಡಿಯೊ ಮಾಡಿ ಪ್ರೇಕ್ಷಕರಿಗೆ ತೋರಿಸುತ್ತೇನಾ.. ಇಲ್ಲವಾ.. ಈ ಘೋಸ್ಟ್ ಹಂಟಿಂಗ್ ಹೇಗಿರುತ್ತದೆ ಎಂಬುದನ್ನು ನನ್ನ ಪಾತ್ರದಲ್ಲಿ ನೋಡಬಹುದು ಎಂದರು.

ನಾಯಕಿ ರವೀಕ್ಷಾ ಶೆಟ್ಟಿ ಮಧ್ಯಮವರ್ಗದ ಕಾಲೇಜ್ ಹುಡುಗಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಘೋಸ್ಟ್ ಹಂಟಿಂಗ್‌ಗೆ ಹೋಗುವ ಯು–ಟ್ಯೂಬರ್ ಜೊತೆಗೆ ನಾನು ಕೂಡ ತೊಂದರೆಗೆ ಸಿಲುಕಿಕೊಳ್ಳುತ್ತೇನೆ. ಎರಡು ಶೇಡ್‌ಗಳಿರುವ ಪಾತ್ರ ನನ್ನದು ಎಂದು ತಮ್ಮನ್ನು ಪರಿಚಯಿಸಿಕೊಂಡರು.

ನಿರ್ಮಾಪಕ ಗಿರಿಧರ ಟಿ. ವಸಂತಪುರ ಮಾತನಾಡಿ, ಎಲ್ಲಾ ಕಲಾವಿದರು ಮತ್ತು ತಂತ್ರಜ್ಞರ ಸಹಕಾರದಿಂದ, ನಾವು ಅಂದುಕೊಂಡ ಹಾಗೇ 'ಸೀಟ್ ಎಡ್ಜ್' ಚಿತ್ರ ಮೂಡಿಬಂದಿದೆ. ಚಿತ್ರದಲ್ಲಿ ಪ್ರೇಕ್ಷಕರಿಗೆ ಉತ್ತಮ ಮನರಂಜನೆ ದೊರಕಲಿದೆ ಎಂದರು.



ಅಜಯ್ ಮೂವೀಸ್ ಚಿತ್ರಕ್ಕೆ ಅಶ್ವಿನಿ ಪುನೀತ್‌ರಾಜಕುಮಾರ್ ಶುಭಕೋರಿಕೆ



ಹೊಸ ಪ್ರತಿಭೆಗಳಿಗೆ ಡಾ||ರಾಜ್ ಕುಟುಂಬ ಪ್ರೋತ್ಸಾಹ ನೀಡುತ್ತಲೇ ಬಂದಿದೆ. ಈಗ ಅಶ್ವಿನಿ ಪುನೀತ್‌ರಾಜಕುಮಾರ್ ಕೂಡ ಅದನ್ನೇ ಮುಂದುವರೆಸಿದ್ದಾರೆ. ಮಮತ ಅಮಿನ್ ಅವರ ಅಜಯ್ ಮೂವೀಸ್ ನಿರ್ಮಾಣ ಸಂಸ್ಥೆಯ ಪ್ರಥಮ ಚಿತ್ರಕ್ಕೆ ಚಾಲನೆ ನೀಡಿದ್ದಾರೆ. ಅಜಯ್ ಸಾಗರ್ ನಿರ್ದೇಶನದಲ್ಲಿ ಪ್ರೊಡಕ್ಷನ್ ನಂ.1 ಚಿತ್ರ ಮೂಡಿಬರುತ್ತಿದೆ

ಇತ್ತೀಚೆಗೆ ನಿರ್ಮಾಪಕಿ ಮಮತಾ ಅಮಿನ್ ಅವರು ಅಶ್ವಿನಿ ಪುನೀತ್ ರಾಜಕುಮಾರ್ ಅವರನ್ನು ಭೇಟಿ ಮಾಡಿ, ಅವರ ಅಮೃತ ಹಸ್ತದಲ್ಲಿ ತಮ್ಮ ಸಂಸ್ಥೆಯ ಲೋಗೋವನ್ನು ಬಿಡುಗಡೆ ಮಾಡಿಸಿದ್ದರು. ನಿರ್ದೇಶಕ ಅಜಯ್ ಸಾಗರ್, ಛಾಯಾಗ್ರಾಹಕ ಮನೀಶ್ ಬಂಗೇರ, ನವಯುಗ ಹೋಟೆಲ್‌ನ ಮಾರುತಿ ಸಾಲಿಗ್ರಾಮ, ಕಾರ್ಯಕಾರಿ ನಿರ್ಮಾಪಕ ಪ್ರತಾಪ್ ಸಾಲಿಗ್ರಾಮ ಹಾಗೂ ಪಿ.ಆರ್.ಕೆ ಸಂಸ್ಥೆಯ ಸತೀಶ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ನಮ್ಮ ಅಜಯ್ ಮೂವೀಸ್ ಸಂಸ್ಥೆಗೆ ಅಶ್ವಿನಿ ಪುನೀತ್ ರಾಜಕುಮಾರ್ ಅವರು ಶುಭ ಹಾರೈಸಿದ್ದು ಬಹಳ ಸಂತೋಷ ತಂದಿದೆ. ನಮಗೆ ಡಾ|ರಾಜಕುಮಾರ್, ಪಾರ್ವತಮ್ಮ ರಾಜಕುಮಾರ್ ಹಾಗೂ ಪುನೀತ್ ರಾಜಕುಮಾರ್ ಅವರ ಆಶೀರ್ವಾದ ಸಿಕ್ಕಷ್ಟೇ ಖುಷಿಯಾಗಿದೆ ಎಂದು ನಿರ್ಮಾಪಕಿ ಮಮತಾ ಅಮಿನ್ ಹಾಗೂ ನಿರ್ದೇಶಕ ಅಜಯ್ ಸಾಗರ್ ಸಂತಸ ವ್ಯಕ್ತಪಡಿಸಿದ್ದಾರೆ.

ಮಹಿಳಾ ಪ್ರಧಾನ ಚಿತ್ರ 'ಇಂದಿರಾ'



ಮಹಿಳಾ ಪ್ರಧಾನ ಸಸ್ಪೆನ್ಸ್, ಥ್ರಿಲ್ಲರ್ ಕಥಾನಕ ಒಳಗೊಂಡ ಚಿತ್ರ 'ಇಂದಿರಾ'. ಇತ್ತೀಚೆಗೆ ಈ ಚಿತ್ರದ ಟೈಟಲ್ ಬಿಡುಗಡೆ ಸಮಾರಂಭ ನಡೆಯಿತು. ಈ ಹಿಂದೆ ರಾವೆನ್ ಚಿತ್ರ ನಿರ್ದೇಶಿಸಿದ್ದ ವೇದ್, ಈ ಚಿತ್ರಕ್ಕೆ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಕಿರಣ್ ಫಿಲಂಸ್ ಬ್ಯಾನರ್ ಅಡಿ ಕಿರಣ್‌ಕುಮಾರ್ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.


ವೇದಿಕೆಯಲ್ಲಿ ಮಾತನಾಡಿದ ವೇದ್, ಇಂದಿನ ತಲೆಮಾರಿನ ಜನತೆಗೆ ಕನೆಕ್ಟ್ ಆಗುವಂಥ ಸಬ್ಜೆಕ್ಟ್ ಇದು, ಜಗತ್ತಿನ ಅನೇಕ ದೇಶಗಳಲ್ಲಿ ಜೆನ್‌ಜ್ಹೀಯಿಂದ ಏನೇನೆಲ್ಲಾ ಆಗುತ್ತಿದೆ. ಇಂದಿನ ಜೆನ್ ಜ್ಹೀ ತಲೆಮಾರು ಹೇಗೆಲ್ಲ ಯೋಚಿಸುತ್ತದೆ. ಅವರಿಂದ ಏನೆಲ್ಲ ಆಗಬಹುದು, ಮನಸ್ಸು ಮಾಡಿದರೆ, ಏನೆಲ್ಲ ಮಾಡಲು ಸಾಧ್ಯ ಎಂದು ಚಿತ್ರದಲ್ಲಿ ಹೇಳುತ್ತಿದ್ದೇವೆ ಎಂದರು.

ನಿರ್ಮಾಪಕ ಕಿರಣ್‌ಕುಮಾರ್ ಮಾತನಾಡುತ್ತ, ಈಗಾಗಲೇ ಪ್ರೀ–ಪ್ರೊಡಕ್ಷನ್ ಕೆಲಸ ಪೂರ್ಣಗೊಂಡಿದ್ದು, ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಚಿತ್ರವನ್ನು ನಿರ್ಮಿಸುತ್ತಿದ್ದೇವೆ. ಅಲ್ಲದೆ ಬೆಂಗಳೂರು, ಮೈಸೂರು, ಮಂಗಳೂರು ಸುತ್ತಮುತ್ತ ಅಲ್ಲದೆ ಹೊರರಾಜ್ಯಗಳಲ್ಲೂ ಚಿತ್ರೀಕರಣ ನಡೆಸುವ ಯೋಜನೆಯಿದೆ. ಈ ಪ್ರಮುಖ ಪಾತ್ರಕ್ಕೆ ಕನ್ನಡದ ಜನಪ್ರಿಯ ನಟಿಯೊಬ್ಬರನ್ನು ಕರೆತರುವ ಯೋಜನೆಯಿದೆ ಎಂದರು.

ಸಿನಿಪದಬಂಧ–612



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1.	ವಿಷ್ಣುವರ್ಧನ್–ಖುಷ್ಬೂ ಹರಿಸಿದ ಕನ್ನಡ ನಾಡಿನ ಕಾವೇರಿ !	4
4.	ದೇವರಾಜ್ – ಸಿತಾರ ನಿರ್ಮಿಸಿದ ಚಿನ್ನದ ಗೃಹ	6
8.	ಶ್ರೀನಿವಾಸಮೂರ್ತಿ – ಶ್ರೀಲಲಿತ ಅಭಿನಯಕ್ಕೆ ಗೀತಪ್ರಿಯ ನಿರ್ದೇಶಕ	4
9.	ಜೈಜಗದೀಶ್ – ಲಕ್ಷ್ಮೀ ಗುಲ್ಲೆಬ್ಬಿಸಿದ ಚಿತ್ರವಿದು	4
11.	ಅಮರ ಪ್ರೇಮ ಚಿತ್ರದ ನಾಯಕಿ	5
14.	ಡಿ. ಕೆಂಪರಾಜ ಅರಸ್ ಅವರ ನೀರಿನ ಕೋಟೆ	4
15.	ಪ್ರಭಾಕರ್ ತ್ರಿಪಾತ್ರದಲ್ಲಿ ಹೆತ್ತವಳ ಪ್ರೀತಿಯಿದೆ	5
16.	'ನನ್ನ ಮುದ್ದು _ _ ನಗುತಲಿ ಬಾರೇ....',	2
17.	ಕನ್ನಡದ ಸಿಂಗರ್ಸ್	5
18.	ಬಂಗಾರಮ್ಮ ನಡೆಸಿದ ಲೇವಾದೇವಿ	2

ಮೇಲಿನಿಂದ ಕೆಳಕ್ಕೆ

1.	ಗಂಗಾಧರ್ – ಭಾರತಿ ಅಭಿನಯದ ಬಾಳ ಉಯ್ಯಾಲೆ	6
2.	ಹೃದಯವಂತ ಚಿತ್ರದ ನಾಯಕಿ	2
3.	ಪ್ರಜ್ವಲ್ ದೇವರಾಜ್ – ಪ್ರಣಿತ ಅಭಿನಯದ 'ಮಂಗಳ ಗ್ರಹ'	4
5.	ಅನಂತ್, ಶಂಕರ್, ಲಕ್ಷ್ಮಿ, ಗಾಯತ್ರಿ ಅಭಿನಯಕ್ಕೆ ಟಿ. ಎಸ್. ನಾಗಾಭರಣ ನಿರ್ದೇಶಕ	10
6.	ಕಾಶೀನಾಥ್ ಹೆಂಡತಿಯ ಅಪ್ಪನನ್ನು ವಿವಾಹಕ್ಕಾಗಿ ಕಾಡಿ–ಬೇಡಿದ್ದಾನೆ	9
7.	ಅಮೃತವರ್ಷಿಣಿ ಚಿತ್ರದ ಹಾಡಿನಲ್ಲಿ ಬಿದ್ದ ಹನಿ ನೀರು	3
10.	ಕನ್ನಡದ ಫಿಲ್ಮ್ ಸ್ಟಾರ್	7
12.	ಶಂಕರ್‌ನಾಗ್ – ಭವ್ಯ ಅಭಿನಯದ 'ಕೇಸರಿ'	4
13.	ಮಿಥಿಲೆಯಲ್ಲಿ ಕಾಣಿಸಿಕೊಂಡವರು	4

ಸಿನಿ ಪದಬಂಧ 611ರ ಉತ್ತರ

ಉ	ಪಾ	ಸ	ನೆ		ಕ					
ತ್ತ		ಖಿ		ಸ	ರಿ	ಗ	ಮ	ವಿ	ಜಿ	
ರ			ಲ		ನಾ			ರ		ಶಂ
ದ	ತ್ತಾ	ತ್ರೆ	ಯ		ಗ		ಸ್ನೇ	ಹ	ಲೋ	ಕ
ಕ್ಷಿ			ನ್			ಮ		ನೂ		ರಿ
ಣ		ರಾ	ಜ	ಕು	ಮಾ	ರಿ		ರು		
	ಓ		ಗ			ಯ		ನೂ		ಗು
	ಪ್ರೇ	ಮ	ಪ	ರ್ವ		ಮೈ	ಸೂ	ರು	ಜಾ	ಣ
	ಮ		ತಿ		ನ್	ಡಾ		ತ		ವಂ
	ವೇ		ರಾ			ರ್ಲಿಂ		ರ		ತ
		ಲ	ವ್	ಟ್ರೈ	ನಿಂ	ಗ್		ಹ	ಲಂ	

ವಿಜೇತರು: ಹೆಚ್.ಪಿ. ಗಾಯತ್ರಿ, ನಂ.208, ದಿವಾನ್ಸ್ ರಸ್ತೆ, ಚಾಮರಾಜಮೊಹಲ್ಲಾ, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

ರಾಘವೇಂದ್ರ ಚಿತ್ರವಾಣಿಗೆ ಸುವರ್ಣ ಸಂಭ್ರಮ



ಕನ್ನಡದ ಮೊದಲ ಪ್ರಚಾರ ಸಂಸ್ಥೆ ರಾಘವೇಂದ್ರ ಚಿತ್ರವಾಣಿಗೆ ಈಗ 50ರ ಸಡಗರ. 1976ರಲ್ಲಿ ಡಿ.ಡಿ.ವಿ. ಸುಧೀಂದ್ರ ಪ್ರಾರಂಭಿಸಿದ ಈ ಸಂಸ್ಥೆ ಈವರೆಗೆ 3000ಕ್ಕೂ ಅಧಿಕ ಚಿತ್ರಗಳಿಗೆ ಪ್ರಚಾರ ಮಾಡಿದೆ. ಪ್ರಸ್ತುತ ಈ ಸಂಸ್ಥೆಯನ್ನು ಸುಧೀಂದ್ರ ವೆಂಕಟೇಶ್ ಮುನ್ನಡೆಸುತ್ತಿದ್ದಾರೆ. ಸುನೀಲ್ ಸುಧೀಂದ್ರ, ಡಿ.ಜಿ.ವಾಸುದೇವ್, ಪವನ್ ವೆಂಕಟೇಶ್ ಸಾಥ್ ನೀಡುತ್ತಿದ್ದಾರೆ. 50ರ ಸಂಭ್ರಮವನ್ನು ಏಪ್ರಿಲ್‌ನಲ್ಲಿ ಆಚರಿಸಲಾಗುತ್ತಿದೆ. ಹಿರಿಯ ನಟ ಜೆಕೆಶ್ರೀನಿವಾಸಮೂರ್ತಿ, ಕೋಮಲ್, ನಟಿ ಅನುಪ್ರಭಾಕರ್ ಈ ಸಂಸ್ಥೆಯ ಸುವರ್ಣ ಸಂಭ್ರಮದ ಲೋಗೊ ಬಿಡುಗಡೆಗೊಳಿಸಿದರು.

ನಾನೂ ಸಹ ಚಿತ್ರರಂಗಕ್ಕೆ ಬಂದು 50 ವರ್ಷವಾಯ್ತು ಎಂದ ಶ್ರೀನಿವಾಸಮೂರ್ತಿ, ಆಗಿನಿಂದಲೂ ನನಗೆ ಸುಧೀಂದ್ರ ಅವರ ಜೊತೆ ಒಡನಾಟವಿದೆ. ರಾಘವೇಂದ್ರ ಚಿತ್ರವಾಣಿ 100 ವರ್ಷಗಳ ಸಂಭ್ರಮ ಆಚರಿಸಲಿ ಎಂದು ಹಾರೈಸಿದರು. ಉಳಿದಂತೆ ನಟ ಕೋಮಲ್ ಕುಮಾರ್, ನಟಿ ಅನುಪ್ರಭಾಕರ್ ಸಂಸ್ಥೆಯ ಜತೆ ತಮಗಿದ್ದ ಒಡನಾಟವನ್ನು ನೆನೆದು ಶುಭ ಹಾರೈಸಿದರು. ರಾಘವೇಂದ್ರ ಚಿತ್ರವಾಣಿ ಸಾಗಿಬಂದ ಬಗ್ಗೆ ಮಾತನಾಡಿದ ಸುಧೀಂದ್ರ ವೆಂಕಟೇಶ್, ಏಪ್ರಿಲ್‌ನಲ್ಲಿ ದೊಡ್ಡ ಮಟ್ಟದ ಸಮಾರಂಭವನ್ನು ಆಯೋಜಿಸಲು ಸಿದ್ದತೆ ನಡೆಯುತ್ತಿದೆ. ಆಗಿನಿಂದಲೂ ನಮಗೆ ಪ್ರೋತ್ಸಾಹ ನೀಡುತ್ತಾ ಬಂದಿರುವ ಚಿತ್ರರಂಗ ಹಾಗೂ ಮಾಧ್ಯಮ ರಂಗಕ್ಕೆ ನಾವು ಆಭಾರಿಯಾಗಿದ್ದೇವೆ ಎಂದರು.

'ವಿನಾಶ ಕಾಲೇ' ಚಿತ್ರಕ್ಕೆ ಚಾಲನೆ

ಗಾದೆ ಮಾತುಗಳು ಎಂದಿಗೂ ಸುಳ್ಳಾಗಲ್ಲ. ಹಿರಿಯರು ತಮ್ಮ ಅನುಭವವನ್ನು ಗಾದೆಗಳ ಮೂಲಕ ವ್ಯಕ್ತಪಡಿಸುತ್ತಿದ್ದರು, ಇದೀಗ 'ವಿನಾಶ ಕಾಲೇ ವಿಪರೀತ ಬುದ್ಧಿ' ಗಾದೆಯ ಮೊದಲ ಪದ 'ವಿನಾಶ ಕಾಲೆ' ಸಿನಿಮಾವೊಂದರ ಟೈಟಲ್ ಆಗಿದೆ. ಎಸ್.ಕಿರಣ್‌ಕುಮಾರ್ ಅವರ ನಿರ್ದೇಶನದ ಈ ಚಿತ್ರವನ್ನು ಶಕ್ತಿ ಫಿಲಂಸ್ ನಿರ್ಮಿಸುತ್ತಿದೆ. ಇತ್ತೀಚೆಗೆ ಈ ಚಿತ್ರದ ಮುಹೂರ್ತ ನೆರವೇರಿತು.



ನನ್ನ ಗೆಳೆಯನ ಜೀವನದಲ್ಲಿ ನಡೆದ ನೈಜ ಘಟನೆಯೇ ಈ ಚಿತ್ರಕ್ಕೆ ಸ್ಫೂರ್ತಿ ಎಂದ ನಿರ್ದೇಶಕ ಕಿರಣ್‌ಕುಮಾರ್, ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು, ಅದುಬಿಟ್ಟು ಶಾರ್ಟ್ ಟೈಮಲ್ಲಿ ಕೋಟಿಗಟ್ಟಲೆ ಹಣ ಮಾಡಬೇಕೆಂದು ಹೊರಟವರು. ಅದರಿಂದ ಏನೆಲ್ಲ ತೊಂದರೆ, ಆತಂಕಗಳನ್ನು ಎದುರಿಸಬೇಕಾಗುತ್ತದೆ. ಅತಿಯಾದ ದುರಾಸೆಯಿಂದ ದೈವದ ಮೂಲಕ್ಕೆ ಕೈಹಾಕಿದರೆ ಏನೇನು ಅನಾಹುತವಾಗುತ್ತದೆ ಎಂಬುದನ್ನು ನಮ್ಮ ಚಿತ್ರದಲ್ಲಿ ಹೇಳುತ್ತಿದ್ದೇನೆ. ಮಧ್ಯಮ ವರ್ಗದ ಕುಟುಂಬದ ಐವರು ಹುಡುಗರು ಮತ್ತು ಹುಡುಗಿಯರು ಶಾರ್ಟ್ ಟೈಮಲ್ಲಿ ಹಣ ಸಂಪಾದಿಸಿ ದಿಢೀರ್ ಶ್ರೀಮಂತರಾಗಲು ಹೊರಡುತ್ತಾರೆ. ಹಾಗೆ ಹೊರಟವರಿಗೆ ಏನೆಲ್ಲ ಪ್ರಾಬ್ಲಂ ಎದುರಾಯಿತು, ಎಂಥಾ ತೊಂದರೆಗೆ ಸಿಕ್ಕಿಹಾಕಿಕೊಳ್ಳಬೇಕಾಯಿತು ಎಂಬುದನ್ನು, ಹಾರರ್, ಥ್ರಿಲ್ಲರ್ ಜಾನರ್ ಕಥೆಯ ಮೂಲಕ ಹೇಳುತ್ತಿದ್ದೇವೆ ಎಂದು ಮಾಹಿತಿ ನೀಡಿದರು.

ಈ ಚಿತ್ರದಲ್ಲಿ ಪಾವನಿ ಸಿರಿ, ರಿಷಿಕಾ ಗೌಡ, ವೈಷ್ಣವಿ, ಶ್ರೀನಿಧಿ, ರಚನಾ ನಾಯಕಿಯರಾಗಿ ಕಾಣಿಸಿಕೊಂಡಿದ್ದಾರೆ, ಉಳಿದಂತೆ ಮಾಂತ್ರಿಕಳ ಪಾತ್ರದಲ್ಲಿ ನಟಿ ಶೋಭಾ, ಅಘೋರಿಯಾಗಿ ಮಂಡ್ಯ ಸಿದ್ದು, ಬಿಗ್ ಬಾಸ್ ಮಲ್ಲಮ್ಮ, ಪ್ರವಲಿಕ, ದಿಶಾ ಮುಂತಾದವರು ನಟಿಸುತ್ತಿದ್ದಾರೆ. ನಾಯಕರ ಪಾತ್ರಕ್ಕೆ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. ಮಾರ್ಚ್ ತಿಂಗಳಿಂದ ಆರಂಭಿಸಿ 30 ದಿನಗಳ ಕಾಲ ಬೆಂಗಳೂರು, ಚಿಕ್ಕಮಗಳೂರು ಸುತ್ತಮುತ್ತಲ ತಾಣಗಳಲ್ಲಿ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ಈ ಚಿತ್ರದಲ್ಲಿ ಮೂರು ಹಾಡುಗಳಿದ್ದು, ಮಂಜುಕವಿ ಸಂಗೀತ ಸಂಯೋಜನೆ ಮಾಡುತ್ತಿದ್ದಾರೆ, ವಿನಯಗೌಡ ಅವರ ಛಾಯಾಗ್ರಹಣ, ವಿನು ಮನಸು ಅವರ ಹಿನ್ನೆಲೆ ಸಂಗೀತ ಈ ಚಿತ್ರಕ್ಕಿದೆ

ಮೈಸೂರು ಮಿತ್ರ

2028ರವರೆಗೂ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಮುಂದುವರೆಯಲಿ

ಮಾದಿಗ ಸಮುದಾಯದ ಆಶಯ ಎಂದ ತಾಪಂ ಮಾಜಿ ಉಪಾಧ್ಯಕ್ಷ ಮರಯ್ಯ



ದಂಡಿನಮಾರಮ್ಮ ದೇವಸ್ಥಾನದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ತಾ.ಪಂ. ಮಾಜಿ ಉಪಾಧ್ಯಕ್ಷ ಮರಯ್ಯ, ಪ್ರೇಮಾ ಮರಯ್ಯ ಸೇರಿದಂತೆ ಗ್ರಾಮಸ್ಥರು ಭಾಗವಹಿಸಿದ್ದರು.

ತಿ.ನರಸೀಪುರ, ಜ.29– ಭೈರಾಪುರ ಗ್ರಾಮದ ಮಾದಿಗ ಜನಾಂಗದ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯರವರಿಗೆ ವಿಶೇಷ ಪ್ರೀತಿ ಇರುವ ಹಿನ್ನೆಲೆಯಲ್ಲಿ ರಾಜ್ಯದ ಯಾವುದೇ ಗ್ರಾಮಕ್ಕೆ ನೀಡದ ಅನುದಾನವನ್ನು ನಮ್ಮ ಗ್ರಾಮಕ್ಕೆ ನೀಡಿದ್ದಾರೆ ಎಂದು ತಿಳಿಸಿದ ತಾ.ಪಂ. ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಅವರು ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಮುಂದುವರೆಯಲಿ ಎಂಬುದು ಮಾದಿಗ ಸಮುದಾಯದ ಆಶಯವಾಗಿದೆ ಎಂದರು.

ಸುಮಾರು 5 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ನವೀಕರಣ ಮಾಡಲಾಗಿರುವ ಪುರಸಭೆ ವ್ಯಾಪ್ತಿಯ ಭೈರಾಪುರ ಗ್ರಾಮದ ದಂಡಿನ ಮಾರಮ್ಮ ದೇವಸ್ಥಾನದಲ್ಲಿ ಪತ್ನಿ ಪ್ರೇಮ ಹಾಗೂ ಕುಟುಂಬಸ್ಥರೊಡಗೂಡಿ ಹೋಮ–ಹವನ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಯತೀಂದ್ರ ಸಿದ್ದರಾಮಯ್ಯನವರು ಭೈರಾಪುರ ಗ್ರಾಮದ ದಂಡಿನ ಮಾರಮ್ಮ, ಹಿತ್ತಲ ಮಾರಮ್ಮ, ಉಪ್ಪಿಟ್ಟಮ್ಮ ಸೊಪ್ಪಿಟ್ಟಮ್ಮ, ಚೆನ್ನಪ್ಪಾಜಿ ದೇವಸ್ಥಾನ ಸೇರಿದಂತೆ 8 ದೇವಸ್ಥಾನಗಳ ನವೀಕರಣಕ್ಕಾಗಿ ಒಂದು ಕೋಟಿ ರೂ.ಗಳ ಅನುದಾನ ಬಿಡುಗಡೆ ಮಾಡಿಕೊಟ್ಟಿದ್ದಾರೆ. ಬೈರಾಪುರ ಗ್ರಾಮದ ಮೇಲೆ ಸಿಎಂ ಹಾಗೂ ಎಂಎಲ್ಸಿಯವರಿಗೆ ವಿಶೇಷ ಪ್ರೀತಿಯಿದೆ. ಹಾಗಾಗಿ ವಿಶೇಷ ಅನುದಾನ ಬಿಡುಗಡೆ ಮಾಡುವ ಮೂಲಕ ಎಲ್ಲ ದೇವಸ್ಥಾನಗಳ ಅಭಿವೃದ್ಧಿಗೆ ಅನುದಾನ ನೀಡಿರುವುದಲ್ಲದೇ ಮಾದಿಗ ಜನಾಂಗವೇ ಹೆಚ್ಚಾಗಿ ವಾಸಿಸುವ ನಮ್ಮ ಗ್ರಾಮಕ್ಕೆ ದೇವಸ್ಥಾನ, ರಸ್ತೆ, ಸ್ಮಶಾನ ಅಭಿವೃದ್ಧಿ ಹಾಗೂ ಬಾಬು ಜಗಜೀವನರಾಂ ಭವನ ನಿರ್ಮಾಣಕ್ಕೆ ಅನುದಾನ ನೀಡಿದ್ದು, ರಾಜ್ಯದಲ್ಲಿಯೇ ಬೇರೆ ಯಾವುದೇ ಗ್ರಾಮಕ್ಕೆ ನೀಡದ ಅನುದಾನ ನಮ್ಮ ಗ್ರಾಮಕ್ಕೆ ನೀಡಿದ್ದಾರೆ. ಭವನ ನಿರ್ಮಾಣಕ್ಕಾಗಿಯೇ 2 ಕೋಟಿ ರೂ. ಗಳ ಅನುದಾನ ನೀಡಿದ್ದು, ಅನುದಾನ ಎಲ್ಲಿಯೂ ಸೋರಿಕೆಯಾಗದ ರೀತಿ ಕಾಮಗಾರಿ ಮುಗಿಸಿ ಸಾರ್ವಜನಿಕ ಸೇವೆಗೆ ಭವನ ಸಮರ್ಪಿಸುವ ಕೆಲಸ ಮಾಡಲಾಗುತ್ತದೆ ಎಂದರು.

2028ಕ್ಕೂ ಸಿದ್ದರಾಮಯ್ಯ ಸಿಎಂ ಆಗಿರಲಿ: ಗ್ರಾಮಕ್ಕೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಿಕೊಟ್ಟ ಸಿದ್ದರಾಮಯ್ಯ ಮತ್ತೊಂದು ಅವಧಿಯ ಮುಖ್ಯಮಂತ್ರಿ ಆಗಬೇಕೆಂಬುದು ಈ ಬಾಗದ ಮಾದಿಗ ಸಮಾಜದವರ ಆಶಯವಾಗಿದ್ದು 2028ರಲ್ಲಿ ನಡೆಯುವ ಚುನಾವಣೆಯಲ್ಲಿ ಗ್ರಾಮದ ಎಲ್ಲರೂ ಅವರನ್ನೇ ಬೆಂಬಲಿಸುವ ಮೂಲಕ ಮತ್ತೊಮ್ಮೆ ಮುಖ್ಯಮಂತ್ರಿಯಾಗಲು ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇವೆ ಆ ನಿಟ್ಟಿನಲ್ಲಿ ಸಮಾಜದ ಎಲ್ಲರೂ ಅವರಿಗೆ ಬೆಂಬಲವಾಗಿ ನಿಲ್ಲುತ್ತೇವೆ ಎಂದರು.

ಈ ವೇಳೆ ಗ್ರಾಮದ ಯಜಮಾನರಾದ ಚಿಕ್ಕಲಿಂಗಯ್ಯ, ಜೆ.ಮಹದೇವ, ಚಿಕ್ಕನಂಜಯ್ಯ, ಪುಟ್ಟಸ್ವಾಮಿ, ರಾಜಣ್ಣ, ದಿಲೀಪ್ ಕುಮಾರ್, ಮಹದೇವಸ್ವಾಮಿ, ಬಸವರಾಜು, ಕುಮಾರ, ಮಹದೇವ, ಮುಸುವಿನಕೊಪ್ಪಲು ಪ್ರಕಾಶ್, ಘಟಕ ಮಹದೇವು, ಮಹೇಂದ್ರ, ಕೆಡಿಪಿ ಸದಸ್ಯ ದಿವಾಕರ್, ಗಿರೀಶ್, ಅಭಿ, ಸುರನ್, ಪುನೀತ್ ಸೇರಿದಂತೆ ಗ್ರಾಮಸ್ಥರು, ಮುಖಂಡರು ಹಾಜರಿದ್ದರು.

ಸುತ್ತೂರಲ್ಲಿ ಕಟೌಟ್ ತೆರವುಗೊಳಿಸುವ ವೇಳೆ ಬಿದ್ದು ವ್ಯಕ್ತಿ ಸಾವು

ನಂಜನಗೂಡು, ಜ.29– ತಾಲೂಕಿನ ಸುತ್ತೂರು ಜಾತ್ರೆಯಲ್ಲಿ ಅಳವಡಿಸಿದ್ದ ಕಟೌಟ್‌ಗಳನ್ನು ತೆರವುಗೊಳಿಸುತ್ತಿದ್ದ ಮೈಸೂರಿನ ಕ್ಯಾತಮಾರನಹಳ್ಳಿ ನಿವಾಸಿ ರವಿಕುಮಾರ್(37) ಆಯತಪ್ಪಿ ಬಿದ್ದು ಸಾವನ್ನಪ್ಪಿದ್ದಾರೆ.

ಜ.21ರಂದು ಸುತ್ತೂರು ಜಾತ್ರೆ ಮುಗಿದ ಬಳಿಕ, ಅಳವಡಿಸಲಾಗಿದ್ದ ಎತ್ತರದ ಕಟೌಟ್‌ಗಳನ್ನು ತೆರವುಗೊಳಿಸುವ ವೇಳೆ ಆಯತಪ್ಪಿ ಮೇಲಿನಿಂದ ಬಿದ್ದು ರವಿಕುಮಾರ್ ಗಾಯಗೊಂಡಿದ್ದರು. ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹೋಲ್ಡಿಂಗ್ಸ್ ಮತ್ತು ಕಟೌಟ್‌ಗಳ ಅವಳಡಿಕೆಗೆ ಟೆಂಡರ್ ಪಡೆದಿದ್ದ ವ್ಯಕ್ತಿ ಈ ಘಟನೆ ನಡೆದ ದಿನದಿಂದ ನಾಪತ್ತೆಯಾಗಿದ್ದರಿಂದ ಗಾಯಗೊಂಡ ರವಿಕುಮಾರ್‌ಗೆ ಸೂಕ್ತ ಚಿಕಿತ್ಸೆ ದೊರಕದೆ ಮೃತಪಟ್ಟಿದ್ದಾರೆ ಎಂದು ರವಿಕುಮಾರ್ ಮಡದಿ ವೇದವತಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ರಾತ್ರಿ ವೇಳೆ ಕಟೌಟ್‌ಗಳನ್ನು ತೆರವುಗೊಳಿಸಲು ಕೂಲಿಗೆಂದು ಕರೆದುಕೊಂಡು ಹೋದವರು, ಬಿದ್ದು ಗಾಯಗೊಂಡ ಮೇಲೆ ಯಾರೂ ಸಹಾಯಕ್ಕೆ ಬರಲಿಲ್ಲ ದೂರಿನಲ್ಲಿ ತಿಳಿಸಿದ್ದಾರೆ. ಬಿಳಿಗೆರೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ

ಕಣಿಯನಹುಂಡಿಯಲ್ಲಿ ಚಿರತೆ ಪ್ರತ್ಯಕ್ಷ

ಕೋಳಿ ಸಾಗಿಸುತ್ತಿದ್ದ ಲಾರಿ ಚಾಲಕನಿಂದ ವೀಡಿಯೊ ಸೆರೆ



ಹೆಚ್.ಡಿ.ಕೋಟೆ: ತಾಲೂಕಿನ ಕಣಿಯನುಂಡಿ ಗ್ರಾಮದಲ್ಲಿ ಚಿರತೆಯೊಂದು ಪ್ರತ್ಯಕ್ಷವಾಗಿದ್ದು, ಗ್ರಾಮಸ್ಥರು ಆತಂಕಗೊಂಡಿದ್ದಾರೆ.

ತಾಲೂಕಿನ ಕಣಿಯನ ಹುಂಡಿ ಗ್ರಾಮದಲ್ಲಿ ಕಳೆದ ನಾಲ್ಕೈದು ದಿನಗಳಿಂದ ಚಿರತೆ ಜಮೀನುಗಳಲ್ಲಿ ಓಡಾಡುತ್ತಿದ್ದು, ರೈತರು ಮತ್ತು ಗ್ರಾಮಸ್ಥರು ರಾತ್ರಿ ವೇಳೆ ಗ್ರಾಮದಲ್ಲಿ ಓಡಾಡಲು ಭಯಪಡುವ ಪರಿಸ್ಥಿತಿ ನಿರ್ಮಾಣಗೊಂಡಿದೆ.

ರಾತ್ರಿ ವೇಳೆ ಲಾರಿ ಚಾಲಕ ಕೋಳಿ ತುಂಬಿಕೊಂಡು ಹೋಗುತ್ತಿದ್ದ ಸಂದರ್ಭದಲ್ಲಿ ರಸ್ತೆ ಬದಿಯಿಂದ ಜಮೀನು ಕಡೆಗೆ ತೆರಳುತ್ತಿದ್ದ ಚಿರತೆಯ ದೃಶ್ಯವನ್ನು ಚಾಲಕ ತನ್ನ ಮೊಬೈಲ್ ಕ್ಯಾಮಾರಾದಲ್ಲಿ ಸೆರೆ ಹಿಡಿದಿದ್ದು, ಅದನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿರುವುದರಿಂದ ಭಾರೀ ವೈರಲ್ ಆಗಿದೆ.

ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಕೃಷ್ಣ ಮಾತನಾಡಿ, ಹಲವಾರು ತಿಂಗಳಿಂದ ಈ ಭಾಗದಲ್ಲಿ ಚಿರತೆ ಕಾಣಿಸಿಕೊಂಡು ರೈತರು ಜಮೀನಿಗೆ ತೆರಳುವುದಕ್ಕೆ ಭಯ ಪಡುತ್ತಿದ್ದಾರೆ. ಈಗ ಕಳೆದ ಮೂರು ನಾಲ್ಕು ದಿನಗಳ ಹಿಂದೆ ಭಾರಿ ಗಾತ್ರದ ಚಿರತೆ ರಸ್ತೆ ಬದಿಯಿಂದ ಜಮೀನಿಗೆ ತೆರಳುವ ದೃಶ್ಯವನ್ನು ಲಾರಿ ಚಾಲಕ ವೀಡಿಯೊ ಮಾಡಿದ್ದಾರೆ. ಇದನ್ನು ಕಂಡು ರೈತರು ಇನ್ನಷ್ಟು ಭಯಭೀತರಾಗಿದ್ದಾರೆ ಎಂದರು.

ಗ್ರಾಮಗಳಿಗೆ ಚಿರತೆ ಸಾಕಷ್ಟು ಬಾರಿ ಕಾಡಿನಿಂದ ಬರುತ್ತಿವೆ. ಗ್ರಾಮಗಳಲ್ಲಿ ಹಂದಿಗಳ ಸಂಖ್ಯೆ ಹೆಚ್ಚಾಗಿದ್ದು, ಅದನ್ನು ಭೇಟೆ ಯಾಡಲು ಜಮೀನುಗಳಿಗೆ ಬರುತ್ತಿವೆ. ಅರಣ್ಯ ಇಲಾಖೆಯವರು ಕೂಡಲೇ ಗ್ರಾಮಕ್ಕೆ ಭೇಟಿ ನೀಡಿ ಹಂದಿ ಹಾವಳಿ ತಡೆಗಟ್ಟುವುದರೊಂದಿಗೆ ಚಿರತೆಯನ್ನು ಸೆರೆಹಿಡಿಯುವಂತೆ ಅವರು ಆಗ್ರಹಿಸಿದ್ದಾರೆ.

ಗ್ರಾಮಸ್ಥರ ಆರೋಪ: ನಮ್ಮ ಗ್ರಾಮದ ಜಮೀನುಗಳಿಗೆ ಚಿರತೆಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಾಗ ಬರುತ್ತಿವೆ. ಈ ಸಂಬಂಧ ಸಾಕಷ್ಟು ಬಾರಿ ಅರಣ್ಯ ಇಲಾಖೆಯವರಿಗೆ ದೂರು ನೀಡಿದರು ಕೂಡ ಚಿರತೆಯನ್ನು ಸೆರೆಹಿಡಿಯಲು ಅರಣ್ಯ ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಂದು ಶ್ರೀಸಂತೆ ಮಾಸ್ತಮನವರ ಕೊಂಡ ಮಹೋತ್ಸವ

ಸರಗೂರು: ಗ್ರಾಮದೇವತೆ ಶ್ರೀ ಸಂತೆ ಮಾಸ್ತಮನವರ ಜಾತ್ರಾ ಮಹೋತ್ಸವ ಶುಕ್ರವಾರ(ಜ.30) ನಡೆಯಲಿದೆ. ಜಾತ್ರಾ ಮಹೋತ್ಸವಕ್ಕೆ ದೇವಸ್ಥಾನದ ಸೇವಾ ಟ್ರಸ್ಟ್ ಹಾಗೂ ಪಟ್ಟಣದ ಯಜಮಾನರು, ಮುಖಂಡರು ಸಿದ್ಧತೆ ನಡೆಸಿದ್ದಾರೆ.

ಇಲ್ಲಿನ ಗ್ರಾಮ ದೇವತೆ ಮಾಸ್ತಮ ದೇವರಿಗೆ ನಾನೂರು ವರ್ಷಗಳ ಇತಿಹಾಸ ಇದ್ದು, ಹಿಂದಿನಿಂದಲೂ ಗ್ರಾಮದ ಕುಲದೇವತೆ ಮತ್ತು ಗ್ರಾಮದೇವತೆ ತಂಗಳ ಜಾತ್ರೆಯಂತಲು ಕರೆಯುತ್ತಾರೆ. ಈ ಜಾತ್ರೆಯಲ್ಲಿ ಇಲ್ಲಿನ ಭಕ್ತರು ಭಕ್ತಿಭಾವದಿಂದ ಕೊಂಡ ಮಹೋತ್ಸವವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಪ್ರತಿ ವರ್ಷ ನೂರಾರು ಭಕ್ತರು ಕೆಂಡದ ಮೇಲೆ ನಡೆದು ತಮ್ಮಗಳ ಹರಕೆ ತೀರಿಸುತ್ತಾರೆ. ಈಗಾಗಲೇ ಕೊಂಡೋತ್ಸವಕ್ಕೆ ಬೇಕಾಗಿರುವ ಸೌದೆಯನ್ನು ಭಕ್ತಾಧಿಗಳು ರಾಶಿರಾಶಿ ಸಂಖ್ಯೆಯಲ್ಲಿ ತಂದು ಹಾಕುತ್ತಿದ್ದಾರೆ. ರಾತ್ರಿಯಿಂದಲೇ ದೇವಸ್ಥಾನವನ್ನು ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುವಂತೆ ಮಾಡಲಾಗಿದೆ.

ಲಕ್ಷ್ಮೀ ಸ್ತ್ರೀ ಶಕ್ತಿ ಸ್ವ ಸಹಾಯ ಸಂಘದ ಬೆಳ್ಳಿಹಬ್ಬ



ಮೈಸೂರು ತಾಲೂಕು ಕುಪ್ಪೆಗಾಲ ಗ್ರಾಮದ ಲಕ್ಷ್ಮೀ ಸ್ತ್ರೀ ಶಕ್ತಿ ಸ್ವ ಸಹಾಯ ಸಂಘದ 25ನೇ ವರ್ಷದ ಬೆಳ್ಳಿ ಹಬ್ಬವನ್ನು ದೀಪ ಬೆಳಗಿಸುವುದರ ಮೂಲಕ ಆಚರಿಸಲಾಯಿತು. ಚಿತ್ರದಲ್ಲಿ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳನ್ನು ಕಾಣಬಹುದು.

ಬಿ.ಎಂ.ನಾಗೇಂದ್ರ ನಿಧನ



ಭೇರ್ಯ : ಬಟಿಗನಹಳ್ಳಿ ಗ್ರಾಮದ ನಿವೃತ್ತ ಶಿಕ್ಷಕ ಬಿ.ಎಂ. ನಾಗೇಂದ್ರ ಗುರುವಾರ ನಿಧನರಾದರು.

ಇವರಿಗೆ ಪತ್ನಿ, ಹಾಗೂ ಇಬ್ಬರು ಪುತ್ರರು ಸೇರಿದಂತೆ ಮೊಮ್ಮಕ್ಕಳು ಇದ್ದಾರೆ. ಇವರ ಅಂತ್ಯಕ್ರಿಯೆಯು ಬಟಿಗನಹಳ್ಳಿ ಗ್ರಾಮದ ಜಮೀನಿನಲ್ಲಿ ಅಪಾರ ಬಂದು ಬಳಗದ ಸಮ್ಮುಖದಲ್ಲಿ ನಡೆಯಿತು.

ಇವರ ನಿಧನಕ್ಕೆ ಮಾಜಿ ಸಚಿವ ಸಾ.ರಾ.ಮಹೇಶ್, ಗ್ರಾ.ಪಂ. ಅಧ್ಯಕ್ಷೆ ರೇಖಾ ಮಹದೇವ್, ಹಿರಿಯ ಪತ್ರಕರ್ತರಾದ ರಂಗನಾಥ ಶೆಟ್ಟಿ, ಭೇರ್ಯ ಮಹೇಶ್, ಬಲಿಜ ಸಂಘದ ಬಿ.ವಿ.ರಘುನಾಥ್ ಸಂತಾಪ ಸೂಚಿಸಿದ್ದಾರೆ.

ಗ್ಯಾರಂಟಿಗಳಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು

ಕೆ.ಆರ್.ನಗರ: ಗ್ಯಾರಂಟಿ ಯೋಜನೆಯಿಂದ ಸಾಕಷ್ಟು ಜನರಿಗೆ ಅನುಕೂಲವಾಗುತ್ತಿದ್ದು ಸಂಬಂದಪಟ್ಟ ಇಲಾಖಾ ಅಧಿಕಾರಿಗಳು ಸರ್ಕಾರ ಜಾಹೀರಾತು ಫಲಕದಲ್ಲಿ ಪ್ಲೆಕ್ಸ್ ಬ್ಯಾನರ್ ಹಾಕಿ ಹೆಚ್ಚು ಪ್ರಚಾರ ಮಾಡಿ ಎಂದು ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಸ್.ಮಹದೇವ್ ಹೇಳಿದರು.

ಪಟ್ಟಣದ ತಾಲೂಕು ಪಂಚಾಯಿತಿ ಕಚೇರಿ ಕೃಷ್ಣರಾಜೇಂದ್ರ ಸಭಾಂಗಣದಲ್ಲಿ ಗ್ಯಾರಂಟಿ ಸಮಿತಿ ಸದಸ್ಯರ ಸಭೆಯಲ್ಲಿ ಮಾತನಾಡಿದ ಅವರು ಹೆಚ್ಚು ಹೆಚ್ಚು ಪ್ರಚಾರ ನೀಡಿದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಲಿದೆ ಎಂದರು.

ಗ್ಯಾರಂಟಿ ಯೋಜನೆಗಳು ಶೇಕಡ 98 ರಷ್ಟು ಸಾಧನೆ ಮಾಡಿದೆ. ಶೇಕಡ ನೂರಷ್ಟು ಜನರಿಗೆ ತಲುಪಿಸುವ ಉದ್ದೇಶದಿಂದ ಅಧಿಕಾರಿ ವರ್ಗದವರು ಎಲ್ಲೆಲ್ಲಿ ಲೋಪ ಕಂಡು ಬರುತ್ತದೆ ಅಂತಹ ಕಡೆಗಳಲ್ಲಿ ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದು ತಾಕೀತು ಮಾಡಿದರು.

ಕನ್ನಾಯಕನಹಳ್ಳಿ ಡೇರಿ ಕಾಂಗ್ರೆಸ್ ತೆಕ್ಕೆಗೆ

ಅಧ್ಯಕ್ಷರಾಗಿ ಪುಟ್ಟಸಿದ್ದಮ್ಮ, ಉಪಾಧ್ಯಕ್ಷರಾಗಿ ಲಕ್ಷ್ಮಮ್ಮ ಆಯ್ಕೆ



ನೂತನ ಅಧ್ಯಕ್ಷೆ, ಉಪಾಧ್ಯಕ್ಷೆಯನ್ನು ಗ್ರಾಮಸ್ಥರು ಮತ್ತು ಡೇರಿ ನಿರ್ದೇಶಕರು ಅಭಿನಂದಿಸಿದರು.

ತಿ.ನರಸೀಪುರ, ಜ.29–ತಾಲೂಕಿನ ಕನ್ನಾಯಕನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಪುಟ್ಟ ಸಿದ್ದಮ್ಮ ರಾಮೇಗೌಡ, ಉಪಾಧ್ಯಕ್ಷರಾಗಿ ಲಕ್ಷ್ಮಮ್ಮ ಚನ್ನಕಯ್ಯ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿಯಲ್ಲಿ ನಡೆದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಈ ಇಬ್ಬರನ್ನು ಹೊರತು ಪಡಿಸಿ ಬೇರಾರು ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅಧ್ಯಕ್ಷ–ಉಪಾಧ್ಯಕ್ಷರ ಅವಿರೋಧವಾಗಿ ಆಯ್ಕೆಯನ್ನು ಚುನಾವಣಾಧಿಕಾರಿ ಮೈಮುಲ್‌ನ ವಿಸ್ತರಣಾಧಿಕಾರಿ ಅನಿತಾ ಘೋಷಿಸಿದರು.

ಕಾರ್ಯದರ್ಶಿ ರೂಪ, ಶಿವರಾಜು ನಿರ್ದೇಶಕರಾದ ನಂಜಮ್ಮಮಹಾದೇವಯ್ಯ, ರಾಜಮ್ಮ ನಿಂಗಯ್ಯ, ರಾಜಮ್ಮ ಬಸವಲಿಂಗಯ್ಯ, ಯಶೋಧ. ಮಹಾದೇವಯ್ಯ ಹಾಗೂ ಸರ್ಕಾರಿ ನಾಮ ನಿರ್ದೇಶಕ ಶಾಂತಮ್ಮ ಬಸಯ್ಯ ಚುನಾವಣೆ ಪ್ರಕ್ರಿಯೆ ಭಾಗವಹಿಸಿ, ಮೂವರು ಸದಸ್ಯರು ಗೈರಾಗಿದ್ದರು.

ಗ್ರಾಮದ ಹಿರಿಯ ಮುಖಂಡರುಗಳಾದ ಪಟೇಲ್ ಶಂಕರೇ ಗೌಡ, ಮಾಜಿ ಗ್ರಾಪಂ ಅಧ್ಯಕ್ಷರೂ ಹಾಗೂ ಹಾಲಿ ಸದಸ್ಯ ನಾಗೇಂದ್ರ, ಮಾಜಿ ಗ್ರಾಮ ಪಂಚಾಯ್ತಿ ಸದಸ್ಯ ಶಿವರಾಜು, ರಂಗೇಗೌಡ, ಅಂಗಡಿ ಪುಟ್ಟಪ್ಪ ಎಸ್ ಮಾದಯ್ಯ, ಬಸಯ್ಯ, ಚನ್ನಾನ್ಕಯ್ಯ, ಮೂಗಪ್ಪ, ಬಸವಲಿಂಗಯ್ಯ, ಗ್ರಾಮ ಪಂಚಾಯ್ತಿ ಮಾಜಿ ಸದಸ್ಯರಾದ ಕೃಷ್ಣ ಮೂರ್ತಿ, ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷಶಿವು ಹಾಗೂ ಮಧು, ಮಂಜುನಾಥ್, ಜಿಮ್ ಸಿದ್ದು, ಚಂದ್ರಶೇಖರ್, ಮಹಾದೇವ, ಪಟೇಲ್ ನವೀನ್, ಪುಟ್ಟಸ್ವಾಮಿ ಹಾಗೂ ಗ್ರಾಮದ ಹಿರಿಯ ಮುಖ್ಯಸ್ಥರು, ಯುವಕರು ಹಾಜರಿದ್ದರು.

ಸುನಿಲ್ ಬೋಸ್ ಯುವ ಬ್ರಿಗೇಡ್ ಅಧ್ಯಕ್ಷ ಕುಮಾರ್ ರಾಮೇಗೌಡ ಮಾತನಾಡಿ ಕನ್ನನಾಯಕನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘವು ಸತತವಾಗಿ 20 ವರ್ಷಗಳಿಂದ ಮುದ್ದೇಗೌಡನ ಹಿಡಿತದಲ್ಲಿ ಇದ್ದ ಡೈರಿ ಅಧ್ಯಕ್ಷ ಹುದ್ದೆಯನ್ನು ಜಿದ್ದಾಜಿದ್ದಿ ಚುನಾವಣೆಯಲ್ಲಿ ಸುನಿಲ್ ಬೋಸ್ ಯುವ ಬ್ರಿಗೇಡ್ ಅಧ್ಯಕ್ಷ ಕುಮಾರ್ ಬಣವು ಆಯ್ಕೆಯಾಗಿದ್ದಾರೆ. ಆದರೆ ಈ ಸಂಘವನ್ನು ಮಾದರಿ ಸಂಘವಾಗಿ ರೂಪಿಸಲು ಶ್ರಮಿಸಲಾಗುವುದು ಎಂದರು.

ಮೂರನೇ ಪುಟದಿಂದ

‘ಖಾದಿ’ ಉಡುಪು ಧರಿಸುವುದು

ರಾಜ್ಯದ ಸಾವಿರಾರು ಗ್ರಾಮೀಣ ನೂಲುಗಾರರು ಮತ್ತು ನೇಕಾರರಿಗೆ ನೇರ ಹಾಗೂ ಪರೋಕ್ಷವಾಗಿ ಜೀವನೋಪಾಯವನ್ನು ಒದಗಿಸುತ್ತಿದೆ. ಆದ್ದರಿಂದ, 77ನೇ ಗಣರಾಜ್ಯೋತ್ಸವದ ಶುಭ ಸಂದರ್ಭದಲ್ಲಿ, ಸಾರ್ವಜನಿಕ ಸೇವೆಯನ್ನು ದೇಶದ ಸ್ವಾತಂತ್ರ್ಯ ಹೋರಾಟದೊಂದಿಗೆ ಮರು ಸಂಪರ್ಕಗೊಳಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು ಖಾದಿ ಬಳಕೆಯನ್ನು ಉತ್ತೇಜಿಸಲು ಒಂದು ಮಹತ್ವದ ನಿರ್ಧಾರವನ್ನು ಕೈಗೊಂಡಿದೆ.

ಅದರಂತೆ, ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಸಂಸ್ಥೆಗಳು, ನಿಗಮ ಮಂಡಳಿಗಳು, ಸ್ವಾಯತ್ತ ಸಂಸ್ಥೆಗಳು, ವಿಶ್ವವಿದ್ಯಾಲಯಗಳ ಅಧಿಕಾರಿ, ನೌಕರರು ಸ್ವಯಂ ಪ್ರೇರಣೆಯಿಂದ ಪ್ರತಿ ತಿಂಗಳ ಮೊದಲ ಶನಿವಾರದಂದು ಖಾದಿ ಉಡುಪನ್ನು ಧರಿಸುವುದು. ಅಲ್ಲದೇ, ಸ್ವಾತಂತ್ರ್ಯ ದಿನಾಚರಣೆ ಮತ್ತು ಗಣರಾಜ್ಯೋತ್ಸವ ಸೇರಿದಂತೆ ಎಲ್ಲಾ ಅಧಿಕೃತ ಸರ್ಕಾರಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಾಗ ಖಾದಿ ಉಡುಪನ್ನು ಧರಿಸುವಂತೆ ತಮ್ಮ ಇಲಾಖೆಗಳ ಅಧಿಕಾರಿ, ಸಿಬ್ಬಂದಿಗಳಿಗೆ ನಿರ್ದೇಶನ ನೀಡಲು ಸೂಚಿಸಿದ್ದಾರೆ. ಎಲ್ಲಾ ಜಿಲ್ಲೆಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 176 ಖಾದಿ ಸಂಘ–ಸಂಸ್ಥೆಗಳ ಹೆಸರು, ವಿಳಾಸ ಹಾಗೂ ಉತ್ಪನ್ನಗಳ ವಿವರಗಳನ್ನು https://khadi.karnataka.gov.in ದಲ್ಲಿ ಪಡೆಯಬಹುದಾಗಿದೆ.

ರಾಜೀನಾಮೆ ವಿಚಾರ!; ಜಾರ್ಜ್ ಸ್ಪಷ್ಟನೆ

ಆಡಳಿತದಲ್ಲಿ ತೀವ್ರ ಹಸ್ತಕ್ಷೇಪ ಮಾಡುತ್ತಿದ್ದರು. ಇದರಿಂದ ಅಸಮಾಧಾನಗೊಂಡ ಕೆಜೆ ಜಾರ್ಜ್ ಸಿಎಂ ನಿವಾಸಕ್ಕೆ ತೆರಳಿ ಪ್ರಶ್ನಿಸಿದ್ದರು. ಅಲ್ಲದೆ ಸಚಿವ ಸಂಪುಟ ಸಭೆಗೂ ಗೈರಾಗಿದ್ದರು ಎಂದು ಹೇಳಲಾಗಿತ್ತು. ಮಂತ್ರಿಯಾಗಿ ನನ್ನ ಮಾತಿಗೆ ಬೆಲೆ ಇಲ್ಲ. ಹೀಗಿರುವಾಗ ನಾನೇಕೆ ಇಲ್ಲಿ ಇರಲಿ ಎಂದು ಸಚಿವರು ಬೇಸರ ಹೊರ ಹಾಕಿದ್ದರು ಎಂಬ ಮಾಹಿತಿ ಇದೆ. ಬಳಿಕ ಸಿಎಂ ಸಿದ್ದರಾಮಯ್ಯ ಅವರ ಕಾನೂನು ಸಲಹೆಗಾರ ಎಎಸ್ ಪೊನ್ನಣ್ಣ ಅವರು ಸಂಧಾನ ನಡೆಸಿ ಸಚಿವರನ್ನು ಸಮಾಧಾನಪಡಿಸಿದ್ದರು ಎಂಬ ಮಾಹಿತಿ ಕೇಳಿ ಬಂದಿದೆ. ಈ ಮಧ್ಯೆ ತಾವು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲು ಮುಂದಾಗಿಲ್ಲ. ಅಂತಹ ಸಂದರ್ಭವೇನು ಬಂದಿಲ್ಲ. ಮುಖ್ಯಮಂತ್ರಿಗಳ ಮಗ ಒಳ್ಳೆಯವರು ಎಂದು ಜಾರ್ಜ್ ಪ್ರತಿಕ್ರಿಯಿಸಿದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಜಾರ್ಜ್ ರಾಜೀನಾಮೆ ಕೊಟ್ಟಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಒಳರೋಗಿಗಳಿಗೆ ಚಿಕಿತ್ಸೆ ನೀಡುವಂತಿಲ್ಲ

ನಿಯಮಿತ ಸರ್ಕಾರಿ ಕರ್ತವ್ಯಗಳಿಗೆ ಯಾವುದೇ ಅಡ್ಡಿಯಾಗಬಾರದು ಎಂಬುದು ಸರ್ಕಾರದ ಸ್ಪಷ್ಟ ನಿಲುವು ಎಂದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ನಿರಂತರ ಆರೈಕೆ, ತುರ್ತು ಚಿಕಿತ್ಸೆ ಮತ್ತು ಒಳರೋಗಿಗಳ ನಿಯಮಿತ ಮೇಲ್ವಿಚಾರಣೆ ಅತ್ಯಗತ್ಯ. ಸರ್ಕಾರಿ ವೈದ್ಯರು ಖಾಸಗಿ ಆಸ್ಪತ್ರೆಗಳಲ್ಲಿ ಒಳರೋಗಿಗಳ ಚಿಕಿತ್ಸೆಯಲ್ಲಿ ತೊಡಗಿದರೆ ಸರ್ಕಾರಿ ಆಸ್ಪತ್ರೆಗಳಲ್ಲಿನ ಸೇವೆಗಳ ಗುಣಮಟ್ಟ ಕ್ಷೀಣಿಸಲು ಕಾರಣವಾಗಬಹುದು ಎಂದರು. ರೋಗಿಗಳ ಆರೈಕೆಯಲ್ಲಿ ನಿರ್ಲಕ್ಷ್ಯದ ಹಲವಾರು ನಿದರ್ಶನಗಳು ಸರ್ಕಾರದ ಗಮನಕ್ಕೆ ಬಂದಿವೆ ಮತ್ತು ಕೆಲವು ಸಂದರ್ಭಗಳಲ್ಲಿ, ಗಂಭೀರ ಪರಿಣಾಮಗಳು ಉಂಟಾಗಿವೆ ಎಂದು ಅವರು ಹೇಳಿದರು.

ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ತನ್ನ ವರದಿಯಲ್ಲಿ ಸಾರ್ವಜನಿಕ ಸೇವೆಗೆ ಆದ್ಯತೆ ನೀಡಬೇಕಾದರೆ, ಸರ್ಕಾರಿ ವೈದ್ಯರ ಖಾಸಗಿ ಸೇವೆಯನ್ನು ನಿಯಂತ್ರಿಸಲು ಶಿಫಾರಸು ಮಾಡಿದೆ. ಕೇರಳದಂತಹ ಇತರ ರಾಜ್ಯಗಳಲ್ಲಿ ಇದೇ ರೀತಿಯ ನಿರ್ಬಂಧಗಳು ಜಾರಿಯಲ್ಲಿವೆ. ಅಲ್ಲಿ ಕಟ್ಟುನಿಟ್ಟಾದ ಷರತ್ತುಗಳ ಅಡಿಯಲ್ಲಿ ಸರ್ಕಾರಿ ವೈದ್ಯರಿಗೆ ಖಾಸಗಿ ಸೇವೆಯಲ್ಲಿ OPD ಸೇವೆಗಳಿಗೆ ಮಾತ್ರ ಅನುಮತಿಸಲಾಗಿದೆ ಎಂದು ಅವರು ತಿಳಿಸಿದರು.

ನಿಯಮ ಉಲ್ಲಂಘನೆಯಾದಲ್ಲಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳ ಪ್ರಕಾರ ಶಿಸ್ತು ಕ್ರಮ ಸೇರಿದಂತೆ ಕಾನೂನಿನ ಅಡಿಯಲ್ಲಿ ಸಂಬಂಧಪಟ್ಟ ಸರ್ಕಾರಿ ವೈದ್ಯರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ರಾವ್ ಹೇಳಿದರು.

ಡಿಕೆಶಿ ಬೆಂಬಲಿತ ಶಾಸಕರ ಬೇಸರ

ಅಂದಿನಿಂದ ಐದು ದಿನ ವಿವಿಧ ಇಲಾಖೆಗಳ ಅಧಿಕಾರಿಗಳ ಜೊತೆ ಸಮಾಲೋಚನೆ ಮತ್ತು ವಿವಿಧ ಸಂಘ ಸಂಸ್ಥೆಗಳ ಅಭಿಪ್ರಾಯ ಕೇಳಲು ಮುಖ್ಯಮಂತ್ರಿ ಕಾರ್ಯಾಲಯ ಸಮಯ ನಿಗದಿ ಮಾಡಿದೆ. ಫೆಬ್ರವರಿ 2ರೊಳಗೆ ತಮಗೆ ಅಧಿಕಾರ ದಕ್ಕುವ ಸಂಬಂಧ ಸ್ಪಷ್ಟ ನಿಲುವು ತಳೆಯಬಹುದೆಂಬ ಆಶಾಭಾವನೆಯಲ್ಲಿರುವ ಶಿವಕುಮಾರ್ ಅವರಿಗೆ ಸಿದ್ದರಾಮಯ್ಯ ನಿರ್ಧಾರ ದೊಡ್ಡ ಪೆಟ್ಟು ಕೊಟ್ಟಿದೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಶಿವಕುಮಾರ್ ಹಾಗೂ ಎಐಸಿಸಿಯ ಮುಂದಿನ ನಡೆ ಏನೆಂದು ಕುತೂಹಲ ಮೂಡಿಸಿದೆ.

ಕೋರ್ಟ್ ಮೂಲಕ ವಶಕ್ಕೆ ಪಡೆದ ಎನ್‌ಸಿಬಿ

ಪಡೆದ ಕೆಮಿಕಲ್ಸ್‌ಗಳನ್ನು ಒಂದು ಕೊಠಡಿಯಲ್ಲಿ ಇರಿಸಿ ಕಾರ್ಖಾನೆ ಸೀಜ್ ಮಾಡಲಾಗಿದೆ. ಯಾವುದೇ ಡ್ರಗ್ಸ್ ಆಗಲಿ, ಮಾದಕ ದ್ರವ್ಯವಾಗಲೀ ಸಿಕ್ಕಿಲ್ಲವೆಂದು ಮೈಸೂರು ನಗರ ಪೊಲೀಸರು ಹೇಳಿಕೊಂಡಿದ್ದು, ಈ ನಡುವೆ ಕಾರ್ಖಾನೆ ಮಾಲೀಕನ ಬಂಧನವಾಗಿದೆ.

ಏನೂ ಸಿಕ್ಕಿಲ್ಲವೆಂದ ಮೇಲೂ ಈ ರೀತಿಯ ತೀವ್ರತರದ ತನಿಖಾ ಪ್ರಕ್ರಿಯೆ ನಡೆಯುತ್ತಿರುವುದಾದರೂ ಏಕೆ ಎಂಬ ಚರ್ಚೆ ಶುರುವಾಗಿದೆ. ಬುಧವಾರ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಗಣಪತ್ ಲಾಲ್ ಮಾಲೀಕತ್ವದ ಟುಕ್–ಟುಕ್ ಹೌಸ್ ಹೋಲ್ಡ್ ಕೆಮಿಕಲ್ಸ್ ಪ್ರೊಡಕ್ಷನ್ ಸಲ್ಯೂಷನ್ ಮ್ಯಾನುಫ್ಯಾಕ್ಚರಿಂಗ್ ಕಾರ್ಖಾನೆ ಮೇಲೆ ಅಹ್ಮದಾಬಾದ್ ಎನ್‌ಸಿಬಿ ಅಧಿಕಾರಿಗಳು ದಾಳಿ ನಡೆಸಿದ್ದರು. ಅಲ್ಲದೆ, ಇಲ್ಲಿನ ರಾಸಾಯನಿಕ ಕಚ್ಚಾ ಸಾಮಗ್ರಿಗಳನ್ನು ಪರಿಶೀಲಿಸಿದ್ದರು. ಜೊತೆಗೆ ಗಣಪತ್ ಲಾಲ್ ಮನೆ ಮೇಲೂ ದಾಳಿ ಮಾಡಿ ಶೋಧನೆ ನಡೆಸಿದ್ದರು. ಬುಧವಾರದ ಈ ಎಲ್ಲಾ ಪ್ರಕ್ರಿಯೆ ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ಆರಂಭದಲ್ಲಿ ಗೊತ್ತೇ ಇರಲಿಲ್ಲವೆಂದು ಹೇಳಲಾಗಿದೆ. ಆ ಮೂಲಕ ಸ್ಥಳೀಯ ಪೊಲೀಸರಿಗೆ ಸುಳಿವು ನೀಡದೇ ಎನ್‌ಸಿಬಿ ಅಧಿಕಾರಿಗಳು ತನಿಖಾ ಪ್ರಕ್ರಿಯೆ ಆರಂಭಿಸಿದ್ದರು.

ಗುಜರಾತಿನ ಅಹ್ಮದಾಬಾದ್‌ನಲ್ಲಿ ಡ್ರಗ್ಸ್ ಪ್ರಕರಣ ಸಂಬಂಧ ಬಂಧಿತನಾದ ಆರೋಪಿಯು ಗಣಪತ್ ಲಾಲ್ ಮಾಲೀಕತ್ವದ ಕೆಮಿಕಲ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ. ಮಾತ್ರವಲ್ಲದೆ, ಈತನು ಗಣಪತ್ ಲಾಲ್‌ಗೆ ಹತ್ತಿರ ಸಂಬಂಧಿ. ಈ ಹಿನ್ನೆಲೆಯಲ್ಲಿ ಗಣಪತ್ ಲಾಲ್ ಮಾಲೀಕತ್ವದ ಕೆಮಿಕಲ್ಸ್ ಕಾರ್ಖಾನೆ ಮೇಲೆ ದಾಳಿ ನಡೆಸಲಾಗಿತ್ತು ಎಂಬುದನ್ನು ಸ್ಥಳೀಯ ಪೊಲೀಸರೇ ತಿಳಿಸಿದ್ದರು. ಇದೀಗ ಅಹ್ಮದಾಬಾದ್ ಡ್ರಗ್ಸ್ ಪ್ರಕರಣದ ಬಂಧಿತ ಆರೋಪಿ ಹೆಸರು ಮನೋಹರ್ ಬಿಷ್ಣೋಯಿ ಎಂಬುದು ಮೂಲಗಳಿಂದ ತಿಳಿದುಬಂದಿದೆ.

ಗಣಪತ್ ಲಾಲ್ ಕೆಮಿಕಲ್ಸ್ ಕಾರ್ಖಾನೆ ಆರಂಭಿಸುವುದಾಗಿ ಕಳೆದ ಫೆಬ್ರವರಿಯಲ್ಲಿ ಕಟ್ಟಡ ಬಾಡಿಗೆಗೆ ಪಡೆದಿದ್ದರು. ಆದರೆ ಪೂರ್ಣ ಪ್ರಮಾಣ ದಲ್ಲಿ ಕಾರ್ಖಾನೆ ಕಾರ್ಯಾರಂಭ ಮಾಡಿರಲಿಲ್ಲ ಎಂಬುದು ಅನುಮಾನಗಳಿಗೆ ಎಡೆ ಮಾಡಿದೆ. ಹೆಬ್ಬಾಳಿನ ಸದರಿ ಕಾರ್ಖಾನೆಯಲ್ಲಿ ಮಾದಕ ವಸ್ತು ತಯಾರಿಸಿ ಹೊರರಾಜ್ಯದಲ್ಲಿ ಮಾರಾಟ ಮಾಡಲಾಗುತ್ತಿತ್ತು ಎಂಬ ಮಾಹಿತಿ ಮೇರೆಗೆ ಎನ್‌ಸಿಬಿ ಅಧಿಕಾರಿಗಳ ತಂಡ ಬುಧವಾರ ದಾಳಿ ನಡೆಸಿತ್ತು ಎಂದು ಹೇಳಲಾಗಿದೆ.

ಮೈಸೂರಿಗೆ ಅಪಖ್ಯಾತಿ

ಮೈಸೂರಿನತ್ತಲೇ ಬೆರಳು ತೋರಿಸುತ್ತಿವೆ. ಸಂಸ್ಕೃತಿ ಮತ್ತು ಪರಂಪರೆಗೆ ಹೆಸರಾಗಿದ್ದ ನಗರವು ಇಂದು ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಮಾದಕ ದ್ರವ್ಯ ತನಿಖೆಗಳಿಂದಾಗಿ ಅಪಖ್ಯಾತಿ ಪಡೆಯುವಂತಾಗಿದೆ. ಇದು ಕೇವಲ ಕಾಕತಾಳೀಯವಲ್ಲ, ಇದು ಹದಗೆಡುತ್ತಿರುವ ಕಾನೂನು–ಸುವ್ಯವಸ್ಥೆ ಮತ್ತು ದುರ್ಬಲ ಆಡಳಿತದ ನೇರ ಫಲಿತಾಂಶವಾಗಿದೆ ಎಂದು ಅವರು ದೂರಿದ್ದಾರೆ.

ಡ್ರಗ್ಸ್ ಪಾರ್ಕ್ ಆಗುತ್ತಿದೆ...!

ಪತ್ತೆ ಹಚ್ಚಲಿಲ್ಲ, ನಿಮಗೆ ಗೊತ್ತಿಲ್ಲದೆ ಯಾವ ಅಪರಾಧವೂ ನಡೆಯದು ಎಂದು ಪ್ರಶ್ನಿಸಿದ್ದಾರೆ ಎಂದರು. ಕರ್ನಾಟಕ ಐಟಿ ಪಾರ್ಕ್ ಎಂದು ತಿಳಿದುಕೊಂಡಿದ್ದೆವು. ಆದರೆ ಡ್ರಗ್ಸ್ ಪಾರ್ಕ್ ಎಂದು ಗೊತ್ತಿರ ಲಿಲ್ಲ. ನಮ್ಮ ರಾಜ್ಯ ಡ್ರಗ್ಸ್ ತಯಾರಿಕಾ ಜಾಲಕ್ಕೆ ಸುರಕ್ಷಿತ ಆಶ್ರಯ ತಾಣ ಎನ್ನುವಷ್ಟರ ಮಟ್ಟಿಗೆ ಕಾನೂನು ಸುವ್ಯವಸ್ಥೆ ಹಾಳಾಗಿದೆ. ಕರ್ನಾಟಕದಲ್ಲಿ ಡ್ರಗ್ಸ್‌ಗಳ ಫ್ಯಾಕ್ಟರಿಗಳು ವ್ಯಾಪಿಸುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದು ಕಿಡಿಕಾರಿದರು. ಈ ಮಟ್ಟಕ್ಕೆ ಕಾನೂನು ಸುವ್ಯವಸ್ಥೆಯನ್ನು ಹಳ್ಳ ಹಿಡಿಸಿದವರು ನೀವು. ಈ ಪ್ರಮಾಣದಲ್ಲಿ ಪೊಲೀಸ್ ವ್ಯವಸ್ಥೆಯನ್ನು ದುರ್ಬಳಕೆ ಮಾಡಿಕೊಂಡಿರುವ ಸರ್ಕಾರವನ್ನೂ ಈವರೆಗೆ ನೋಡಿರಲಿಲ್ಲ. ಜನಸಾಮಾನ್ಯರಿಗೊಂದು ಕಾನೂನು ನಿಮಗೊಂದು ಕಾನೂನು ಸೃಷ್ಟಿ ಮಾಡಿಕೊಂಡಿರುವುದನ್ನು ಕಂಡಿರಲಿಲ್ಲ ಎಂದು ವಾಗ್ದಾಳಿ ನಡೆಸಿದರು.

ಇಂದು ಉಚಿತ ಕಣ್ಣಿನ ತಪಾಸಣೆ

ಮೈಸೂರು, ಜ.29– ಮೈಸೂರಿನ ಡಾ.ಪಿನ್ನಪಾಟ ಪದ್ಮನಾಭನ್ ಫೌಂಡೇಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಅಶೋಕ ರಸ್ತೆಯ ಶ್ರೀ ಕನ್ನಿಕಾ ಪರ ಮೇಶ್ವರಿ ದೇವಸ್ಥಾನದಲ್ಲಿ ಶುಕ್ರವಾರ (ಜ.30) ಬೆಳಗ್ಗೆ 10.30ರಿಂದ ಮಧ್ಯಾಹ್ನ 3.30ರವರೆಗೆ ಉಚಿತ ಆರೋಗ್ಯ ಹಾಗೂ ಕಣ್ಣಿನ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಎಆರ್‌ಯು ಯಂತ್ರದ ಮೂಲಕ ಕಣ್ಣಿನ ತಪಾಸಣೆ, ದೂರದೃಷ್ಟಿ ಮತ್ತು ಸಮೀಪ ದೃಷ್ಟಿ ಪರೀಕ್ಷೆ, ಇಸಿಜಿ, ಮಧುಮೇಹ, ಬಿಪಿ ಪರೀಕ್ಷೆ ಜೊತೆಗೆ ತಜ್ಞ ವೈದ್ಯರಿಂದ ಕೌನ್ಸಿಲಿಂಗ್ ಹಾಗೂ ವೈದ್ಯಕೀಯ ಸಲಹೆ ಪಡೆಯಬಹುದು. ಮಾಹಿತಿಗೆ ಮೊ.ಸಂ. 7676361761/ 9342118829 ಸಂಪರ್ಕಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

17ನೇ ಬೆಂಗಳೂರು ಅಂತರಾಷ್ಟ್ರೀಯ ಚಲನಚಿತ್ರೋತ್ಸವ



17ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವವನ್ನು ವಿಧಾನಸೌಧದ ಮೆಟ್ಟಿಲುಗಳ ಮೇಲೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಈ ವೇಳೆ ಸಭಾಪತಿ ಬಸವರಾಜ್ ಹೊರಟ್ಟಿ, ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧುಕೋಕಿಲ, ಚಲನಚಿತ್ರೋತ್ಸವ ರಾಯಭಾರಿ ಪ್ರಕಾಶ್ ರಾಜ್, ನಟಿ ರುಕ್ಮಿಣಿ ವಸಂತ್, ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎಂ.ನರಸಿಂಹಲು, ಶಾಸಕ ರಿಜ್ವಾನ್ ಅರ್ಷದ್, ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಇತರರು ಉಪಸ್ಥಿತರಿದ್ದರು.

ಅನ್ನಭಾಗ್ಯ ಯೋಜನೆಯಡಿ ಒಂದು ತಿಂಗಳ ಹಣ ನೀಡಿಲ್ಲ



ಬೆಂಗಳೂರು, ಜ.29(ಕೆಎಂಶಿ)– ಅನ್ನಭಾಗ್ಯ ಯೋಜನೆಯಡಿ ಫಲಾನುಭವಿಗಳಿಗೆ ಕಳೆದ ವರ್ಷದ ಒಂದು ತಿಂಗಳ ಹಣ ನೀಡಿಲ್ಲ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ವಿಧಾನಸಭೆಗೆ ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಮಹೇಶ್ ಟೆಂಗಿನಕಾಯಿ ಪ್ರಶ್ನೆಗೆ ಉತ್ತರಿಸಿದ ಸಚಿವರು, 2025ರ ಜನವರಿ ತಿಂಗಳಲ್ಲಿ ಫಲಾನುಭವಿಗಳಿಗೆ ಅಕ್ಕಿಯನ್ನೂ ನೀಡಿಲ್ಲ. ಹಣವನ್ನೂ ಜಮೆ ಮಾಡಿಲ್ಲ ಎಂದರು.

ಕೇಂದ್ರ ಸರ್ಕಾರದ ಆದೇಶವನ್ನು ಪಾಲನೆ ಮಾಡಿದ್ದರಿಂದ ಈ ರೀತಿ ಆಗಿದೆ.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿ ಕೊಡುವುದಾಗಿ ಕೇಂದ್ರ ಸರ್ಕಾರ ಭರವಸೆ ನೀಡಿತ್ತು.

ಕೇಂದ್ರ ಸರ್ಕಾರ ಪ್ರತಿ ಫಲಾನುಭವಿಗೆ 5 ಕೆಜಿ ಅಕ್ಕಿ ನೀಡುತ್ತಿತ್ತು. ಜೊತೆಗೆ ರಾಜ್ಯಸರ್ಕಾರವೂ 5 ಕೆಜಿ ಅಕ್ಕಿ ಕೊಡುವುದಾಗಿ ಭರವಸೆ ನೀಡಿತ್ತು.

ಆದರೆ 2–3 ತಿಂಗಳು ಕಳೆದರೂ ಕೇಂದ್ರ ಸರ್ಕಾರ ಅಕ್ಕಿ ಕೊಡಲಿಲ್ಲ. ಹೀಗಾಗಿ ಪ್ರತಿ ಫಲಾನುಭವಿಗೆ ಮಾಸಿಕ 170 ರೂ.ಗಳಂತೆ 2023 ರ ಜುಲೈನಿಂದ 2024–25 ರವರೆಗೆ ಡಿಬಿಟಿ ಮೂಲಕ ನೇರವಾಗಿ ಹಣವನ್ನು ಫಲಾನುಭವಿಗಳ ಖಾತೆಗೆ ಜಮಾ ಮಾಡಲಾಗುತ್ತಿತ್ತು ಎಂದರು.

2025ರ ಜ.17ರಂದು ಕೇಂದ್ರ ಸರ್ಕಾರ ಅಕ್ಕಿ ಕೊಡುವುದಾಗಿ ಹೇಳಿತ್ತು. ಪತ್ರ ವ್ಯವಹಾರ ಮಾಡುವಷ್ಟರಲ್ಲಿ ಫೆಬ್ರವರಿ ತಿಂಗಳು ಬಂದು ಬಿಟ್ಟಿತ್ತು. ಹೀಗಾಗಿ ಮಾರ್ಚ್‌ನಲ್ಲಿ 15 ಕೆಜಿ ಅಕ್ಕಿ ಕೊಟ್ಟಿದ್ದೇವೆ ಎಂದು ವಿವರಿಸಿದರು.

ನಾಳೆ ಮುಡುಕುತೊರೆ ಸುತ್ತೂರು ಶ್ರೀ ನಾಡುಮಠದಲ್ಲಿ ಭಜನೆ

ಮೈಸೂರು, ಜ. 29– ಮುಡುಕುತೊರೆಯಲ್ಲಿ ಶ್ರೀ ಭ್ರಮರಾಂಬಾಸಮೇತ ಶ್ರೀ ಮಲ್ಲಿಕಾರ್ಜುನಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಜನವರಿ 31ರಂದು ಶನಿವಾರ ತೆಪ್ಪೋತ್ಸವದಂದು, ಸಂಜೆ 6.00 ಗಂಟೆಗೆ ಶ್ರೀ ಸುತ್ತೂರು ನಾಡುಮಠದಲ್ಲಿ ಸುತ್ತೂರು ಶಾಲೆಯ ಸಂಗೀತ ಶಿಕ್ಷಕರು ಮತ್ತು ಮಕ್ಕಳಿಂದ ಭಜನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ನಂತರ ಪ್ರಸಾದದ ವ್ಯವಸ್ಥೆ ಇರುತ್ತದೆ. ಮುಡುಕುತೊರೆಗೂ ಸುತ್ತೂರು ಶ್ರೀಮಠಕ್ಕೂ ಮೊದಲಿನಿಂದಲೂ ಅವಿನಾಭಾವ ಸಂಬಂಧವಿದೆ. ಬೆಟ್ಟದ ತಪ್ಪಲಿನಲ್ಲಿ ಶ್ರೀ ಮಠದ ಶಾಖಾಮಠ ವಿದ್ದು, ನಾಡುಮಠವೆಂದು ಖ್ಯಾತಿ ಪಡೆದಿದೆ. ಹಿಂದಿನಿಂದಲೂ ಸುತ್ತೂರು ಶ್ರೀ ಮಠದಿಂದ ತೆಪ್ಪೋತ್ಸವದ ಸಂದರ್ಭದಲ್ಲಿ ಧಾರ್ಮಿಕ ಸಭೆ ಹಾಗೂ ದಾಸೋಹದ ವ್ಯವಸ್ಥೆಯನ್ನು ನಡೆಸಿಕೊಂಡು ಬರಲಾಗುತ್ತಿದೆ. ದೇವಸ್ಥಾನದ ಜೀರ್ಣೋದ್ಧಾರ ಕೆಲಸ ನಡೆಯುತ್ತಿರುವ ಕಾರಣ ಈ ವರ್ಷವೂ ಸರಳ ರೀತಿಯಲ್ಲಿ ಆಚರಿಸಲಾಗುತ್ತಿದೆ.

ಮಾ.12ರಿಂದ ಮೈಸೂರಲ್ಲಿ ಪ್ರಾಣೋತ್ಸವ ಅಂತರ ರಾಷ್ಟ್ರೀಯ ವಿಚಾರ ಸಂಕಿರಣ

ಮೈಸೂರು, ಜ.29(ಜಿಎ)–ಸೈಂಟಿಫಿಕ್ ಪ್ರಾಣಾಯಾಮ ಫೌಂಡೇಷನ್ ಟ್ರಸ್ಟ್ ವತಿಯಿಂದ ಮಾ.12, 13ರಂದು ನಗರದ ಎಟಿಎಂಇ ಎಂಜಿನಿಯರಿಂಗ್ ಕಾಲೇಜಿ ನಲ್ಲಿ ಪ್ರಾಣಾಯಾಮ ಕುರಿತ ‘ಪ್ರಾಣೋತ್ಸವ’ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಮುಖ್ಯಸ್ಥರಾದ ಡಾ.ದೇವಕಿ ಮಾಧವನ್ ಈ ವಿಷಯ ತಿಳಿಸಿ, ಕಾರ್ಯಕ್ರಮಕ್ಕೆ ಎಟಿಎಂಇ ಕಾಲೇಜು ಮುಖಸ್ಥ ಎಲ್.ಅರುಣ್‌ಕುಮಾರ್, ಯೋಗ ಕ್ಷೇತ್ರದ ಪ್ರಮುಖರಾದ ಅಭಿಮಾನ್ ಮಾಧವ್, ಎನ್.ಆರ್.ಸೀತಾ ರಮೇಶ್, ಕೆ.ಶಿವಶಂಕರ್, ಆರ್.ವಿರೇಶ್ ಮತ್ತಿತರರು ಆಗಮಿಸಲಿದ್ದಾರೆ ಎಂದರು. ಯೋಗ ಎಂದರೆ ಕೇವಲ ಆಸನಗಳಲ್ಲಿ ಪ್ರಾಣಾಯಾಮವೂ ಪ್ರಮುಖ ಇದರಿಂದ ಅನೇಕ ಕಾಯಿಲೆಗಳಿಂದ ಗುಣಮುಖರಾದವರು ಇದ್ದಾರೆ. ಹೀಗಾಗಿ ಈ ಕುರಿತು ಅರಿವು ಮೂಡಿಸಲು ಈ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸೀತಾ ರಮೇಶ್, ಮೈತ್ರಿ, ಶಶಿಕುಮಾರ್, ಡಾ.ರೇಣುಕಾ, ಡಾ.ರಾಮಚಂದ್ರ ಉಪಸ್ಥಿತರಿದ್ದರು.

ಎಸ್.ರಮೇಶ್ ನಿಧನ



ಮೈಸೂರು: ಮೈಸೂರಿನ ಅಶೋಕಪುರಂ ನಿವಾಸಿ ಎಸ್.ರಮೇಶ್(59) ಗುರುವಾರ ನಿಧನರಾದರು. ಮೃತರು ಪತ್ನಿ ಮಮತ, ಪುತ್ರ ಅಲೋಕ, ಪುತ್ರಿ ಅನುಷ, ಸಹೋದರ ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರೇವಣ್ಣ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಅಕ್ಕಮಹಾ ದೇವಿ ರಸ್ತೆಯಲ್ಲಿರುವ (ಸ್ಟರ್ಲಿಂಗ್ ಥಿಯೇಟರ್ ಮುಂಭಾಗದ) ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ರಂಗ, ನೃತ್ಯ ತರಬೇತಿ ಶಿಬಿರ ಆರಂಭ



ಚಿಂತಕ ಪ್ರೊ. ಕಾಳೇಗೌಡ ನಾಗವಾರ ಕಂಸಾಳೆ ನುಡಿಸುವ ಮೂಲಕ ರಂಗ, ನೃತ್ಯ ತರಬೇತಿ ಶಿಬಿರವನ್ನು ಉದ್ಘಾಟಿಸಿದರು.

ಮೈಸೂರು, ಜ.29(ವಿವಿಹೆಚ್)– ಮಕ್ಕಳಲ್ಲಿ ಜನಪದ ಸಂಸ್ಕೃತಿಯನ್ನು ಬಿತ್ತುವುದು ಸಾಮೂಹಿಕ ಹೊಣೆಗಾರಿಕೆ. ಆರೋಗ್ಯಕರ ಸಮಾಜದ ಬಗ್ಗೆ ಕಾಳಜಿ ವಹಿಸಿ ಇಂತಹ ಕಾರ್ಯಕ್ರಮ ಆಯೋಜಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದು ಚಿಂತಕ ಪ್ರೊ. ಕಾಳೇಗೌಡ ನಾಗವಾರ ಅಭಿಪ್ರಾಯಪಟ್ಟರು.

ಮೈಸೂರಿನ ಕಲಾಮಂದಿರ ಆವರಣದ ಚಿಂತನ ಚಾವಡಿಯಲ್ಲಿ ದೇಸಿ ರಂಗ ಸಾಂಸ್ಕೃತಿಕ ಟ್ರಸ್ಟ್ ಮೈಸೂರು ವತಿಯಿಂದ ಗುರುವಾರ ಆಯೋಜಿಸಲಾಗಿದ್ದ 'ರಂಗ ಮತ್ತು ನೃತ್ಯ ತರಬೇತಿ ಶಿಬಿರ'ದ ಉದ್ಘಾಟನಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಮಕ್ಕಳನ್ನು ಕಲೆಯಲ್ಲಿ ಕಾಣುವ ಸಾಂಸ್ಕೃತಿಕ ಕಾರ್ಯಕ್ರಮ ಇದಾಗಿದೆ. ಎಳೆಯ ಮನಸ್ಸಿನಲ್ಲಿ ಬೇರೂರುವ ಅಂಶಗಳು ಶಾಶ್ವತವಾಗಿ ಉಳಿಯುತ್ತವೆ. ಅದರ ಭಾಗವಾಗಿ ಇಂತಹ ರಂಗ ತರಬೇತಿ ಶಿಬಿರಗಳು ಅತ್ಯಂತ ಸೂಕ್ತ. ರಂಗಭೂಮಿ ಚಟುವಟಿಕೆ ಶಿಕ್ಷಣದ ಒಲವು ಹೆಚ್ಚಾಗಿಸುವಲ್ಲಿ ಪ್ರಮುಖ ಅಂಶವಾಗಿದೆ ಎಂದು ತಿಳಿಸಿದರು.

ಜೀವನದಲ್ಲಿ ಒಳ್ಳೆಯದು, ಕೆಟ್ಟದ್ದು ಜೊತೆಯಾಗಿಯೇ ಇರುತ್ತದೆ. ಅದರಲ್ಲಿ ಒಳ್ಳೆಯ ಅಂಶಗಳನ್ನು ಅಳವಡಿಸಿಕೊಳ್ಳಬೇಕು. ಮಕ್ಕಳೇ ನಿಜವಾದ ಶ್ರಮಜೀವಿಗಳು ಎಂದು ಅರಿತಿದ್ದವನು ಬುದ್ಧ. ಆತನ ಚಿಂತನೆಯನ್ನು ಇಂದು ವಿಶ್ವ ಕೊಂಡಾಡುತ್ತಿದೆ. ಬುದ್ಧನಂತ ವಿಚಾರ ಜ್ಞಾನಿಯನ್ನು ಯುವ ಮನಸ್ಸುಗಳು ಸ್ಫೂರ್ತಿಯಾಗಿ ತೆಗೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಮಾಜ ಪರಿವರ್ತನೆಗೆ ರಂಗಭೂಮಿಯಲ್ಲಿ ಸಾಕಷ್ಟು ಅವಕಾಶವಿದೆ. ಕಲೆ ಮನಸ್ಸನ್ನು ಒಂದುಗೂಡಿಸುತ್ತದೆ. ಯಾವುದೇ ವಯಸ್ಸಿನ ಅಂತರವಿಲ್ಲದೇ ಕಲಿಯಲು ಇರುವ ಏಕೈಕ ಅಂಶ ರಂಗಭೂಮಿಯಾಗಿದ್ದು, ಅದರತ್ತ ಯುವ ಪೀಳಿಗೆ ಒಲವು ಹೆಚ್ಚಾಗಬೇಕಿದೆ ಎಂದರು.

ವೈಚಾರಿಕ ಹಿನ್ನೆಲೆಯಿರುವ ಕರ್ನಾಟಕದಲ್ಲಿನ ವೈವಿಧ್ಯತೆಯನ್ನು ಮತ್ತೆಲ್ಲಿಯೂ ಕಾಣಲು ಸಾಧ್ಯವಿಲ್ಲ. ಉತ್ತರ ಪ್ರದೇಶದ ಆಗ್ರಾ ಹೊರತು ಪಡಿಸಿ ಅತೀ ಹೆಚ್ಚು ಪ್ರವಾಸಿಗರು ಸೇರುವುದು ಮೈಸೂರಿನಲ್ಲಿ. ಸಾಂಸ್ಕೃತಿಕತೆಗೆ ಹೆಸರಾದ ಇಲ್ಲಿ, ಕಲೆಯನ್ನು ಜೀವಂತವಾಗಿರಿಸಿಕೊಂಡು ಬರಲಾಗುತ್ತಿರುವುದು ಶ್ಲಾಘನೀಯ ಎಂದರು.

ಅಖಿಲ ಕರ್ನಾಟಕ ಮಹಿಳಾ ನೌಕರರ ಸಂಘ ಮೈಸೂರು ಜಿಲ್ಲಾ ಅಧ್ಯಕ್ಷೆ ಡಾ.ಕಾವೇರಿ ಪ್ರಕಾಶ್ ಮಾತನಾಡಿ, ಹಳ್ಳಿಗಾಡಿನ ಮಕ್ಕಳು ನಾವು. ಮೂಲ ಸೌಕರ್ಯ ಇಲ್ಲದೆ ಶಿಕ್ಷಣ ಪಡೆದಿದ್ದೇವೆ. ಯಾವುದೇ ಅನುಕೂಲಗಳು, ಅವಕಾಶಗಳು ಇಲ್ಲದೇ ಕಲಾಭಿರುಚಿ ಬೆಳೆಸಿಕೊಂಡವರು ನಾವು. ಆದರೆ ಇವತ್ತಿನ ವಿದ್ಯಾರ್ಥಿಗಳಿಗೆ ಅವಕಾಶ ಹಾಗೂ ಅನುಕೂಲಗಳು ವಿಪುಲವಾಗಿವೆ. ಅದನ್ನು ಸರಿಯಾಗಿ ಬಳಸಿಕೊಳ್ಳುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳು ಮೊಬೈಲ್, ಸಾಮಾಜಿಕ ಜಾಲತಾಣದ ಗೀಳಿಗೆ ಅಂಟಿಕೊಂಡಿದ್ದಾರೆ. ಅದರಿಂದ ಹೊರಬಂದು ಕಲೆಗಳಿಗೆ ತಮ್ಮನ್ನು ಅರ್ಪಿಸಿಕೊಳ್ಳಬೇಕಿದೆ. ಜಾನಪದ ಪ್ರಕಾರಗಳು ನಮ್ಮ ಪರಂಪರೆಯನ್ನು ತಿಳಿಸುತ್ತವೆ. ಅದನ್ನು ಉಳಿಸಿ, ಮುಂದಿನ ಪೀಳಿಗೆಗೆ ಪಸರಿಸುವ ಕೆಲಸವನ್ನು ವಿದ್ಯಾರ್ಥಿಗಳೇ ಮಾಡಬೇಕಿದೆ ಎಂದು ಅಭಿಪ್ರಾಯಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್ ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಮಹಾರಾಜ ಕಾಲೇಜು ಜನಪದ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ವಿಜಯಲಕ್ಷ್ಮೀ ಮನಾಪುರ, ಅಧ್ಯಕ್ಷ ಕೃಷ್ಣ ಜನಮನ, ಸಂಚಾಲಕಿ ದೀನಮಣಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಂಗಾತ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲ್ಯಾಂಡ್‌ಲಾರ್ಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಬಾರ್ಡರ್–2 (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ದ್ರೌಪದಿ–2 (ತ)	4 ಪ್ರದರ್ಶನಗಳು
ಸಂಗಂ	
ಕಲ್ಟ್ (ಕ)	4 ಪ್ರದರ್ಶನಗಳು
ಲಿಡೋ	
ಡೆವಿಲ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾವುತ (ಕ)	4 ಪ್ರದರ್ಶನಗಳು

ಬೇಲ್ ಮೇಲೆ ಜೈಲಿನಿಂದ ಬಿಡುಗಡೆಗೊಂಡ ಕೈ ಶಾಸಕ ವಿರೇಂದ್ರ ಪಪ್ಪಿಗೆ ಇಡಿ ಮತ್ತೊಂದು ಶಾಕ್



ಬೆಂಗಳೂರು, ಜ.29– ಅಕ್ರಮ ಬೆಟ್ಟಿಂಗ್ ಮತ್ತು ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ಕಾಂಗ್ರೆಸ್ ಶಾಸಕ ಕೆ.ಸಿ.ವಿರೇಂದ್ರ ಪಪ್ಪಿಗೆ ಸೇರಿದ ಆಸ್ತಿಯನ್ನು ಜಾರಿ ನಿರ್ದೇಶನಾಲಯ (ಇಡಿ) ಮುಟ್ಟುಗೋಲು ಹಾಕಿಕೊಂಡಿದೆ. ಈ ಹಿಂದೆ ದಾಳಿ ವೇಳೆ ಸಿಕ್ಕಿದ್ದ ಕೋಟ್ಯಾಂತರ ರೂಪಾಯಿ ನಗದು ಹಣ ಹಾಗೂ ಚಿನ್ನ, ಬೆಳ್ಳಿ ವಶಕ್ಕೆ ಪಡೆದುಕೊಂಡಿತ್ತು. ಇದೀಗ ವಿರೇಂದ್ರ ಪಪ್ಪಿಗೆ ಸೇರಿದ ಕೃಷಿ ಜಮೀನು, ನಿವೇಶನ ಸೇರಿ ಇತರೆ ಒಟ್ಟು 177.3 ಕೋಟಿ ರೂ. ಮೌಲ್ಯದ ಆಸ್ತಿ ಮುಟ್ಟುಗೋಲು ಹಾಕಿದೆ ಈ ಮೂಲಕ ಜಾಮೀನಿನ ಮೇಲೆ ಜೈಲಿನಿಂದ ಬಿಡುಗಡೆಯಾದ ಖುಷಿಯಲ್ಲಿದ್ದ ವಿರೇಂದ್ರ ಪಪ್ಪಿಗೆ ಇಡಿ ಮತ್ತೊಂದು ಶಾಕ್ ಕೊಟ್ಟಿದೆ.

ಆನ್‌ಲೈನ್ ಬೆಟ್ಟಿಂಗ್ ಹಗರಣ ಸಂಬಂಧ ಇಡಿ ಅಧಿಕಾರಿಗಳು ವಿರೇಂದ್ರ ಪಪ್ಪಿ ಮನೆಗಳ ಮೇಲೆ ದಾಳಿ ಮಾಡಿತ್ತು. ಆಗ ವಿರೇಂದ್ರ ಪಪ್ಪಿ ಅವರನ್ನು ಬಂಧಿಸಿ ನೂರಾರು ಕೋಟಿ ರೂಪಾಯಿ ಮೌಲ್ಯದ ಆಸ್ತಿ ಜಪ್ತಿ ಮಾಡಿತ್ತು. ಇದೀಗ ಮತ್ತೆ ಈ ಅಕ್ರಮ ಹಣದಿಂದ ಸಂಪಾದನೆ ಮಾಡಿದ ಕೃಷಿ ಜಮೀನು, ನಿವೇಶನ ಸೇರಿ 177.3 ಕೋಟಿ ರೂ. ಮೌಲ್ಯದ ಆಸ್ತಿ ಮುಟ್ಟುಗೋಲು ಹಾಕಿಕೊಂಡಿದೆ.

ದೇಶದ ವಿವಿಧ ರಾಜ್ಯಗಳಲ್ಲಿ ದಾಖಲಾಗಿದ್ದ ಆನ್ಲೈನ್ ಬೆಟ್ಟಿಂಗ್ ಪ್ರಕರಣ ಸಂಬಂಧ ಇಡಿ ಅಧಿಕಾರಿಗಳು ಕೇಸ್ ದಾಖಲಿಸಿಕೊಂಡು ತನಿಖೆ ನಡೆಸಿದ್ದು, ತನಿಖೆ ವೇಳೆ ಹಗರಣದಲ್ಲಿ ಕೆ.ಸಿ.ವೀರೇಂದ್ರ ಮತ್ತು ಸಹಚರರು ಮಾಸ್ಟರ್ ಮೈಂಡ್ ಎನ್ನುವುದು ಗೊತ್ತಾಗಿದೆ. ಅಲ್ಲದೇ ನೂರಾರು ಮ್ಯೂಲ್ ಅಕೌಂಟ್ ಬಳಸಿ ಅಕ್ರಮ ಹಣ ವರ್ಗಾವಣೆ ಪತ್ತೆಯಾಗಿದೆ. ತನಿಖೆ ವೇಳೆ ಸಿಕ್ಕ ಈ ಎಲ್ಲಾ ಸಾಕ್ಷ್ಯಗಳ ಆಧಾರದ ಮೇಲೆ ಕೆ.ಸಿ.ವೀರೇಂದ್ರ ಆಸ್ತಿ ಜಪ್ತಿ ಮಾಡಲಾಗಿದೆ.

ಈ ಹಿಂದೆ ಪ್ರಕರಣ ಸಂಬಂಧ 60ಕ್ಕೂ ಹೆಚ್ಚು ಸ್ಥಳಗಳಲ್ಲಿ ದಾಳಿ ನಡೆಸಿದ್ದ ಇಡಿ, ಚಿನ್ನ,ನಗದು, ಬೆಳ್ಳಿ, ವಾಹನಗಳನ್ನ ವಶಪಡಿಸಿಕೊಂಡಿತ್ತು. ಒಟ್ಟಾರೆ ಪ್ರಕರಣದಲ್ಲಿ ಇಲ್ಲಿವರೆಗೂ 320 ಕೋಟಿ ರೂ. ಮೌಲ್ಯದ ಆಸ್ತಿ ಜಪ್ತಿ ಮಾಡಲಾಗಿದೆ. ಇನ್ನು ಹಗರಣದಲ್ಲಿ 2,300 ಕೋಟಿ ರೂಪಾಯಿ ಅಧಿಕ ಅಕ್ರಮ ನಡೆದಿರುವುದು ಪತ್ತೆಯಾಗಿದ್ದು, ಈ ಸಂಬಂಧ ಇಡಿ ತನಿಖೆ ಮುಂದುವರೆಸಿದೆ.

ಜಾತಿ ತಾರತಮ್ಯದ ವಿರುದ್ಧದ ಹೊಸ ಯುಜಿಸಿ ನಿಯಮಗಳಿಗೆ ಸುಪ್ರೀಂ ತಡೆ!

ನವದೆಹಲಿ: ಮಹತ್ವದ ಬೆಳವಣಿಗೆಯಲ್ಲಿ ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ)ಯ ಹೊಸ ನಿಯಮಗಳಿಗೆ ಸುಪ್ರೀಂಕೋರ್ಟ್ ತಡೆ ನೀಡಿದೆ.

ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಹೊಸ ನಿಯಮಗಳ ಕುರಿತು ಸುಪ್ರೀಂ ಕೋರ್ಟ್ ಪ್ರಮುಖ ತೀರ್ಪು ನೀಡಿದ್ದು, 'ಅಸ್ಪಷ್ಟ, ದುರುಪಯೋಗ ಸಾಧ್ಯತೆ' ಕಾರಣ ನೀಡಿ ಹೊಸ ನಿಯಮಗಳನ್ನು ತಡೆ ಹಿಡಿದಿದೆ. ಯುಜಿಸಿಯ 'ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸಮಾನತೆಯ ಪ್ರಚಾರ ನಿಯಮಗಳು 2026' ಅನ್ನು ಸುಪ್ರೀಂಕೋರ್ಟ್ ಅಸ್ಪಷ್ಟ ಮತ್ತು ದುರುಪಯೋಗಕ್ಕೆ ಗುರಿಯಾಗುವ ನಿಯಮ ಎಂದು ಕರೆದು ನಿಯಮವನ್ನು ಅಮಾನತುಗೊಳಿಸಿತು. ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಪೀಠವು ನಿಯಮಕ್ಕೆ ಸ್ಪಷ್ಟೀಕರಣದ ಅಗತ್ಯವಿದೆ ಎಂದು ಹೇಳಿದೆ.


ಅಲ್ಲಿಯವರೆಗೆ, 2012ರ ಹಳೆಯ ಯುಜಿಸಿ ನಿಯಮಗಳು ಜಾರಿಯಲ್ಲಿರುತ್ತವೆ. ನ್ಯಾಯಾಲಯವು ಕೇಂದ್ರ ಸರ್ಕಾರಕ್ಕೆ ನೋಟಿಸ್ ನೀಡಿ ಮುಂದಿನ ವಿಚಾರಣೆಯನ್ನು ಕೋರ್ಟ್ ಮಾರ್ಚ್ 19ಕ್ಕೆ ನಿಗದಿಪಡಿಸಿತು.

ವಾಸ್ತವವಾಗಿ, ಕಳೆದ ಕೆಲವು ದಿನಗಳಿಂದ ಹೊಸ ಯುಜಿಸಿ ನಿಯಮಗಳ ಬಗ್ಗೆ ವಿವಾದ ಮುಂದುವರೆದಿತ್ತು. ಮೇಲ್ಜಾತಿಯ ವಿದ್ಯಾರ್ಥಿಗಳು ಈ ನಿಯಮಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ. ಬುಧವಾರ ಕೇವಲ ಒಂದು ದಿನದ ಹಿಂದೆ ಸುಪ್ರೀಂಕೋರ್ಟ್ ಯುಜಿಸಿ ನಿಯಮಗಳನ್ನು ಪ್ರಶ್ನಿಸುವ ಅರ್ಜಿಯನ್ನು ವಿಚಾರಣೆ ಮಾಡಲು ಒಪ್ಪಿಕೊಂಡಿತು. ಈ ನಿಯಮಗಳು ಸಾಮಾನ್ಯ ವರ್ಗದ ವಿದ್ಯಾರ್ಥಿಗಳ ವಿರುದ್ಧ ತಾರತಮ್ಯ ಮಾಡಬಹುದು ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

ಮೃತ್ಯುಂಜಯ್ ತಿವಾರಿ, ವಕೀಲ ವಿನೀತ್ ಜಿಂದಾಲ್ ಮತ್ತು ರಾಹುಲ್ ದಿವಾನ್ ಪ್ರಕರಣವನ್ನು ದಾಖಲಿಸಿದ್ದಾರೆ. ಸಿಜೆಐ ಸೂರ್ಯ ಕಾಂತ್ ಇಂದು ಅರ್ಜಿಯನ್ನು ವಿಚಾರಣೆಗೆ ಪಟ್ಟಿ ಮಾಡಿದ್ದಾರೆ. ವಾದಗಳನ್ನು ಆಲಿಸಿದ ನಂತರ, ಸುಪ್ರೀಂ ಕೋರ್ಟ್ ಯುಜಿಸಿ ಪ್ರಚಾರದ ಈಕ್ವಿಟಿ ನಿಯಮಗಳು 2026 ಅನ್ನು ತಡೆಹಿಡಿದಿದೆ.

ಹಾಡಿ, ಹಟ್ಟಿ, ತಾಂಡಗಳ ಲಕ್ಷ ಕುಟುಂಬಗಳಿಗೆ ಹಕ್ಕು ಪತ್ರ

- ಕಂದಾಯ ಸಚಿವ ಕೃಷ್ಣಬೈರೇಗೌಡ ಘೋಷಣೆ
- ವಾರದೊಳಗೆ ಸಿದ್ಧತೆಗೆ ಅಧಿಕಾರಿಗಳಿಗೆ ಸೂಚನೆ



ಬೆಂಗಳೂರು, ಜ.29(ಕೆಎಂಶಿ)– ರಾಜ್ಯದ ಉದ್ದಗಲಕ್ಕೂ ಹಾಡಿ, ಹಟ್ಟಿ, ತಾಂಡಗಳಲ್ಲಿ ವಾಸಿಸುವ ಒಂದು ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ನೀಡುವುದಾಗಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಇಂದಿಲ್ಲಿ ಪ್ರಕಟಿಸಿದ್ದಾರೆ.

ಜಿಲ್ಲಾಧಿಕಾರಿಗಳೊಂದಿಗೆ ವೀಡಿಯೊ ಕಾನ್ಫರೆನ್ಸ್ ನಡೆಸಿದ ಸಚಿವರು ತಾಂಡಗಳಲ್ಲಿ ವಾಸಿಸುವ ಕುಟುಂಬಗಳಿಗೆ ಸಾಮಾಜಿಕ ಭದ್ರತೆ ಒದಗಿಸುವ ಉದ್ದೇಶದಿಂದ ಅವರು ವಾಸಿಸುವ ಮನೆ ಮತ್ತು ಜಮೀನಿನ ಹಕ್ಕು ಪತ್ರಗಳನ್ನು ನೀಡಲು ತೀರ್ಮಾನಿಸಲಾಗಿದೆ ಎಂದು ಹೇಳಿದ್ದಾರೆ.

ಈಗಾಗಲೇ ಒಂದು ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ಹಕ್ಕು ಪತ್ರ ನೀಡಲಾಗಿದೆ. ಫೆಬ್ರವರಿ.13 ರಂದು ಹಾವೇರಿಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಒಂದು ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲು ತೀರ್ಮಾನಿಸಲಾಗಿದೆ.

ಮುಂದಿನ ವಾರದೊಳಗೆ ಹಕ್ಕುಪತ್ರ ಸೇರಿದಂತೆ ಎಲ್ಲಾ ದಾಖಲೆಗಳನ್ನೂ ಸಿದ್ಧಗೊಳಿಸಿಕೊಳ್ಳುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಸೂಚಿಸಿದರು.

ಕುಟುಂಬಗಳಿಗೆ ಶಾಶ್ವತ ನೆಮ್ಮದಿ ನೀಡುವ ಸಲುವಾಗಿ 2017ರಲ್ಲಿ ಕಾನೂನು ತಿದ್ದುಪಡಿ ಮಾಡಲಾಗಿತ್ತು. ಅದರಂತೆ ಕಳೆದ 2023 ಮೇ ವರೆಗೆ 6 ವರ್ಷಗಳಲ್ಲಿ 1.08 ಲಕ್ಷ ನಿವಾಸಿಗಳಿಗೆ ಮಾತ್ರ ಹಕ್ಕುಪತ್ರಗಳನ್ನು ನೀಡಲಾಗಿತ್ತು.

ನಾವು ಅಧಿಕಾರ ಸ್ವೀಕರಿಸಿ ಮೇ 2023 ರಿಂದ 2025ರ ವರೆಗೆ 1.11 ಲಕ್ಷ ಫಲಾನುಭವಿಗಳಿಗೆ ಕಳೆದ ವರ್ಷ ಹೊಸಪೇಟೆಯಲ್ಲಿ ಕಾರ್ಯಕ್ರಮ ನಡೆಸಿ ಡಿಜಿಟಲ್ ಹಕ್ಕುಪತ್ರ ನೀಡಲಾಗಿದೆ ಎಂದರು.

ನಾನಾ ಕಾರಣಗಳಿಂದ ಬಿಟ್ಟುಹೋಗಿರುವ ಉಳಿದ ಜನವಸತಿ ಪ್ರದೇಶಗಳನ್ನೂ ಗುರುತಿಸುವ ಕೆಲಸ ಪ್ರಗತಿಯಲ್ಲಿದೆ. ಈ ಪೈಕಿ 86,000 ಜನ ಫಲಾನುಭವಿಗಳ ಹಕ್ಕುಪತ್ರಗಳನ್ನು ಈಗಾಗಲೇ ಸಿದ್ಧಪಡಿಸಲಾಗಿದೆ.

ಸರ್ಕಾರಿ ಸೌಲಭ್ಯಗಳನ್ನೂ ಕಂದಾಯ ಗ್ರಾಮಗಳಿಗೆ ತಲುಪಿಸುವ ಗುರಿಯೊಂದಿಗೆ ಕಳೆದ ಎರಡೂವರೆ ವರ್ಷಗಳಲ್ಲಿ ಒಟ್ಟಾರೆ 2.11ಲಕ್ಷ ಕಂದಾಯ ಗ್ರಾಮಗಳ ಕುಟುಂಬಗಳಿಗೆ ಹಕ್ಕುಪತ್ರ ನೀಡಲಾಗಿದೆ.

ಇದಲ್ಲದೆ ಮೂಲ ದಾಖಲೆ ಕೆಡುವ ಹೋಗುವ ಅಥವಾ ದಾಖಲೆಗಳನ್ನು ತಿದ್ದುವುದನ್ನು ತಡೆಯಲು ಫಲಾನುಭವಿಗಳಿಗೆ ಡಿಜಿಟಲ್ ಹಕ್ಕುಪತ್ರಗಳನ್ನು ನೀಡಲಾಗುವುದು. ಫಲಾನುಭವಿಗಳ ಹೆಸರಿಗೆ ಸರಕಾರವೇ ಕ್ರಯಪತ್ರದ ಮೂಲಕ ನೋಂದಣಿ ಮಾಡಿಸಿ, ಸ್ಥಳೀಯ ಸಂಸ್ಥೆಯಿಂದ ಖಾತೆ ಕೊಡಿಸಲಾಗುವುದು ಎಂದರು.

ನಂದಿನಿ ಹಾಲು ಮಳಿಗೆದಾರರಿಗೆ ವಿಮಾ ಯೋಜನೆ ರೂಪಿಸಿ

- ವಿಧಾನಸಭಾ ಅಧಿವೇಶನದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಮನವಿ
- ಸಚಿವ ಕೆ.ವೆಂಕಟೇಶ ಸಕಾರಾತ್ಮಕ ಸ್ಪಂದನೆ


ಕೆ.ವೆಂಕಟೇಶ್


ಶ್ರೀವತ್ಸ

ಮೈಸೂರು,ಜ.29(ಪಿಎಂ)– ನಂದಿನಿ ಹಾಲು ಮಳಿಗೆದಾರರು ಹಾಗೂ ಅವರ ಕುಟುಂಬಸ್ಥರಿಗೆ ಆರೋಗ್ಯ ಮತ್ತು ಜೀವ ವಿಮಾ ಯೋಜನೆ ರೂಪಿಸುವಂತೆ ಶಾಸಕ ಟಿ.ಎಸ್.ಶ್ರೀವತ್ಸ, ವಿಧಾನಸಭಾ ಅಧಿವೇಶನದಲ್ಲಿಂದು ಮಾಡಿದ ಮನವಿಗೆ ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್ ಸಕಾರಾತ್ಮಕವಾಗಿ ಸ್ಪಂದಿಸಿದರು.

ವಿಧಾನಸಭೆ ಅಧಿವೇಶನದಲ್ಲಿ ಮಾತನಾಡಿದ ಶಾಸಕ ಟಿ.ಎಸ್.ಶ್ರೀವತ್ಸ, ನಂದಿನಿ ಹಾಲು ಹಾಗೂ ಉತ್ಪನ್ನಗಳ ಮಾರಾಟಗಾರರು ಬೆಳಗ್ಗೆ ಮೂರ್‍ನಾಲ್ಕು ಗಂಟೆಗೆ ಎದ್ದು ಕಾರ್ಯನಿರ್ವಹಿಸುತ್ತಾರೆ. ಒಂದು ದಿನವೂ ರಜೆ ಇಲ್ಲದೇ ಕೆಲಸ ಮಾಡುತ್ತಾರೆ. ಇಂತಹ ಶ್ರಮಿಕ ವರ್ಗಕ್ಕೆ ಜೀವನಕ್ಕೆ ಭದ್ರತೆ ಇಲ್ಲ. ಅನಾರೋಗ್ಯ ಇದ್ದರೆ ಅವರ ಕುಟುಂಬ ಸದಸ್ಯರನ್ನು ಕೂರಿಸಿ ವ್ಯಾಪಾರ ಮಾಡಿಸುತ್ತಾರೆ. ಮಕ್ಕಳಿಗೆ ಜ್ವರ ಬಂದರೂ ವೈದ್ಯರಲ್ಲಿಗೆ ಕರೆದುಕೊಂಡು ಹೋಗಲು ಸಾಕಷ್ಟು ಸಮಯದಲ್ಲಿ ತೊಂದರೆ ಅನುಭವಿಸುತ್ತಾರೆ. ಹೀಗೆ ಶ್ರಮಿಸುವ ಈ ವರ್ಗಕ್ಕೆ ಆರೋಗ್ಯ ವಿಮೆ, ಜೀವ ವಿಮೆ ಯೋಜನೆ ರೂಪಿಸಬೇಕು. ಜೊತೆಗೆ ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡಲು ಪ್ರೌಢಶಾಲಾ ಹಂತದಲ್ಲಿ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯ ನೀಡಬೇಕು ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್, ನಮ್ಮಲ್ಲಿ ಈಗ ಹಾಲು ಉತ್ಪಾದಕರಿಗೆ ವಿಮೆ ಮಾಡಿಸುವ ಕಾರ್ಯಕ್ರಮ ಇದೆ. ಜೊತೆಗೆ ಅವರಲ್ಲಿ 60 ವರ್ಷ ಮೇಲ್ಪಟ್ಟವರು ನಿಧನ ಹೊಂದಿದರೆ, ಪರಿಹಾರ ಕೊಡುವ ವ್ಯವಸ್ಥೆಯೂ ಇದೆ. ಆದರೆ ನಂದಿನಿ ಹಾಲು ಮಾರಾಟ ಮಳಿಗೆದಾರರಿಗೆ (ಏಜೆಂಟ್ಸ್) ಈ ರೀತಿಯಲ್ಲಿ ಸೌಲಭ್ಯ ಇಲ್ಲ. ತಾವು ಈಗ ಪ್ರಸ್ತಾಪ ಮಾಡಿದ್ದೀರಿ. ಮೈಸೂರು ಒಕ್ಕೂಟಕ್ಕೆ ಸೀಮಿತವಾಗಿ ಇಂತಹ ಸೌಲಭ್ಯ ನೀಡಲು ಬರುವುದಿಲ್ಲ. ರಾಜ್ಯ ಮಟ್ಟದಲ್ಲಿ ಕಾರ್ಯಕ್ರಮ ರೂಪಿಸಲು ಚಿಂತಿಸಲಾಗುವುದು ಎಂದು ಭರವಸೆ ನೀಡಿದರು.

ಬಳಿಕ ಮುಂದುವರೆದು ಮಾತನಾಡಿದ ಶ್ರೀವತ್ಸ, ಸಾಮಾನ್ಯವಾಗಿ ಇವರು ನಿರುದ್ಯೋಗಿಗಳಾಗಿ ಹೀಗೆ ನಂದಿನಿ ಹಾಲು ಉತ್ಪನ್ನಗಳ ಮಾರಾಟ ಮಳಿಗೆ ಮಾಡಿಕೊಂಡಿರುತ್ತಾರೆ. ತಾವು ಹೇಳಿದಂತೆ ಇಡೀ ರಾಜ್ಯ ಮಟ್ಟದಲ್ಲಿ ಅವರ ಶ್ರೇಯೋಭಿವೃದ್ಧಿಗೆ ಯೋಜನೆ ರೂಪಿಸಬೇಕು ಎಂದು ಕೋರಿದರು.

ರಾಸಲೀಲೆ ವಿಡಿಯೋ ವೈರಲ್ ಬೆನ್ನಲ್ಲೇ ಸಾಧ್ವಿ ಪ್ರೇಮ್ ಬೈಸಾ ನಿಗೂಢ ಸಾವು!



ಜೈಪುರ, ಜ.29– ರಾಜಸ್ಥಾನದ ಜೋಧ್‌ಪುರದ ಬೋರನಾಡ ಆಶ್ರಮದ ಖ್ಯಾತ ಧಾರ್ಮಿಕ ಪ್ರಚಾರಕಿ ಸಾಧ್ವಿ ಪ್ರೇಮ್ ಬೈಸಾ ಅವರು ಕುಸಿದುಬಿದ್ದು ನಿಗೂಢವಾಗಿ ಸಾವಿಗೀಡಾಗಿದ್ದಾರೆ. ಪ್ರೇಮ್ ಬೈಸಾ ಅವರ ಹಠಾತ್ ಸಾವು ಸಂತ ಸಮುದಾಯ ಮತ್ತು ಅವರ ಅನುಯಾಯಿಗಳಿಗೆ ಆಘಾತ ನೀಡಿದೆ.

25 ವರ್ಷದ ಸಾಧ್ವಿ ಪ್ರೇಮ್ ಬೈಸಾ ಅವರು ಬುಧವಾರ ನಿಗೂಢ ರೀತಿಯಲ್ಲಿ ಸಾವನ್ನಪ್ಪಿದ್ದು, ಅವರ ಸಾವಿನ ನಾಲ್ಕು ಗಂಟೆಗಳ ನಂತರ ಅವರ ಸೋಶಿಯಲ್ ಮೀಡಿಯಾ ಅಕೌಂಟ್‌ನಲ್ಲಿ ನ್ಯಾಯಕ್ಕಾಗಿ ಒತ್ತಾಯಿಸುವ ಪೋಸ್ಟ್ ಪ್ರಕರಣವನ್ನು ಇನ್ನಷ್ಟು ಜಟಿಲಗೊಳಿಸಿದೆ. ಪೊಲೀಸರು ಈ ಬಗ್ಗೆ ತನಿಖೆ ನಡೆಸುತ್ತಿದ್ದಾರೆ.

ನಿನ್ನೆ ಸಂಜೆ ಕುಸಿದು ಬಿದ್ದ ಸಾಧ್ವಿ ಅವರನ್ನು ಕೂಡಲೇ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಆದರೆ, ಆಸ್ಪತ್ರೆಗೆ ತಲುಪುವಷ್ಟರಲ್ಲಿ ಆಕೆ ಮೃತಪಟ್ಟಿದ್ದಾಳೆ ಎಂದು ವೈದ್ಯರು ತಿಳಿಸಿದ್ದಾರೆ.

ನಿನ್ನೆ ಸಂಜೆ ಸುಮಾರು 6 ಗಂಟೆಗೆ ಸಾಧ್ವಿಯನ್ನು ಕಾರಿನಲ್ಲಿ ಆಸ್ಪತ್ರೆಗೆ ಕರೆತರಲಾಗಿತ್ತು. ವೈದ್ಯರು ಪರೀಕ್ಷಿಸಿದ ನಂತರ ಆಕೆ ಮೃತಪಟ್ಟಿದ್ದಾಳೆ. ಸಾವಿನ ಕಾರಣವನ್ನು ಖಚಿತಪಡಿಸಿಕೊಳ್ಳಲು ಮೃತದೇಹವನ್ನು ಸರ್ಕಾರಿ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಾಥಮಿಕ ತನಿಖೆಯ ಪ್ರಕಾರ, ಸಾಧ್ವಿ ಜ್ವರದಿಂದ ಬಳಲುತ್ತಿದ್ದರು ಮತ್ತು ಆಶ್ರಮದಲ್ಲೇ ಚಿಕಿತ್ಸೆ ಪಡೆಯುತ್ತಿದ್ದರು. ಆಶ್ರಮಕ್ಕೆ ಕರೆಸಲಾಗಿದ್ದ ಕಾಂಪೌಂಡರ್ ನೀಡಿದ ಇಂಜೆಕ್ಷನ್ ನಂತರ ಆಕೆ ಕುಸಿದು ಬಿದ್ದಿದ್ದಳು ಎಂದು ಪೊಲೀಸರು ತಿಳಿಸಿದ್ದಾರೆ. ಆಶ್ರಮದಲ್ಲೇ ಆಕೆಗೆ ಔಷಧೋಪಚಾರ ನೀಡಲಾಗುತ್ತಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ. ಈ ಸುದ್ದಿ ಆಶ್ರಮದಲ್ಲಿ ದೊಡ್ಡ ಮಟ್ಟದ ಪ್ರತಿಭಟನೆಗೆ ಕಾರಣವಾಗಿದೆ. ಸಾವಿರಾರು ಭಕ್ತರು ಜಮಾಯಿಸಿ, ನ್ಯಾಯಯುತ ಮತ್ತು ಪಾರದರ್ಶಕ ತನಿಖೆಗೆ ಆಗ್ರಹಿಸಿದ್ದಾರೆ.

ಇನ್‌ಸ್ಟಾಗ್ರಾಮ್ ನಲ್ಲಿ ಪೋಸ್ಟ್: ಸಾಧ್ವಿ ಮೃತಪಟ್ಟ ಕೆಲವು ಗಂಟೆಗಳ ನಂತರ ಸಾಧ್ವಿಯ ಅಧಿಕೃತ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಒಂದು ಪೋಸ್ಟ್ ಕಾಣಿಸಿಕೊಂಡಿದ್ದು, ಇದು ಹೆಚ್ಚಿನ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಪೊಲೀಸರ ಪ್ರಕಾರ, ಈ ಪೋಸ್ಟ್ ಒಂದು ಆತ್ಮಹತ್ಯೆ ಪತ್ರವಾಗಿದ್ದು, ಅದರಲ್ಲಿ ಅವರು 'ಅಗ್ನಿಪರೀಕ್ಷೆ'ಯ ಬಗ್ಗೆ ಉಲ್ಲೇಖಿಸಿದ್ದಾರೆ. ತನಗೆ ಆ ಅವಕಾಶ ಸಿಗಲಿಲ್ಲ ಎಂದು ಹೇಳಿಕೊಂಡಿರುವ ಆಕೆ, ತಾನು ಮರಣ ಹೊಂದಿದ ನಂತರವಾದರೂ ನ್ಯಾಯ ಸಿಗುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರಾಸಲೀಲೆ ವಿಡಿಯೋ ವೈರಲ್: ಕಳೆದ ವರ್ಷ ಜುಲೈನಲ್ಲಿ ತನ್ನ ಗುರು ಹಾಗೂ ತಂದೆಗೆ ಸಮಾನವಾದ ಸ್ವಾಮೀಜಿಯನ್ನು ತಬ್ಬಿಕೊಂಡು, ಮುತ್ತುಕೊಡುತ್ತಿರುವ ವೀಡಿಯೊ ವೈರಲ್ ಆಗಿತ್ತು ಈ ವೀಡಿಯೊ ಹೊರಬಂದ ಬಳಿಕ ಸಾಧ್ವಿಗೆ ಪ್ರತಿದಿನ ಚಿತ್ರಹಿಂಸೆ ನೀಡಲಾಗುತ್ತಿತ್ತು ಎನ್ನಲಾಗಿದೆ. ಈ ಸಂಬಂಧ ಪ್ರಕರಣವನ್ನೂ ದಾಖಲಿಸಲಾಯಿತು. ನಂತರ ಸಾಧ್ವಿ ತನ್ನ ಮುಗ್ಧತೆಯನ್ನು ಸಾಬೀತುಪಡಿಸಲು ಯಾವುದೇ ಕಠಿಣ ಪರೀಕ್ಷೆಗೆ ಒಳಗಾಗಲು ಸಿದ್ಧನಿದ್ದೇನೆ ಎಂದು ಸಾರ್ವಜನಿಕವಾಗಿ ಹೇಳಿದ್ದರು.

ಗಾಂಧಿನಗರ ಆರೋಗ್ಯ ಕೇಂದ್ರಕ್ಕೆ ಖಾಯಂ ವೈದ್ಯರ ನಿಯೋಜಿಸಲು ದಲಿತ ಪ್ಯಾಂಥರ್ಸ್ ಮನವಿ


ಮೈಸೂರಿನ ಗಾಂಧಿನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಮರ್ಪಕ ಸೇವೆಗೆ ಆಗ್ರಹಿಸಿ ಕರ್ನಾಟಕ ದಲಿತ ಪ್ಯಾಂಥರ್ಸ್ ವತಿಯಿಂದ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು, ಜ.29– ಮೈಸೂರಿನ ಗಾಂಧಿನಗರದ ಐದನೇ ಕ್ರಾಸ್‌ನಲ್ಲಿರುವ 'ನಗರ ಪ್ರಾಥಮಿಕ ಆರೋಗ್ಯ ಕೇಂದ್ರ'ದಲ್ಲಿ ಖಾಯಂ ವೈದ್ಯರನ್ನು ನಿಯೋಜಿಸಿ, ಸಮರ್ಪಕ ವೈದ್ಯಕೀಯ ಸೇವೆ ಕಲ್ಪಿಸುವಂತೆ ಕರ್ನಾಟಕ ದಲಿತ ಪ್ಯಾಂಥರ್ಸ್ ಸಂಘಟನೆಯು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಗೆ ಮನವಿ ಸಲ್ಲಿಸಿತು.

ಗಾಂಧಿನಗರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಳೆದ ಆರು ತಿಂಗಳಿಂದ ಖಾಯಂ ವೈದ್ಯರು ಹಾಗೂ ಅಗತ್ಯ ಸಿಬ್ಬಂದಿ ಇಲ್ಲ. ವೈದ್ಯಕೀಯ ಪರೀಕ್ಷಾ ಉಪಕರಣಗಳು ಹಾಗೂ ಔಷಧಗಳನ್ನೂ ಸಮರ್ಪಕವಾಗಿ ಪೂರೈಸುತ್ತಿಲ್ಲ. ಪರಿಣಾಮ ಹತ್ತು ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ, ಪ್ರಮುಖವಾಗಿ ಕಾರ್ಮಿಕ ವರ್ಗದವರೇ ಹೆಚ್ಚಾಗಿ ವಾಸಿಸುವ ಈ ಪ್ರದೇಶ ಆರೋಗ್ಯ ಸೇವೆಯಿಂದ ವಂಚಿತವಾಗಿದೆ.

ಗಾಂಧಿನಗರ 27, 28 ಹಾಗೂ 29ನೇ ವಾರ್ಡ್‌ಗಳನ್ನು ಒಳಗೊಂಡಿದೆ. ಆದರೆ ಇಲ್ಲಿನ ಆರೋಗ್ಯ ಕೇಂದ್ರ ವ್ಯಾಪ್ತಿಗೆ 14ನೇ ವಾರ್ಡ್ ಸತ್ಯನಗರ ಹಾಗೂ 34ನೇ ವಾರ್ಡ್ ಗಾಯತ್ರಿಪುರಂ ಬಡಾವಣೆಯನ್ನೂ ಸೇರ್ಪಡೆ ಮಾಡಿರುವುದರಿಂದ ಸ್ಥಳೀಯರು ವೈದ್ಯಕೀಯ ಸೇವೆಗೆ ಗಂಟೆಗಟ್ಟಲೆ ಕಾಯುವಂತಾಗಿದೆ. ಆದ್ದರಿಂದ ಈ ವಿಸ್ತರಣೆಯನ್ನು ರದ್ದು ಮಾಡಿ, ಗಾಂಧಿನಗರ ಆರೋಗ್ಯ ಕೇಂದ್ರಕ್ಕೆ ಖಾಯಂ ವೈದ್ಯರು ಹಾಗೂ ಸಿಬ್ಬಂದಿಯನ್ನು ನಿಯೋಜಿಸುವುದರ ಜೊತೆಗೆ ಸಮರ್ಪಕ ವೈದ್ಯಕೀಯ ಸೇವೆ ಕಲ್ಪಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಆರೋಗ್ಯ ಮತ್ತು ಕುಟುಂಬ ಇಲಾಖೆ ಕಚೇರಿಗೆ ಮನವಿ ಸಲ್ಲಿಸಿದ ವೇಳೆ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಕಿರಣ್‌ಕುಮಾರ್, ವಕೀಲ ಅರವಿಂದ್, ನಾಗಣ್ಣ, ಧನಲಕ್ಷ್ಮೀ, ಅನುಪಮ, ಜವರಪ್ಪ, ಸಂತೋಷ್, ನವೀನ್ ಇದ್ದರು.

ಮೈಸೂರು ವಿವಿ ಕುಲಪತಿ ವಿರುದ್ಧ ಮಾನನಷ್ಟ ಮೊಕದ್ದಮೆ ನೋಟಿಸ್


ಚಂದ್ರಶೇಖರ್

ಮೈಸೂರು, ಜ.29– ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರೊಬ್ಬರು, ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಲು ನಿರ್ಧರಿಸಿ, ನೋಟಿಸ್ ಜಾರಿಗೊಳಿಸಿದ್ದಾರೆ.

ಈ ಕುರಿತು ಮಾಹಿತಿ ನೀಡಿರುವ ಸದರಿ ಸಿಂಡಿಕೇಟ್ ಸದಸ್ಯ ಡಾ.ಟಿ.ಆರ್.ಚಂದ್ರಶೇಖರ್, ನಾನು ರಾಜ್ಯಪಾಲರಿಂದ ನಾಮನಿರ್ದೇಶನಗೊಂಡಿದ್ದೇನೆ. ಕುಲಪತಿ ಪ್ರೊ.ಲೋಕನಾಥ್, ಕಳೆದ ಡಿ.19ರ ಸಿಂಡಿಕೇಟ್ ಸಭೆಯಲ್ಲಿ ನನ್ನ ವಿರುದ್ಧದ ನೋಟಿಸ್ ಅನ್ನು ಓದಿ ಜಾರಿಗೊಳಿಸಿರುವುದು ಗಂಭೀರ ಹಾಗೂ ಅಧಿಕಾರ ಮೀರಿದ, ಜೊತೆಗೆ ಕಾನೂನುಬಾಹಿರ ಕ್ರಮವಾಗಿದೆ. ಆದ್ದರಿಂದ ಸಾರ್ವಜನಿಕ ಅವಮಾನ, ಅಪಕೀರ್ತಿಕರ ಭಾಷೆ ಹಾಗೂ ಅಧಿಕಾರದ ದುರ್ಬಳಕೆ ಹಿನ್ನೆಲೆಯಲ್ಲಿ 1 ಕೋಟಿ ರೂ. ಮಾನನಷ್ಟ ಮೊಕದ್ದಮೆ ಹೂಡಲು ನಿರ್ಧರಿಸಿ ನೋಟಿಸ್ ಕಳುಹಿಸಿರುವುದಾಗಿ ತಿಳಿಸಿದ್ದಾರೆ.

ಡಬ್ಲ್ಯೂಪಿಎಲ್–2026; ಯುಪಿ ವಾರಿಯರ್ಸ್ ವಿರುದ್ಧ ಗೆದ್ದು ಫೈನಲ್ಸ್‌ಗೆ ಲಗ್ಗೆಯಿಟ್ಟ ಆರ್‌ಸಿಬಿ



ಗ್ರೇಸ್ ಹ್ಯಾರೀಸ್ ಮತ್ತು ಸ್ಮೃತಿ ಮಂದಾನ ಬ್ಯಾಟಿಂಗ್ ವೈಖರಿ

ವಡೋದರ, ಜ.29(ವಿವಿಹೆಚ್)– ನಾಡಿನ್ ಡಿ ಕ್ಲೆರ್ಕ್ ಅಮೋಘ ಬೌಲಿಂಗ್ ದಾಳಿ, ನಾಯಕಿ ಸ್ಮೃತಿ ಮಂದಾನ ಹಾಗೂ ಗ್ರೇಸ್ ಹ್ಯಾರೀಸ್ ಅವರ ಭರ್ಜರಿ ಬ್ಯಾಟಿಂಗ್ ಬಲದಿಂದ ಯುಪಿ ವಾರಿಯರ್ಸ್ ತಂಡವನ್ನು 8 ವಿಕೆಟ್‌ಗಳಿಂದ ಮಣಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡ ಡಬ್ಲ್ಯೂಪಿಎಲ್ (ಮಹಿಳಾ ಪ್ರೀಮಿಯರ್ ಲೀಗ್) ನಾಲ್ಕನೇ ಆವೃತ್ತಿಯಲ್ಲಿ ಫೈನಲ್ಸ್‌ಗೆ ಲಗ್ಗೆಯಿಟ್ಟಿತು.

ಇಲ್ಲಿನ ಕೋಟಂಬಿ ಬಿಸಿಎ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಯುಪಿ ವಾರಿಯರ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 143 ರನ್ ಗಳಿಸಿತು. ಈ ಸಾಧಾರಣ ಮೊತ್ತ ಬೆನ್ನತ್ತಿದ ಆರ್‌ಸಿಬಿ 13.1 ಓವರ್‌ಗಳಲ್ಲಿ ಕೇವಲ 2 ವಿಕೆಟ್ ಕಳೆದುಕೊಂಡು 147 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಸಾಧಾರಣ ಗುರಿ ಬೆನ್ನತ್ತಿದ್ದ ಆರ್‌ಸಿಬಿಗೆ ಗ್ರೇಸ್ ಹ್ಯಾರೀಸ್, ಸ್ಮೃತಿ ಭರ್ಜರಿ ಆರಂಭ ಒದಗಿಸಿದರು. ಹ್ಯಾರಿಸ್ ಕೇವಲ 37 ಎಸೆತ ಎದುರಿಸಿ 13 ಬೌಂಡರಿ, 2 ಸಿಕ್ಸರ್ ಸಹಿತ 75 ರನ್ ಚಚ್ಚಿ, ತಂಡದ ಗೆಲುವನ್ನು ಸುಲಭವಾಗಿಸಿ ಪೆವಿಲಿಯನ್ ಸೇರಿದರು. ಇತ್ತ ನಾಯಕಿ ಸ್ಮೃತಿ ಅಜೇಯರಾಗಿ ಉಳಿದು 26 ಎಸೆತಗಳಲ್ಲಿ 7 ಬೌಂಡರಿ, 2 ಸಿಕ್ಸರ್ ಸಹಿತ 50 ರನ್ ಗಳಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು. ಉಳಿದಂತೆ ಜಾರ್ಜಿಯಾ ವೋಲ್ 16 ರನ್ ಗಳಿಸಿದರೆ, ರಿಚಾ ಘೋಷ್ ಖಾತೆ ತೆರೆಯದೆ ಕ್ರೀಸ್‌ನಲ್ಲಿದ್ದರು. ಯುಪಿ ಪರ ಶಿಖಾ ಪಾಂಡೆ, ಆಶಾ ಶೋಭನಾ ತಲಾ ಒಂದೊಂದು ವಿಕೆಟ್ ಕಿತ್ತರು.

ಇದಕ್ಕೂ ಮೊದಲು ಬ್ಯಾಟ್ ಮಾಡಿದ ಯುಪಿ ತಂಡಕ್ಕೆ ನಾಯಕಿ ಮೆಗ್ ಲೆನಿನ್ (41 ರನ್), ಹಾಗೂ ದೀಪ್ತಿ ಶರ್ಮಾ (55) ಉತ್ತಮ ಆರಂಭ ಒದಗಿಸಿದರು.

ಇವರ ಬಳಿಕ ಬಂದ ಬೇರಾರಿಂದಲೂ ನಿರೀಕ್ಷಿತ ಆಟ ಕಂಡುಬರದ ಕಾರಣ ತಂಡ ದಿಢೀರ್ ಕುಸಿತ ಕಂಡಿತು. ಹರ್ಲೀನ್ ಡಿಯೋಲ್ 14, ಸಿಮ್ರಾನ್ 10 ರನ್ ಗಳಿಸಿ ಉಳಿದವರೆಲ್ಲಾ ಒಂದಂಕಿ ಮೊತ್ತಕ್ಕೆ ವಿಕೆಟ್ ಒಪ್ಪಿಸಿ ಹೊರನಡೆದರು.

ಆರ್‌ಸಿಬಿ ಪರ ಕರಾರುವಾಕ್ಕಾದ ಬೌಲಿಂಗ್ ದಾಳಿ ನಡೆಸಿದ ನಾಡಿನ್ ಡಿ ಕ್ಲೆರ್ಕ್ 4 ಓವರ್‌ಗಳಲ್ಲಿ 22 ರನ್ ಬಿಟ್ಟುಕೊಟ್ಟು ಪ್ರಮುಖ 4 ವಿಕೆಟ್ ಕಬಳಿಸಿದರು. ಗ್ರೇಸ್ ಹ್ಯಾರೀಸ್ 2, ಲೌರೆನ್ ಬೆಲ್ ಹಾಗೂ ಶ್ರೇಯಾಂಕಾ ಪಾಟೀಲ್ ತಲಾ ಒಂದೊಂದು ವಿಕೆಟ್ ಪಡೆದು ಮಿಂಚಿದರು.

ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಸ್ಥಿರ ಪ್ರದರ್ಶನ ತೋರಿ ತಂಡದ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದ ಗ್ರೇಸ್ ಹ್ಯಾರೀಸ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.


JANUARY
31
HAPPY BIRTHDAY
ಜೆ.ಡಿ.ಎಸ್ ಶಾಸಕಾಂಗ ಪಕ್ಷದ ಮುಖ್ಯ ಸಚೇತಕರು ಹಾಗೂ ಹುಣಸೂರು ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ
ಶ್ರೀ ಜಿ.ಡಿ ಹರೀಶ್ ಗೌಡ ರವರಿಗೆ
ಜನ್ಮ ದಿನದ ಶುಭಾಶಯಗಳು
8050302424
ದಿನಾಂಕ 31.01.2026ರ ಶನಿವಾರ ಬೆಳಗ್ಗೆ9 ಗಂಟೆಯಿಂದ
ಬೋಗಾದಿ ರಿಂಗ್ ರಸ್ತೆಯ ನಾಗಲಿಂಗೇಶ್ವರ- ಬೋಗೇಶ್ವರ ದೇವಸ್ಥಾನದ ಹತ್ತಿರ
ಜಿ.ಡಿ. ಹರೀಶ್‌ಗೌಡರ ಅಭಿಮಾನಿ ಬಳಗದ ವತಿಯಿಂದ
ಹುಟ್ಟುಹಬ್ಬದ ಆಚರಣೆಯನ್ನು ಹಮ್ಮಿಕೊಳ್ಳಲಾಗಿದ್ದು, ಸರ್ವರಿಗೂ ಸುಸ್ವಾಗತ.